ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 04
ಜನವರಿ 27, 2013


ಪುಟ 16 ರೂ. 10/-






ವಿವೇಕಾನಂದ-ಕುವೆಂಪು

ಜೋಡಿ ವಿಚಾರ ವಾಹಿನಿಯ ಮುಂಬೆಳಗು





'ಪಿ. ಸುಂದರಯ್ಯ'

ದಲಿತ-ಕೃಷಿ ಕೂಲಿಕಾರರ ಸಂಘಟನೆಯ ಪ್ರವರ್ತಕ



'ಧರ್ಮಪುರಿ' ಎಂಬಲ್ಲಿ ಹೀನಾಯ ಜಾತಿವಾದಿ ಕ್ರೌರ್ಯ

'ಬೀದಿಗೆ ತಳ್ಳಬೇಡಿ....' ಬೆಂಗಳೂರಿನ ನರ್ಸ್‌ಗಳ ಕೂಗು





ವೇತನಕ್ಕಾಗಿ ಗ್ರಾಮಪಂಚಾಯತ್ ನೌಕರರ ಅನಿರ್ದಿಷ್ಟ ಹೋರಾಟ

ಜನಾರೋಗ್ಯ ನೀತಿಯ ರಾಜಕೀಯ

ಹೊಸ ಹೊಸ ಅತ್ಯಾಧುನಿಕ ಖಾಸಗೀ ಆಸ್ಪತ್ರೆಗಳು ಪರೀಕ್ಷಾ ಕೇಂದ್ರಗಳನ್ನೂ ಎಲ್ಲಡೆಯೂ ನೋಡುತ್ತಿದ್ದೇವೆ. ಸರ್ಕಾರೀ ಆಸ್ಪತ್ರೆಗಳು ಆರೋಗ್ಯ ಕೇಂದ್ರಗಳು ಶಿಥಿಲವಾಗುತ್ತಿವೆ. ಆರೋಗ್ಯವಂದಾಕ್ಷಣ ಆರೋಗ್ಯ ಕೇಂದ್ರಗಳು ಹೆಚ್ಚುವುದು ಎಂದು ಭಾವಿಸುವವರಿಗೆ, ಆರೋಗ್ಯ ಪರಿಸ್ಥಿತಿ ಉತ್ತಮವಾಗಿದೆ ಎಂದು ಅನಿಸುವುದು ಸಹಜ. ಆದರೆ ಸರಕಾರಿ ಆರೋಗ್ಯ ಕೇಂದ್ರಗಳು ಶಿಥಿಲವಾಗುವುದನ್ನು ನೋಡಿ, ಖಾಸಗಿ ಆರೋಗ್ಯ ವ್ಯವಸ್ಥೆ ಉತ್ತಮವಾಗುತ್ತಿದೆ ಎಂದು ತೀರ್ಮಾನಕ್ಕೆ ಬರುವಂತಾಗುತ್ತಿದೆ.

ಖಾಸಗಿ ವ್ಯವಸ್ಥೆ ಜನಾರೋಗ್ಯ ಸುಧಾರಿಸಬಲ್ಲದೇ?

ಜನಾರೋಗ್ಯ ಸುಧಾರಿಸಲು ಜನಪರ, ವೈಜ್ಞಾನಿಕವಾದ ಆರೋಗ್ಯ ನೀತಿಬೇಕು. ಆ ನೀತಿ ಸಮಗ್ರ ಪ್ರಾಥಮಿಕ ಆರೋಗ್ಯ ಪಾಲನೆಯನ್ನು ಬಲಪಡಿಸುವಂತಹದ್ದಾಗಿರಬೇಕು. ವೈದ್ಯಕೀಯ ಸೇವೆಗಳು ಕೇವಲ ಆಧುನಿಕ ವೈದ್ಯ ಪದ್ಧತಿಯನ್ನಲ್ಲದೇ, ಸಾಂಪ್ರದಾಯಿಕ ಪದ್ಧತಿಗಳನ್ನು ನೀಡುವಂತಿರಬೇಕು. ಆರೋಗ್ಯ ಸೇವೆಗಳು ಗ್ರಾಮೀಣ ಪ್ರದೇಶದಲ್ಲಿಯೂ ಸುಲಭವಾಗಿ ದೊರಕುವಂತಿರಬೇಕು. ಆರೋಗ್ಯ ನೀತಿ ಜನಾರೋಗ್ಯ ಸುಧಾರಿಸಲು, ಆರೋಗ್ಯ ನಿರ್ಧಾರಕಗಳು ಜನರಿಗೆ ದೊರಕುವಂತೆ ಮಾಡಲು ಸರ್ಕಾರದ ವಿವಿಧ ಇಲಾಖೆಗಳೊಂದಿಗೆ ಹೊಂದಾಣಿಕೆಯಿಂದ ಕೆಲಸ ಮಾಡುವಂತಿರಬೇಕು. ಇದೆಲ್ಲ ಸಾಧ್ಯವಾಗಲು ರಾಜಕೀಯ ಒಲವು ಅಗತ್ಯ ನಮ್ಮ ದೇಶದಲ್ಲಿ ಜನಾರೋಗ್ಯದ ರಾಜಕೀಯವನ್ನು ಅವಲೋಕಿಸೋಣವೇ.



ಸ್ವಾತಂತ್ರ ಪೂರ್ವದಲ್ಲಿ :

ನಮ್ಮಲ್ಲಿ ಮಲೇರಿಯಾ ಹಾಗೂ ಇತರೇ ಸಾಂಕ್ರಾಮಿಕ ರೋಗಗಳು ವ್ಯಾಪಕವಾಗಿದ್ದವು. ಅಪೌಷ್ಠಿಕತೆಯಿಂದಾಗಿ ಸಾವು, ನೋವುಗಳು ಸಾಮಾನ್ಯವಾಗಿದ್ದವು. ಆರೋಗ್ಯ ಸೇವೆಗಳು ಗ್ರಾಮೀಣ ಪ್ರದೇಶದಲ್ಲಿ ಇರಲಿಲ್ಲವೆಂದರೆ ತಪ್ಪಾಗಲಾರದು. ಆದರೆ ಸ್ವಾತಂತ್ರ ಪೂರ್ವದಲ್ಲೇ ನಮ್ಮ ಸ್ವಾತಂತ್ರ್ಯ ಹೋರಾಟಗಾರರು, ಒಳ್ಳೆಯ ಆರೋಗ್ಯ ಸೇವೆಗಳ ಕನಸನ್ನು ಕಂಡಿದ್ದರು.

1940 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ರಾಷ್ಟ್ರೀಯ ಯೋಜನಾ ಸಮಿತಿಯಲ್ಲಿ, ಜನಾರೋಗ್ಯ ಸುಧಾರಿಸಲು ಒಂದು ರಾಷ್ಟ್ರೀಯ ಆರೋಗ್ಯ ಸಮಿತಿ (ಸೋಖೇ) ಇತ್ತು. ಈ. ಸಮಿತಿ 1000 ಜನರಿಗೊಬ್ಬ ಸಮುದಾಯ ಆರೋಗ್ಯ ಕಾರ್ಯಕರ್ತ (Community Health Worker) ಪರಿಕಲ್ಪನೆ ಹೊಂದಿತ್ತು. ವೈದ್ಯರ ಸಂಖ್ಯೆ ಕಡಿಮೆ ಇತ್ತು ಹಾಗೂ ಜನಾರೋಗ್ಯ ಸುಧಾರಿಸಲು ಸಮುದಾಯ ಆರೋಗ್ಯ ಕಾರ್ಯಕರ್ತ ಪರಿಣಾಮಕಾರಿಯಾಗ ಬಲ್ಲ ಎಂಬ ಆಧಾರದ ಮೇಲೆ ಈ ಸಮುದಾಯ ಆರೋಗ್ಯ ಕಾರ್ಯಕರ್ತನ ತರಬೇತಿಗೆ ಆರೋಗ್ಯ ಸಮಿತಿ ತೀರ್ಮಾನಿಸಿತು. ಈ ಕಾರ್ಯಕರ್ತನಿಗೆ ವೈಯುಕ್ತಿಕ ನೈರ್ಮಲ್ಯ, ಪ್ರಥಮ ಚಿಕಿತ್ಸೆ, ಸುಲಭ ವೈದ್ಯಕೀಯ ಚಿಕಿತ್ಸೆಗಳ ಬಗ್ಗೆ ತಿಳಿಸಿಕೊಡುತ್ತಾ ಜನಾರೋಗ್ಯ ಸಾಧನೆಗೆ ಸಜ್ಜುಗೊಳಿಸುವ ತರಬೇತಿ ಕೊಡುವ ಉದ್ದೇಶವಿತ್ತು. ಈ ಸಮಿತಿ, ಆಯುರ್ವೇದ ಹಾಗೂ ಯುನಾನಿ ಪದ್ಧತಿಯ ವೈದ್ಯರನ್ನು ರಾಷ್ಟ್ರೀಯ ಆರೋಗ್ಯ ವ್ಯವಸ್ಥೆಯಲ್ಲಿ ಸೇರಿಸಿಕೊಳ್ಳುವ ಮುನ್ನೋಟವನ್ನು ಹೊಂದಿತ್ತು.



1946 ರಲ್ಲಿ ಭೋರ್‌ಸಮಿತಿ ಜನಾರೋಗ್ಯ ಸುಧಾರಿಸುವ ವರದಿಯನ್ನು ತಯಾರಿಸಿತು. ಈ ವರದಿ ಸೋಖೇ ಸಮಿತಿಯ ಅಂಶಗಳನ್ನು ಒಳಗೊಂಡಿತ್ತಲ್ಲದೇ "ಹಣ ಕೊಡಲು ಸಾಧ್ಯವಿಲ್ಲವೆಂಬ ಕಾರಣಕ್ಕಾಗಿ ಯಾರಿಗೂ ವೈದ್ಯಕೀಯ ಸೇವೆಗಳ ನಿರಾಕರಣೆಯಾಗ ಕೂಡದು" ಎಂಬ ಉದಾತ್ತ ತತ್ವಗಳನ್ನೊಳಗೊಂಡಿತ್ತು. ಈ ವರದಿ ಸಾರ್ವಜನಿಕ ವೈದ್ಯನನ್ನು "ತರಬೇತಿ ಗೊಳಿಸಲು ಒತ್ತು ಕೊಡುತ್ತ ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯಕೀಯ ಸೇವೆಗಳು ದೊರಕುವುದಲ್ಲದೇ, ರೋಗ ತಡೆಗಟ್ಟುವಿಕೆಗೂ ಪ್ರಮುಖ ಪಾತ್ರವಿದೆ" ಎಂದು ಹೇಳುತ್ತದೆ. ಭೋರ್ ಸಮಿತಿ ವರದಿ ಇಂದಿಗೂ ಪ್ರಸ್ತುತ ಎಂದು ಹೇಳಬಹುದಾಗಿದೆ.

1952ರಲ್ಲಿ ಭಾರತದಲ್ಲಿ ಜಾರಿಗೆ ಬಂದ ಆರೋಗ್ಯ ಸೇವೆಗಳ ಮಾದರಿ, ಭೋರ್ ವರದಿಯನ್ನು ಆಧರಿಸಿತ್ತು. ನಮ್ಮ ಜನರ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಜೀವನಾಧಾರಿತ ವ್ಯವಸ್ಥೆಗೆ ಅನುಗುಣವಾಗಿ ವೈದ್ಯಕೀಯ ಸೇವೆಗಳನ್ನು ಯೋಜಿಸಲಾಗಿತ್ತು. ಈ ಯೋಜನೆ ಪಾಶ್ಚಿಮಾತ್ಯ ಮಾದರಿಯನ್ನು ಬದಿಗಿಟ್ಟು, ಸ್ಥಳೀಯ ಅಗತ್ಯತೆಗೆ ಬೇಕಾದಂತಿತ್ತು. ಅಂದಿನಿಂದ ರೋಗ ಚಿಕಿತ್ಸೆ, ಪ್ರತಿಭಟನೆ ಹಾಗೂ ಪುನಶ್ಚೇತನ ವ್ಯವಸ್ಥೆಯಾಧಾರಿತ ಸೌಲಭ್ಯಗಳು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ದೊರಕುವಂತಾಯಿತು. ಇದೇ ಸಮಯದಲ್ಲಿ ಜನಾರೋಗ್ಯ ಸುಧಾರಣೆಗೆ ಮಹತ್ವ ಕೊಡುವ ಅಖಿಲ ಭಾರತ ನೈರ್ಮಲ್ಯ ಹಾಗೂ ಸಾರ್ವಜನಿಕ ಆರೋಗ್ಯ ಸಂಸ್ಥೆ, ಭಾರತೀಯ ಮಲೇರಿಯಾ ಸಂಸ್ಥೆ ರಾಷ್ಟ್ರೀಯ ಸಾಂಕ್ರಾಮಿಕ ರೋಗಗಳ ಸಂಸ್ಥೆ. ರಾಷ್ಟ್ರೀಯ ಆರೋಗ್ಯ ಆಡಳಿತ ಹಾಗೂ ಶಿಕ್ಷಣ ಸಂಸ್ಥೆ, ರಾಷ್ಟ್ರೀಯ ಕ್ಷಯ ರೋಗ ಸಂಸ್ಥೆ ಮುಂತಾದವುಗಳು ಸ್ಥಾಪನೆಯಾದವು. ಅದು ನಮ್ಮ ದೇಶದ ಆರೋಗ್ಯ ಸೇವೆಗಳ ಜಾಲದ ವ್ಯವಸ್ಥೆ ಯಾವುದೇ ಮುಂದುವರೆದ ದೇಶಗಳಿಗೆ ಹೋಲಿಸುವಂತಿತ್ತು. ಆದರೆ ಈ ಮಾದರಿ ಮುಂದುವರೆಯಲಿಲ್ಲ. ಇದೇ ಸಮಯದಲ್ಲಿ (1967–70) 'ಜನಸಂಖ್ಯಾ ಸ್ಫೋಟ' ಎಲ್ಲ ಸಮಸ್ಯೆಗಳಿಗೂ ಕಾರಣ ಎಂಬ ಪರಿಕಲ್ಪನೆಯನ್ನು ಹೊರದೇಶಗಳ ಮೂಲಗಳು ಹುಟ್ಟು ಹಾಕಿದವು. ಅದು ಭಾರತ ಸರ್ಕಾರದ ಮೇಲೆ ಪ್ರಭಾವ ಬೀರಿತು. ಅದರ ಪರಿಣಾಮವಾಗಿ ಆರೋಗ್ಯ ಇಲಾಖೆಯನ್ನು 'ಆರೋಗ್ಯ ಹಾಗೂ ಕುಟುಂಬ ಯೋಜನೆ ಇಲಾಖೆ'ಯಾಗಿ ಬದಲಾಯಿಸಲಾಯಿತು. ಅಂದಿನಿಂದ ಕುಟುಂಬ ಯೋಜನೆಗೆ ಸರಕಾರ ಮಹತ್ವ ನೀಡುತ್ತ ಬಂದಿದೆ. ಬಲವಂತ ಸಂತಾನ ಹರಣ ಶಸ್ತ್ರಚಿಕಿತ್ಸೆ, ಮಹಿಳೆಯರ ಮೇಲೆ ಸಂತಾನ ಹರಣ ಔಷಧಿಗಳ ಪ್ರಯೋಗ ಮುಂತಾದವುಗಳು ಇದರ ಪರಿಣಾಮದಿಂದಲೇ! ಕುಟುಂಬ ಯೋಜನೆಗೆ ಅಪಾರ ಹಣವನ್ನು ಖರ್ಚು ಮಾಡಲಾಗಿದೆ ಆದರೂ 1951 ರಿಂದ 2001 ರ ವರೆಗೆ ಭಾರತದ ಜನಸಂಖ್ಯೆ 35 ಕೋಟಿಯಿಂದ 100 ಕೋಟಿಗೆ ಏರಿರುವುದನ್ನು ಕಡೆಗಣಿಸುವಂತಿಲ್ಲ! ಇದರ ಪರಿಣಾಮವಾಗಿ ಆರೋಗ್ಯ ಕ್ಷೇತ್ರವನ್ನು ಕಡೆಗಣಿಸಲಾಯಿತು!

1978 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಜನಾರೋಗ್ಯ ಪರಿಸ್ಥಿತಿಯ ಚಿಂತಾಜನಕ ಪರಿಸ್ಥಿತಿಯನ್ನು ನೋಡಿ, ಅದರ ಅಧ್ಯಯನ ಮಾಡಿ ಜನಾರೋಗ್ಯ ಸುಧಾರಿಸಬಹುದಾದ ಕಾರ್ಯಕ್ರಮವನ್ನು ಜಾರಿಗೆ ತರಲು ಎಲ್ಲ ರಾಷ್ಟ್ರಗಳಿಗೆ ಕರೆಕೊಟ್ಟಿತು. ಅದೇ "2000ದ ಹೊತ್ತಿಗೆ ಎಲ್ಲರಿಗೂ ಆರೋಗ್ಯ" ಈ ಕಾರ್ಯಕ್ರಮ ಸಮಗ್ರ ಪ್ರಾಥಮಿಕ ಆರೋಗ್ಯ ಪಾಲನೆಯನ್ನು ಜಾರಿಗೆ ಬಂದರೆ "ಜನಾರೋಗ್ಯ ಜನರ ಕೈಯಲ್ಲಿದ್ದಂತೆ". ಎಂದು ಹೇಳಲಾಗುತ್ತಿತ್ತು. ಭಾರತ ಸರ್ಕಾರ ಈ ನೀತಿಯನ್ನು ಜಾರಿಗೆ ತರುವುದಾಗಿ ಸಹಿಹಾಕಿತು. ಈ ನೀತಿಯನ್ನು ಜಾರಿಗೆ ತರಲು 1983 ರಲ್ಲಿ ರಾಷ್ಟ್ರೀಯ ಆರೋಗ್ಯ ನೀತಿಯನ್ನು ಬಿಡುಗಡೆ ಮಾಡಿತು ಹಾಗೂ ಅದರಲ್ಲಿ ಈ ನೀತಿಯ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿತು. ಆದರೆ ಈ ಕಾರ್ಯಕ್ರಮ ಜಾರಿಗೆ ಬರಲು ಶ್ರೀಮಂತ ರಾಷ್ಟ್ರಗಳು ಅಡ್ಡಿ ಮಾಡಿದವು. ಸಮಗ್ರ ಆರೋಗ್ಯ ಪಾಲನೆಗೆ ಹೆಚ್ಚು ವೆಚ್ಚವಾಗುತ್ತದೆ. ಆದ್ದರಿಂದ ಬಡದೇಶಗಳು ಸಮಗ್ರ ಆರೋಗ್ಯ ಪಾಲನೆಯ ಬದಲು "ಆಯ್ದ ಪ್ರಾಥಮಿಕ ಆರೋಗ್ಯ" ಪಾಲನೆಯನ್ನು ಜಾರಿಗೆ ತರಲು ಪ್ರತಿಪಾದಿಸಿದವು ಹಾಗೂ ಒತ್ತಡ ತಂದವು. ಅಂದರೆ "ಆರೋಗ್ಯ ಕ್ಷೇತ್ರದ ಕೆಲವು ಸಮಸ್ಯೆಗಳಿಗಷ್ಟೇ ಗಮನಹರಿಸಿ" ಎಂದು ಅವು ಹೇಳಿವೆ. ಆಯ್ದ ಪ್ರಾಥಮಿಕ ಆರೋಗ್ಯ ಪಾಲನೆಗೆ ಯಾವ ವೈಜ್ಞಾನಿಕ ಆಧಾರವೂ ಇರಲಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದಾಗಿದೆ. ಅಂತರಾಷ್ಟ್ರೀಯ ಮಟ್ಟದ ಪ್ರತಿಷ್ಠಿತ ವೈದ್ಯಕೀಯ ನಿಯತಕಾಲಿಕೆಯಾದ "ನ್ಯೂ ಇಂಗ್ಲೆಂಡ್ ಜರ್ನಲ್ ಆಫ್ ಮೆಡಿಸಿನ್" (New England Journal of Medicine) ಆಯ್ದ ಪ್ರಾಥಮಿಕ ಆರೋಗ್ಯ ಪಾಲನೆಯನ್ನು "ಅತ್ಯುತ್ತಮ ಸಂಶೋಧನೆ" ಎಂದು ಹೇಳುತ್ತ ವೈಜ್ಞಾನಿಕ ಸತ್ಯವನ್ನು ತಿರುಚುವ ಪ್ರಯತ್ನ ಮಾಡಿದೆ. ಅದೇ ಸಮಯ ವಿಶ್ವ ಆರೋಗ್ಯ ಸಂಸ್ಥೆ, ಯುನಿಸೆಫ್, ವಿಶ್ವಬ್ಯಾಂಕ್ ಮುಂತಾದವುಗಳ ಭಾರತದ ಮೇಲೆ ಒತ್ತಡ ತಂದಿರುವುದು ಶೋಚನೀಯ. ಈ ಆಯ್ದ ಪ್ರಾಥಮಿಕ ಆರೋಗ್ಯ ಪಾಲನೆಯ ಕಾರ್ಯಕ್ರಮಕ್ಕೆ ಸಾವಿರಾರು ಕೋಟಿ ರೂಪಾಯಿ ಹಣ ಹೂಡಿಕೆ ಮಾಡಿದರು. ಗುರಿ ಸಾಧಿಸಲು ಸಾಧ್ಯವಾಗಲಿಲ್ಲವೆಂಬುದು ಈಗ ಸ್ಪಷ್ಟವಾಗಿದೆ. ರಾಷ್ಟ್ರೀಯ ಆರೋಗ್ಯ ನೀತಿ 2000 ಈ ವಿಷಯವನ್ನು ಒಪ್ಪಿಕೊಂಡಿದೆ.

90 ರ ದಶಕದ ಹೊತ್ತಿಗೆ ಭಾರತ ಜಾಗತೀಕರಣ ನೀತಿಗೆ ಒಪ್ಪಿಕೊಂಡಿತ್ತು. 92–93 ರ ಕೇಂದ್ರದ ಆರೋಗ್ಯ ಮುಂಗಡ ಪತ್ರದಲ್ಲಿ, 20 ಶೇ. ಕಡಿತ ಮಾಡಲಾಯಿತು. ಖಾಸಗಿ ಕ್ಷೇತ್ರವನ್ನು ಬರಮಾಡಿ ಕೊಳ್ಳಲಾಯಿತು.

ಅದರ ನಂತರ ಹಲವಾರು ಸಂಸ್ಥೆಗಳು ಆರೋಗ್ಯ ಕ್ಷೇತ್ರದ ಅಧ್ಯಯನ ಮಾಡಿ ಈ ಕೆಳಗಿನ ತೀರ್ಮಾನಕ್ಕೆ ಬಂದಿವೆ.

"ಯಾವುದೇ ಆರೋಗ್ಯ ಸೇವೆಗಳು ಸಮರ್ಪಕವಾಗಿಲ್ಲ" ಭಾರತ ಸರ್ಕಾರದ ಯೋಜನಾ ಆಯೋಗ

"ಮಾತೃಮರಣ ಸಂಖ್ಯೆ ಇತರೆ ದೇಶಗಳಿಗೆ ಹೋಲಿಸಿದಲ್ಲಿ ಅತಿ ಹೆಚ್ಚಾಗಿದೆ" ಭಾರತ ಸರ್ಕಾರದ ಕುಟುಂಬ ಆರೋಗ್ಯ ಸಮೀಕ್ಷೆ

"ಆರೋಗ್ಯ ಸೇವೆಗಳು ಸಂಪೂರ್ಣ ಕ್ಷೀಣಿಸುತ್ತಿವೆ" ವಲಂಟರಿ ಹೆಲ್ತ್ ಅಸೋಸಿಯೇಶನ್ ಆಫ್ ಇಂಡಿಯಾ

"ನಾಗಾಲ್ಯಾಂಡ್, ಹರಿಯಾನಾ, ಹೊರತುಪಡಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರಗಳು "ಬೆಳವಣಿಗೆ ಸೊನ್ನೆ" ಪಯೋನಿಯರ್ ವಾರಪತ್ರಿಕೆ.

2005 ಭಾರತದ ಒಟ್ಟು ಆರೋಗ್ಯ ಕ್ಷೇತ್ರದ ವೆಚ್ಚಗಳಲ್ಲಿ ಕೇವಲ ಶೇ. 20 ಮಾತ್ರ ಇಲ್ಲಿನ ಸರ್ಕಾರ ಖರ್ಚು ಭರಿಸುತ್ತಿದೆ. ಯುರೋಪ್ ದೇಶಗಳಿಗೆ ಹೋಲಿಸಿದರೆ (ಶೇ. 60) ಅದು

ಪುಟ 4 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಪಕ್ಷಗಳ ಸ್ವರೂಪ ರಾಷ್ಟ್ರೀಯವೇ ಅಥವ ಪ್ರಾದೇಶಿಕವೇ ಎಂಬುದು ಮುಖ್ಯವಲ್ಲ

ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿದ್ದಂತೆ ರಾಜ್ಯದಲ್ಲಿ ರಾಜಕೀಯ ಪಕ್ಷಗಳ ಸ್ವರೂಪ ಹೇಗಿರಬೇಕು ಎಂಬ ಪ್ರಶ್ನೆಯ ಸುತ್ತ ಮುಖ್ಯವಾಗಿ ಮಧ್ಯಮ ವರ್ಗದ ಸಮುದಾಯಗಳ ನಡುವೆ ಚರ್ಚೆಯೊಂದು ಆರಂಭವಾಗಿದೆ. ಈ ಚರ್ಚೆ ಸಾಮಾನ್ಯ ಮತದಾರರವರೆಗೆ ತಲುಪುವ ಲಕ್ಷಣಗಳು ಕಾಣದಿದ್ದರೂ ಇದೊಂದು ಅರ್ಥವಿಲ್ಲದ ಚರ್ಚೆ ಎಂದು ತಳ್ಳಿಹಾಕಲು ಬರುವುದಿಲ್ಲ.

ಸ್ವಾತಂತ್ರ್ಯ ನಂತರ ಕೇಂದ್ರದಲ್ಲಿ ಮತ್ತು ರಾಜ್ಯದಲ್ಲಿ ಆಡಳಿತ ನಡೆಸುತ್ತಾ ಬಂದಿರುವ ಕಾಂಗ್ರೆಸ್, ಬಿಜೆಪಿ ಅಂತಹ ರಾಷ್ಟ್ರೀಯ ಪಕ್ಷಗಳು ಜನರ ನಿರೀಕ್ಷೆಗಳನ್ನು ಹುಸಿಗೊಳಿಸುತ್ತಾ ಬಂದಿರುವ ಹಿನ್ನೆಲೆಯಲ್ಲಿ ಇಂದು ರಾಷ್ಟ್ರೀಯ ಪಕ್ಷಗಳ ಬಗ್ಗೆ ಜನರ ನಂಬಿಕೆ ಕುಸಿಯುತ್ತಿರುವುದು ವಾಸ್ತವ ಸಂಗತಿಯಾಗಿದೆ. ರಾಷ್ಟ್ರೀಯ ಹಿತ ಕಾಯುವ ತನ್ನ ಬದ್ಧತೆಯನ್ನು ನೆಹರೂ ಕಾಲಾವಧಿಯಲ್ಲೇ ಕೈಬಿಡುತ್ತಾ ಬಂದ ಕಾಂಗ್ರೆಸ್ ಮುಂದೆ ಗಾಂಧಿಗಳ ಅಧಿಕಾರದ ಅವಧಿಯಲ್ಲಿ ದೇಶದ ಹಿತವನ್ನು ಹಂತ ಹಂತವಾಗಿ ಸಾಮ್ರಾಜ್ಯಶಾಹಿ ಹಿತಗಳೊಂದಿಗೆ ವಿನಿಮಯ ಮಾಡಿಕೊಂಡಿದ್ದು ಆಧುನಿಕ ಭಾರತದ ದುರಂತ ಕಥೆಯಾಗಿದೆ. ವಿಶ್ವ ಹಣಕಾಸು ಬಂಡವಾಳದೊಂದಿಗೆ ಕೈಜೋಡಿಸಲು ಹೆಣಗುತ್ತಿರುವ ಭಾರತದ ಲೂಟಿಕೋರ ಹಿರಿಯ ಬಂಡವಾಳಿಗರ ಕೈಗೊಂಬೆಯಾಗಿರುವ ಕಾಂಗ್ರೆಸ್ ಪಕ್ಷವು ಇಂದು ತನ್ನ ಬ್ರಹ್ಮಾಂಡ ಭ್ರಷ್ಟಾಚಾರವನ್ನು ಮತ್ತು ದುರಾಡಳಿತವನ್ನು ಮುಚ್ಚಿಡಲು ಸಾಧ್ಯವಾಗದೆ ಜನರಿಂದ ತಿರಸ್ಕರಿಸಲ್ಪಡುತ್ತಾ, ಕೆಲವೇ ಕೆಲವು ರಾಜ್ಯಗಳಲ್ಲಿ ಆಡಳಿತಾಧಿಕಾರವನ್ನು ಉಳಿಸಿಕೊಳ್ಳಲು ಪರದಾಡುವಂತಾಗಿದೆ.


ದೇಶದ ಜನ ಕಾಂಗ್ರೆಸ್‌ನಿಂದ ದೂರ ಸರಿಯುತ್ತಿರುವುದರ ಸುಳಿವು ಪಡೆದುಕೊಂಡ ದೇಶದ ಹಿರಿಯ ಬಂಡವಾಳಗಾರರೊಳಗಿನ ಒಂದು ಗುಂಪು ಎಲ್ಲೋ ಮೂಲೆಯಲ್ಲಿದ್ದ ಆರ್.ಎಸ್.ಎಸ್. ಕೂಸು ಭಾರತೀಯ ಜನತಾ ಪಾರ್ಟಿಯನ್ನು ಎಬ್ಬಿಸಿ ಕಾಂಗ್ರೆಸಿಗೆ ಪರ್ಯಾಯವಾಗಿ ಬಿಂಬಿಸಿ ತನ್ನ ಕಪ್ಪುಹಣದಿಂದ ಅದನ್ನು ಕೊಬ್ಬಿಸಿ ಅದಕ್ಕೊಂದು ರಾಷ್ಟ್ರೀಯ ಸ್ವರೂಪವನ್ನು ತೊಡಿಸಿತು. ವಸಾಹತುಶಾಹಿ ಶೋಷಣೆಗೆ ಒಳಗಾಗಿ ನಲುಗಿದ ವಿವಿಧ ಸಮುದಾಯಗಳನ್ನು ಮೇಲೆತ್ತುವ ಯಾವುದೇ ಕನ್ನೋಟ ಪರಿವಾರದ ಈ ಪಕ್ಷಕ್ಕೆ ಇರಲೇ ಇಲ್ಲ. ಆದರೆ ವಿಶ್ವ ಬಂಡವಾಳದ ಹಿತ ಕಾಯುವ ವಿಷಯದಲ್ಲಿ ಬಿಜೆಪಿಗೆ ತಾನು ಕಾಂಗ್ರೆಸ್‌ಗಿಂತ ಭಿನ್ನ ಎನ್ನುವುದನ್ನು ಸಾಬೀತುಪಡಿಸಲಾಗದೆ ಅದರ ಮುಖವಾಡ ಕಳಚಿ ಬಿದ್ದಾಗ ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರುವುದು ಅದಕ್ಕೆ ಸಾಧ್ಯವಾಗಲಿಲ್ಲ. ಜರ್ಮನಿಯ ಹಿಟ್ಲರ್‌ನಂತೆ ಜನಾಂಗೀಯ ಹತ್ಯೆಯಲ್ಲಿ ಮಡಿದವರ ಗೋರಿಗಳ ಮೇಲೆ ತನ್ನ ಅರಮನೆಯನ್ನು ಕಟ್ಟಿಸಿಕೊಂಡಿರುವ ನರೇಂದ್ರ ಮೋದಿಗೂ ಹಿಂದೆ ಜರ್ಮನಿಯ ಬಂಡವಾಳಿಗರು ಮಾಡಿದಂತೆ ಭಾರತದ ಕೆಲ ದೊಡ್ಡ ಬಂಡವಾಳಿಗರು ಬೆಂಬಲ ನೀಡುತ್ತಿದ್ದು ಕೇಂದ್ರದ ಗದ್ದುಗೆಗೆ ಆರ್ಹ ಅಭ್ಯರ್ಥಿ ಎಂದು ಬಿಂಬಿಸುವ ವ್ಯರ್ಥ ಪ್ರಯತ್ನ ಮಾಡುತ್ತಿದ್ದಾರೆ. ಉಳಿದಂತೆ, ಮೊತ್ತ ಮೊದಲ ಬಾರಿಗೆ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿದ್ದ ಬಿಜೆಪಿ ಉದರದಲ್ಲಿ ಜನಿಸಿ ಬಂದ ಕೆಜೆಪಿ ಜನ್ಮ ಕೊಟ್ಟ ತಾಯಿಯ ಬಲಿ ಕೇಳುತ್ತಿದೆ. ಹೀಗೆ ಬಾರೀ ನಿರೀಕ್ಷೆಗಳನ್ನು ಹುಟ್ಟು ಹಾಕುತ್ತಾ ನಡೆದಿದ್ದ ಬಿಜೆಪಿ ಕೆಲವೇ ರಾಜ್ಯಗಳಿಗೆ ಸೀಮಿತವಾದ ಪ್ರದೇಶಿಕ ಪಕ್ಷವಾಗಿಬಿಟ್ಟಿದೆ.

ಎಡಪಕ್ಷಗಳನ್ನು ಹೊರತು ಪಡಿಸಿ, ಇನ್ನುಳಿದ ರಾಜಕೀಯ ಪಕ್ಷಗಳು

ಪುಟ 4 ಕ್ಕೆ

ಅಧಿಕಾರ ದಾಹಿಗಳ 'ಸಮ್-ಥಿಂಗ್ ಕ್ರಾಂತಿ'!

'ಸಂಕ್ರಾತಿ ಬಳಿಕ ರಾಜ್ಯದಲ್ಲಿ ಕ್ರಾಂತಿಯೇ ಸಂಭವಿಸುತ್ತದೆ ಕಾದು ನೋಡಿ, ಇದು ಖಂಡಿತ ಸಿಡಿಯುವ ಬಾಂಬ್' ಎಂದಿದ್ದು ಟುಸ್ ಪಟಾಕಿಯಾಗಿರುವುದು ಗೋಚರವಾಗುತ್ತಿದೆ. ಕನಿಷ್ಠ ಸಚಿವೆ ಶೋಭಾ ಕರಂದ್ಲಾಜೆಯಾದರೂ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಕೆಜೆಪಿ ಅದ್ಯಕ್ಷ ಯಡಿಯೂರಪ್ಪಗೆ ಸಾಥ್ ನೀಡುವರೆಂಬುದೂ ಹುಸಿಯಾಗುತ್ತಿದೆ. ಸರಕಾರ ಬೀಳಿಸುವ ಅಥವಾ ಇನ್ನಷ್ಟು ಚೌಕಾಶಿ ಮಾಡಿ ಚುನಾವಣೆಗೆ ಸಿದ್ಧತೆ ಮಾಡುವ ಬ್ಲಾಕ್ ಮೇಲ್ ಬಂಡಾಯ ವಿಫಲವಾಗಲು ಕಾರಣ ನಿರೀಕ್ಷಿಸಲಾದ ಬೆಂಬಲಿಗ ಶಾಸಕರು, ಸಚಿವರು ರಾಜೀನಾಮೆ ಕೊಡಲು ತೋರಿದ ನಕಾರ ಯಡಿಯೂರಪ್ಪನವರಿಗೆ ಕೊಂಚ ಕಂಗಾಲುಗೊಳಿಸಿದ ಸಂಗತಿಯಾಗಿದೆ. ಹೀಗಾಗಿಯೇ ಸರಕಾರ ಉರುಳಿಸಿ ತೋರಿಸಲಿ ಎಂದು ಬಿಜೆಪಿಯು ಯಡಿಯೂರಪ್ಪಗೆ ಬಹಿರಂಗ ಸವಾಲು ಹಾಕಿದ್ದು. ಹಿಂದಿನ ಅದರ ವರ್ತನೆಯಲ್ಲಿ ಆದ ಬದಲಾವಣೆಗೆ ಇದೂ ಒಂದು ಕಾರಣ. ಯಾವ ಶಾಸಕ, ಸಚಿವರೂ ಖುರ್ಚಿ ಬಿಟ್ಟು ಕದಲಲಾರರೆಂಬ ಕಟು ಸತ್ಯವನ್ನು ಅಧಿಕಾರದಾಹ, ಸಂದರ್ಭಸಾಧಕ ರಾಜಕಾರಣವನ್ನು ಉತ್ತುಂಗಕ್ಕೆ ಒಯ್ದ ಬಿಜೆಪಿಗಿಂತ ಬೇರೆ ಯಾರಿಗೆ ತಿಳಿದೀತು? ಹೀಗಾಗಿಯೇ ಅದು ಕೊಂಚ ನಿರಾಳವಾದಂತೆ ವರ್ತಿಸುತ್ತಿದೆ, ಬಜೆಟ್ ಮಂಡನೆಯ ಸಿದ್ಧತೆ, ಸನ್ನಾಹದಲ್ಲಿದೆ. ಅದಕ್ಕಾಗಿ ಹೊಸ ತಂತ್ರಗಳನ್ನು ಮಾಡುತ್ತಿದೆ.



ಅದರಂತೆ ಚುನಾವಣೆಯಲ್ಲಿ ಲಾಭ ಗಿಟ್ಟಿಸಲು ಈ ಕೂಡಲೇ ಹಲವಾರು ನಿಗಮ-ಮಂಡಳಿಗಳಿಗೆ ಹೊಸಬರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿದೆ. ಈ ವಾರದಲ್ಲಿ ನಡೆದ ಈ 16 ನೇಮಕಗಳು ಬಹುತೇಕ ಯಡಿಯೂರಪ್ಪನವರ ಬೆಂಬಲಿಗರನ್ನು ಎತ್ತಂಗಡಿ ಮಾಡಿ ಕೂಡಿಸಿದ್ದಾಗಿವೆ ಎಂಬುದೇ ಬಿಜೆಪಿಯ ಆಕ್ರಮಣ ಹೆಚ್ಚಿರುವುದರ ಸೂಚಕ. ಹೀಗಾಗಿ ಇನ್ನೂ ಅರಮನೆ ರಾಜಕಾರಣದಿಂದ ಹೊರ ಬರದ ಯಡಿಯೂರಪ್ಪ ತನ್ನ ಬಲದ ಕ್ರೋಢೀಕರಣ ಮತ್ತು ಅಸ್ತಿತ್ವದ ಪರದಾಟದಲ್ಲಿರುವಂತೆ ಕಾಣುತ್ತಿರುವುದೇ ವಿಶೇಷ.

ಬಿಜೆಪಿಯಲ್ಲಿ ಕಂಡು ಬಂದಿರುವ ಕೊಂಚ ಧೈರ್ಯಕ್ಕೆ ಮತ್ತೊಂದು ಪ್ರಮುಖ ಅಂಶವಾಗಿರುವುದು ಯಡಿಯೂರಪ್ಪನವರ ಬಣ (ಸುಮಾರು 20-22 ಜನ) ಸರಕಾರದಿಂದ ಹೊರಹೋದರೆ ಉಂಟಾಗುವ ಬಹುಮತದ ಕೊರತೆಯನ್ನು ಜೆಡಿ(ಎಸ್)ನ ಶಾಸಕರ ಬೆಂಬಲದಿಂದ ತುಂಬಿಕೊಂಡು ಸರಕಾರ ಉಳಿಸಿಕೊಳ್ಳಬಹುದೆಂಬ 'ಡೀಲ್ ರಾಜಕೀಯ'ದ ನೆಚ್ಚಿಗೆ! ಇಂತಹ ಸಾಧ್ಯತೆಗಳನ್ನು ಉಭಯತ್ರರೂ ಸ್ಪಷ್ಟವಾಗಿ ನಿರಾಕರಿಸದೇ ಇರುವುದು ಜನರಲ್ಲಿ ಅನುಮಾನ ಉಳಿಯಲು ಕಾರಣವಾಗಿದೆ. ಮೇಲಾಗಿ ಸಚಿವ ವರ್ತೂರು ಪ್ರಕಾಶನಂತಹವರು 'ದೊಡ್ಡಗೌಡರ ಆಶೀರ್ವಾದ ಇರುವವರೆಗೂ ಸರಕಾರ ಅಭಾಧಿತ' ಎಂದು ಹೇಳಿಕೊಂಡು ತಿರುಗುತ್ತಿದ್ದಾರೆ. ಎಂದೋ ಉರುಳಿ ಹೋಗಬೇಕಾಗಿದ್ದ, ಈಗಲೂ ತೊಲಗಬೇಕಾದ ಈ ಸರಕಾರ ಉಳಿದುಕೊಂಡಿರುವುದೇ ಇಂತಹ ಸಂದರ್ಭಸಾಧಕ ತಂತ್ರ, ಕಸರತ್ತುಗಳಿಂದ. ಇದರಲ್ಲಿ ಪಾತ್ರಧಾರಿಗಳು ಬದಲಾಗುತ್ತಿದ್ದಾರೆ ಹೊರತು ಸನ್ನಿವೇಶವೇನಲ್ಲ ಎಂಬುದೇ ದುರಂತ.

ಇಷ್ಟಾದರೂ ಈ ಸರಕಾರದಿಂದ ಜನರಿಗೇನು ಪ್ರಯೋಜನವಾಗುತ್ತಿದೆ? ಆಡಳಿತ ಕುಸಿದು ಹೋಗಿದೆ. ಜನರನ್ನು ಕೇಳುವವರೇ ಇಲ್ಲ. ಬಿಜೆಪಿ ಈಗ ಅಧಿಕಾರದಲ್ಲಿ ಉಳಿದುಕೊಂಡು ಮುಂದೆ ಪವಾಡ ಸೃಷ್ಟಿಸಲಿದೆ ಎಂಬುದೂ ದೊಡ್ಡ ಭ್ರಮೆ. ಅದು ಜಗದೀಶ್ ಶೆಟ್ಟರ್ ನೇತೃತ್ವದಲ್ಲಿ ಚುನಾವಣೆ ನಡೆದರೂ, ಮೋದಿ ಮಾದರಿಯ ಅಭಿವೃದ್ಧಿ ಎಂದರೂ ಈಗಿನದಕ್ಕಿಂತ ಇನ್ನಷ್ಟೂ ಅಧಃಪತನ ಕಾಣಬಹುದೇ ಹೊರತು ಬೇರೇನು ಸಾಧ್ಯ?

* * *

ಮೌಢ್ಯತೆ ಬಿತ್ತುವವರ ಚುನಾವಣಾ ಗಿಮಿಕ್

ಚುನಾವಣೆಯ ಸಿದ್ಧತೆಯಲ್ಲಿರುವ ಬಿಜೆಪಿ ಹಲವು ಚುನಾವಣಾ ಗಿಮಿಕ್‌ಗೆ ಇಳಿದಿದೆ. ಈ ವಾರದಲ್ಲಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಚಾಮರಾಜನಗರಕ್ಕೆ ಭೇಟಿ ನೀಡಿ ಭರ್ಜರಿ ಪ್ರಚಾರ ಗಿಟ್ಟಿಸಿದ್ದಾರೆ. ನಿಜ, ಅಲ್ಲಿಗೆ ಭೇಟಿ ನೀಡಿದವರು ಸ್ಥಾನ ಕಳೆದುಕೊಳ್ಳುತ್ತಾರೆ ಎಂಬ ಗಾಢ ಮೂಢನಂಬಿಕೆಯನ್ನು ಧಿಕ್ಕರಿಸಿ ಹೋಗಿದ್ದು ಒಳ್ಳೆಯದೇ ಎನ್ನೋಣ. ಆದರೆ ಇಂತಹ ಹತ್ತಾರು ಮೂಢನಂಬಿಕೆಗಳ ಮೂಟೆ ಹೊತ್ತಿರುವ ಇವರೇ ಅದನ್ನೊಂದು ಮಹಾ ಕ್ರಾಂತಿಕಾರಿ ಹೆಜ್ಜೆ ಎಂಬಂತೆ ಬಣ್ಣಿಸುವುದು ಮೂರ್ಖತನ ಮತ್ತು ದೂರ್ತತನದಿಂದ ಕೂಡಿದೆ. ಮೇಲಾಗಿ ಬಂಡಾಯದ ಬೇಗುದಿಯಲ್ಲಿ ಯಾವಾಗಲಾದರೂ ಸರಕಾರ ಉರುಳಬಹುದೆಂಬ ಸ್ಥಿತಿಯಿರುವಾಗ, ಚುನಾವಣೆ ನಂತರವಾದರೂ (ಒಂದು ವೇಳೆ ಗೆದ್ದೂ ಆಂತರಿಕ ಕಿತ್ತಾಟದಿಂದಲೂ)ಅಧಿಕಾರವನ್ನು ಕಳೆದುಕೊಳ್ಳುವ ಭೀತಿ ಇರುವಾಗ ಈಗ ಸಿಗುವ ಒಂದು ಪುಕ್ಕಟೆ ಪ್ರಚಾರವನ್ನು ಶೆಟ್ಟರ್‌ರವರು ಕಳೆದುಕೊಳ್ಳಲು ಸಿದ್ಧರಿಲ್ಲ ಎಂಬುದೇ ದಿಟ. ಮುಖ್ಯ ಪ್ರಶ್ನೆ ಚಾಮರಾಜನಗರ ರಾಜ್ಯದಲ್ಲೂ, ದಕ್ಷಿಣ ಕರ್ನಾಟಕದಲ್ಲಿಯೂ ಅದು ಅತ್ಯಂತ ಹಿಂದುಳಿದ ಜಿಲ್ಲೆ. ಅನಭಿವೃದ್ಧಿ, ಬಡತನ, ದಾರಿದ್ರ್ಯ ತಾಂಡವವಾಡುತ್ತಿದೆ. ಹಸಿವಿನ ಸಾವುಗಳು ಇಲ್ಲಿ ಸಂಭವಿಸಿವೆ. ಅಲ್ಲಿಗೆ ಭೇಟಿ ನೀಡಿದ ಮುಖ್ಯಮಂತ್ರಿಗಳು ಇದಕ್ಕೆ ಏನಾದರೂ ಶಾಶ್ವತ ಪರಿಹಾರಾತ್ಮಕ ಕ್ರಮಗಳನ್ನು ಕೈಗೊಂಡಾರೆಯೇ, ಅಂತಹ ಸಂಕಲ್ಪವನ್ನಾದರೂ ಕೈಗೊಂಡರೇ ಎಂಬುದು. ಆ ಪ್ರಯತ್ನಗಳು ಅಲ್ಲೆಲ್ಲೂ ಕಾಣಲಿಲ್ಲ.

ಹಾಗಾಗಿ ಶೆಟ್ಟರ್ ಅಲ್ಲಿಗೆ ಹೋದದ್ದು ಚುನಾವಣಾ ತಯಾರಿಗಷ್ಟೇ. ಅಲ್ಲಿ ಹೆಚ್ಚು ಸಂಖ್ಯೆಯಲ್ಲಿರುವ ಲಿಂಗಾಯತರ ಓಟು ಕಿತ್ತಿಕೊಳ್ಳುವ, ಯಡಿಯೂರಪ್ಪನವರ ಬಲ ಕುಂದಿಸುವ ಲೆಕ್ಕಾಚಾರದ ಭೇಟಿ ಇದಾಗಿದ್ದಲ್ಲಿ ಅಲ್ಲಿನ ಜನರಿಗೆ ಏನು ಪ್ರಯೋಜನ ಆದದ್ದಾದರೂ ಏನು? ಇಂತಹ ವಂಚನೆಗಳ ವರಸೆಯಲ್ಲೇ ಜನ ಇನ್ನೆಷ್ಟು ನರಳಬೇಕು?

ಜನಶಕ್ತಿ
ಕನ್ನಡ ವಾರಪತ್ರಿಕೆ

ಗಡಿ ನಿಯಂತ್ರಣ ರೇಖೆಯ ಬಳಿ ಹೆಚ್ಚುತ್ತಿರುವ ಉದ್ವಿಗ್ನ ಪರಿಸ್ಥಿತಿ: ಸಿಪಿಐ(ಎಂ) ಕೇಂದ್ರ ಸಮಿತಿ ಆತಂಕ

ಜನವರಿ 17, 2013 ರಂದು ಕೋಲ್ಕೋತ್ತಾ ನಗರದಲ್ಲಿ ಸಭೆ ಸೇರಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯು ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯ ಬಳಿ ಹೆಚ್ಚುತ್ತಲೇ ಹೋಗುತ್ತಿರುವ ಉದ್ವಿಗ್ನ ಪರಿಸ್ಥಿತಿಯ ಕುರಿತು ತನ್ನ ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಜನವರಿ 8 ರಂದು ನಡೆದ ಭಾರತದ ಇಬ್ಬರು ಯೋಧರ ಹತ್ಯೆಯನ್ನು ಹಾಗೂ ಅವರಲ್ಲಿ ಒಬ್ಬರ ಶಿರಚ್ಛೇಧ ಮಾಡಿರುವುದನ್ನು ಸಭೆ ತೀವ್ರವಾಗಿ ಖಂಡಿಸಿದೆ.

ಭಾರತ ಸರ್ಕಾರವು ಈ ವಿಷಯದಲ್ಲಿ ದೃಢವಾದ ನಿಲುವು ತಳೆಯಬೇಕೆಂದು, ಪಾಕಿಸ್ತಾನದ ಆಡಳಿತಗಾರರಿಗೆ ಇಂತಹ ದಾಳಿಗಳನ್ನು ಭಾರತವು ಒಪ್ಪುವುದಿಲ್ಲ ಮತ್ತು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದೆ.

2003 ರಲ್ಲಿ ಗಡಿ ನಿಯಂತ್ರಣ ರೇಖೆಯ ಬಳಿ ಜಾರಿಗೆ ತರಲಾದ ಯುದ್ಧವಿರಾಮವು ತುಲನಾತ್ಮಕವಾಗಿ ಇಲ್ಲಿಯವರೆಗೆ ಗಡಿಯಲ್ಲಿ ಶಾಂತಿಯನ್ನು ಕಾಪಾಡುವ ಉದ್ದೇಶವನ್ನು ಬಹುತೇಕ ಈಡೇರಿಸಿದೆ. ಅಲ್ಲಿ ಈಗ ಈ ಪರಿಸ್ಥಿತಿ ಕೆಡುತ್ತಿರುವುದನ್ನು ತಡೆಯಬೇಕಿದೆ. ಅದಕ್ಕಾಗಿ, ಯುದ್ಧವಿರಾಮದ ಉಲ್ಲಂಘನೆ ಮರುಕಳಿಸದಂತೆ ಖಾತ್ರಿ ಪಡಿಸಿಕೊಳ್ಳಲು ಪಾಕಿಸ್ಥಾನ ಸರ್ಕಾರದ ಜೊತೆಗೆ ಉನ್ನತ ಮಟ್ಟದ ಮಾತುಕತೆಗಳು ನಡೆಯಬೇಕಿದೆ.

ಭಾರತ ಸರ್ಕಾರವು ತಾನು ದೃಢವಾದ ಧೋರಣೆಯನ್ನು ಹೊಂದಿರುವಾಗಲೇ ಪಾಕಿಸ್ಥಾನದೊಂದಿಗಿನ ಮಾತುಕತೆಗಳು ಮುಂದುವರಿಯುವುದನ್ನು ಸಹ ಖಾತ್ರಿಪಡಿಸಬೇಕು, ಅಭಿವೃದ್ಧಿ ಹೊಂದುತ್ತಿರುವ ದೇಶಗಳಾದ ಈ ಎರಡು ದೇಶಗಳ ನಡುವಿನ ಜನತೆ-ಜನತೆಯ ನಡುವಿನ ಸಂಬಂಧಗಳಿಗೆ ತಡೆ ಉಂಟಾಗಬಾರದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಪ್ರತಿಪಾದಿಸಿದೆ.

ಡೀಸೆಲ್ ಬೆಲೆ ನಿಯಂತ್ರಣ ರದ್ದು ನೀತಿ ಕುರಿತು

ಸಿಪಿಐ(ಎಂ) ಪಕ್ಷದ ಕೇಂದ್ರ ಸಮಿತಿಯು ಡೀಸೆಲ್ ಬೆಲೆ ನಿಯಂತ್ರಣ ರದ್ದು ಮಾಡುವ ಕೇಂದ್ರ ಯುಪಿಎ ಸರ್ಕಾರದ ನಿರ್ಧಾರವನ್ನು ತೀವ್ರವಾಗಿ ಖಂಡಿಸಿದೆ. ಪೆಟ್ರೋಲ್ ಬೆಲೆಗಳ ಮೇಲಿನ ನಿಯಂತ್ರಣವನ್ನು ತೆಗೆದ ನಂತರ ಪೆಟ್ರೋಲ್ ಬೆಲೆಗಳು ನಿರಂತರವಾಗಿ ಏರಿದಂತೆ ಈ ನಿರ್ಧಾರದಿಂದ ಡೀಸೆಲ್ ಬೆಲೆಗಳು ಕೂಡ ಏರುತ್ತವೆ. ಡೀಸೆಲ್ ಬೆಲೆ ಏರಿಕೆಯು ಪ್ರಯಾಣ ದರಗಳು, ಸಾಗಣೆ ವೆಚ್ಚ ಏರಿಕೆಗೆ ಮತ್ತು ಹಣದುಬ್ಬರಕ್ಕೆ ಕಾರಣವಾಗುತ್ತದೆ. ಅದು ರೈತರನ್ನು ಸಹ ಬಾಧಿಸಲಿದೆ.

ಪ್ರತಿಯೊಂದೂ ಅವಶ್ಯಕ ಸಾಮಾಗ್ರಿಗಳ ಬೆಲೆಗಳ ಏರಿಕೆಯಿಂದ ಈಗಾಗಲೇ ಕಂಗೆಟ್ಟಿರುವ ಜನರ ಮೇಲೆ ಮತ್ತಷ್ಟು ಹೊರೆಯನ್ನು ಹೊರಿಸುವಲ್ಲಿ ಯುಪಿಎ ಸರ್ಕಾರವು ಹಠಮಾರಿ ಧೋರಣೆಯನ್ನು ತೋರುತ್ತಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಈ ಸಂಬಂಧದಲ್ಲಿ ಕುಟುಂಬಕ್ಕೆ ಅನಿಲ ಸಿಲಿಂಡರ್‌ಗಳ ಮಿತಿಯನ್ನು 9 ಕ್ಕೆ ಏರಿಸುವ ನಿರ್ಧಾರ ಜನರಿಗೆ ಸ್ವಲ್ಪ ಮಾತ್ರವೇ ಪರಿಹಾರ ನೀಡುವಂತಹದ್ದಾಗಿದ್ದು, ಈ ಕ್ರಮ ಏನೇನೂ ಸಾಲದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ತಿಳಿಸಿದೆ.

ಜನಾರೋಗ್ಯ ನೀತಿಯ ರಾಜಕೀಯ

ಪುಟ 2 ರಿಂದ

ಅತಿ ಕಡಿಮೆ. ಈಗಿನ ಯು.ಪಿ.ಎ. ಸರ್ಕಾರ, ಸಿ.ಎಂ.ಪಿ (Common Minimum Programme)ಗೆ ಬದ್ಧವಾಗಿದೆ ಎಂದು ಹೇಳಿಕೊಳ್ಳುತ್ತದೆ. ಈ ಒತ್ತಡದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಹಣಕಾಸು ಸ್ವಲ್ಪ ಹೆಚ್ಚಿಸುವ ಬಗ್ಗೆ ತೀರ್ಮಾನ ಘೋಷಿಸಿದೆ. ಐದು ವರ್ಷದಲ್ಲಿ 0.9% (ನಿವ್ವಳ ಆಂತರಿಕ ಆದಾಯದ) ರಿಂದ 2–3% ರಷ್ಟು ಆರೋಗ್ಯಕ್ಕೆ ವೆಚ್ಚಮಾಡುವುದಾಗಿ ಹೊಸ ಕಾರ್ಯಕ್ರಮ ಹೇಳುತ್ತಿದೆ. ಇದೇ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ನಿಗವು (National Rural Health Mission). ಆರೋಗ್ಯ ಕ್ಷೇತ್ರದಲ್ಲಿ ಒಳ್ಳೆಯ ನೀತಿ ಇದ್ದರೂ, ಅವು ಜಾರಿಗೆ ಬರಲಿಲ್ಲ. ಅದಕ್ಕೆ ಕಾರಣವೇನು ಎಂದು ಅಧ್ಯಯನ ಮಾಡದೇ, ಈ ಹೊಸ ಘೋಷಣೆ ಮಾಡಲಾಯಿತು. ಈ ನೀತಿ ಜಾರಿ ಬಂದು ಎರಡು ವರ್ಷಗಳಾದರೂ, ಗಣನೀಯ ಬದಲಾವಣೆಗಳೇನಾಗಿಲ್ಲ.

ಜನಾರೋಗ್ಯ ಸುಧಾರಿಸಲು ಒಳ್ಳೆಯ ಮಾರ್ಗವಿದೆ. ಅದನ್ನು ಅನುಸರಿಸಬೇಕಾದ ರಾಜಕೀಯ ಒಲವು ಇಲ್ಲದಾಗಿದೆ. ಇದರಿಂದಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಕ್ಷೀಣವಾಗಿ, ಖಾಸಗಿ ವ್ಯವಸ್ಥೆ ಬಲವಾಗುತ್ತಿದೆ.

ಸಂಪಾದಕೀಯ....

ಪುಟ 3 ರಿಂದ

ಪ್ರಾದೇಶಿಕ ನೆಲೆಯಲ್ಲಿ ಬೆಳೆದು ಬಂದಿದ್ದರೂ ಅವುಗಳು ಪ್ರಮುಖ ರಾಷ್ಟ್ರೀಯ ಪಕ್ಷಗಳಿಂದ ಸಿಡಿದು ಬಂದ ಪಕ್ಷಗಳಾಗಿವೆ ಅಥವ ರಾಷ್ಟ್ರೀಯ ವಿಷಯಗಳಲ್ಲಿ ರಾಷ್ಟ್ರೀಯ ಪಕ್ಷಗಳ ನೀತಿಗಳನ್ನೇ ಬೆಂಬಲಿಸುವ ಪಕ್ಷಗಳಾಗಿವೆ. ಪ್ರಾದೇಶಿಕ ಬಂಡವಾಳಗಾರ-ಭೂಮಾಲೀಕರ ಬೆಂಬಲ ಹೊಂದಿರುವ ಈ ಪ್ರಾದೇಶಿಕ ಪಕ್ಷಗಳು ಸಹ ಒಂದಕ್ಕಿಂತ ಹೆಚ್ಚು ರಾಜ್ಯಗಳ ವಿಧಾನಸಭೆಗಳಲ್ಲಿ ಸ್ಥಾನಗಳನ್ನು ಗೆಲ್ಲಲು ಪ್ರಯತ್ನಿಸುವ ಮೂಲಕ ತಾವೂ ರಾಷ್ಟ್ರೀಯ ಪಕ್ಷಗಳ ಸ್ಥಾನಮಾನ ಪಡೆಯಲು ಹವಣಿಸುತ್ತಿವೆ. ದಲಿತ ದಮನಿತ ವಿಭಾಗಗಳಿಗೆ ನ್ಯಾಯ ದೊರಕಿಸುವ ಭರವಸೆಯೊಂದಿಗೆ ಬೆಳೆದು ಬಂದ ತಮಿಳುನಾಡಿನ ದ್ರಾವಿಡ ಪಕ್ಷಗಳಾಗಲಿ, ಉತ್ತರ ಪ್ರದೇಶದ ಬಹುಜನ ಪಕ್ಷವಾಗಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ರಾಷ್ಟ್ರೀಯ ಪಕ್ಷಗಳನ್ನು ಮತ್ತು ಅವುಗಳ ಧೋರಣೆಗಳನ್ನು ಬೆಂಬಲಿಸಲು ಪರಸ್ಪರ ಸ್ಪರ್ಧೆಗಿಳಿಯುವುದನ್ನು ನಾವು ನೋಡುತ್ತಿದ್ದೇವೆ.

ಕರ್ನಾಟಕದಲ್ಲಿ ಈಗ ತಾನೇ ಕಣ್ಣು ಬಿಡುತ್ತಿರುವ ಎರಡು ಪಕ್ಷಗಳು ತನಗೆ ಹುಟ್ಟಿದ ಮಕ್ಕಳಲ್ಲ ಎಂದು ಬಿಜೆಪಿ ಹೇಳುತ್ತಿರುವುದು ವಿಶ್ವಾಮಿತ್ರ ಮೇನಕೆಯರ ಕಥೆಯನ್ನು ನೆನಪಿಸುತ್ತಿದೆ. ರೈತ ಸಂಘಟನೆಯ ಹೆಸರಿನಲ್ಲಿ ಬಿಜೆಪಿಗೆ ಹತ್ತಿರವಾದ ಕೆಲವು ರೈತ ನಾಯಕರು ಈ ಹಿಂದಿನ ತಮ್ಮ ವಿಫಲ ಪ್ರಯತ್ನಗಳನ್ನು ಮರೆತು ಪ್ರಾದೇಶಿಕ ಪಕ್ಷಗಳಿಗೆ ಜನ್ಮ ನೀಡುವ ಆತುರದಲ್ಲಿದ್ದಾರೆ. ಈ ಬೆಳವಣಿಗೆಗಳನ್ನು ಗಮನಿಸುತ್ತಾ ರಾಜ್ಯದ ಕೆಲವು ಬರಹಗಾರರು, ಬುದ್ಧಿಜೀವಿಗಳು–ರಾಷ್ಟ್ರೀಯ ಪಕ್ಷಗಳ ಕಾಲ ಮುಗಿದು ಹೋಯಿತು. ಈಗ ಏನಿದ್ದರೂ ಪ್ರಾದೇಶಿಕ ಪಕ್ಷಗಳಿಗೆ ಸಕಾಲ–ಎಂದು ಘೋಷಿಸುತ್ತಿದ್ದಾರೆ. ಇದುವರೆಗಿನ ಪ್ರಮುಖ ರಾಷ್ಟ್ರೀಯ ಪಕ್ಷಗಳೇ ಪ್ರಾದೇಶಿಕ ಪಕ್ಷಗಳಾಗಿ ಕುಗ್ಗುತ್ತಿರುವಾಗ, ಇವುಗಳಿಂದ ಸಿಡಿದು ಬಂದ ವ್ಯಕ್ತಿ ಆಧಾರಿತ, ಜಾತಿ ಆಧಾರಿತ ಪ್ರಾದೇಶಿಕ ಪಕ್ಷಗಳು ಜನತೆಯಿಂದ ತಿರಸ್ಕರಿಸಲ್ಪಟ್ಟಿರುವ ಪ್ರಮುಖ ರಾಷ್ಟ್ರೀಯ ಪಕ್ಷಗಳ ಧೋರಣೆಗಳನ್ನೇ ಬೆಂಬಲಿಸುತ್ತಿರುವಾಗ ಇವುಗಳಲ್ಲಿ ಎಲ್ಲಿವೆ ರಾಷ್ಟ್ರೀಯ ಪಕ್ಷಗಳು? ಎಲ್ಲಿವೆ ಪ್ರಾದೇಶಿಕ ಪಕ್ಷಗಳು ?

ಪಕ್ಷಗಳು ರಾಷ್ಟ್ರೀಯವೆ? ಅಥವ ಪ್ರಾದೇಶಿಕವೆ? ಎಂಬ ಆಧಾರದಲ್ಲಿ ಆಯ್ಕೆ ಮಾಡಿಕೊಳ್ಳಲಾಗದು. ರಾಷ್ಟ್ರೀಯ ಪಕ್ಷಗಳು ಎಂದ ತಕ್ಷಣ ಅವುಗಳಿಗೆ ರಾಜ್ಯದ ಹಿತ ಕಾಪಾಡಲು ಸಾಧ್ಯವೇ ಆಗುವುದಿಲ್ಲ ಎಂಬ ವಾದದಲ್ಲಿ ಹುರುಳಿಲ್ಲ. ಅದರಂತೆಯೇ ಪ್ರಾದೇಶಿಕ ಪಕ್ಷದಿಂದ ಮಾತ್ರ ರಾಜ್ಯದ ನಿರ್ದಿಷ್ಟ ಹಿತಗಳಿಗೆ ನ್ಯಾಯ ಸಿಗುತ್ತದೆ ಎಂಬ ತರ್ಕವೂ ಸಹ ಆಧಾರರಹಿತವಾಗಿದೆ. ಇಲ್ಲಿ ಪಕ್ಷದ ಹೊರ ಸ್ವರೂಪಕ್ಕಿಂತಲೂ ಮುಖ್ಯವಾಗಿ ಅದರ ಒಳಗಿನ ವರ್ಗಸ್ವರೂಪ ಮುಖ್ಯವಾಗಿದೆ. ಎಲ್ಲ ಬಲಪಂಥೀಯ ಪಕ್ಷಗಳು, ಅವು ರಾಷ್ಟ್ರೀಯ ಪಕ್ಷಗಳಾಗಲಿ, ಪ್ರಾದೇಶಿಕ ಪಕ್ಷಗಳಾಗಿರಲಿ, ರಾಜ್ಯದ ದೇಶದ ಮತ್ತು ವಿಶ್ವದ ಬಲಾಢ್ಯ ವರ್ಗಗಳ ಹಿತವನ್ನೇ ಪ್ರತಿನಿಧಿಸುತ್ತವೆ. ಚುನಾವಣಾ ಲಾಭ ಗಿಟ್ಟಿಸಿಕೊಳ್ಳಲು ಮಾತ್ರ ಅವು ಜನರನ್ನು ಮೋಡಿ ಮಾಡುವ ಬಣ್ಣಗಳನ್ನು ಬಳಿದುಕೊಳ್ಳುತ್ತವೆ.

ಭಾರತ ವಿವಿಧ ರಾಷ್ಟ್ರೀಯತೆಗಳನ್ನು ಒಳಗೊಂಡ ಒಂದು ಒಕ್ಕೂಟವಾಗಿದೆ. ಒಕ್ಕೂಟದ ಎಲ್ಲಾ ರಾಜ್ಯಗಳಿಗೂ ನಿಜವಾದ ಸ್ವಾಯತ್ತತೆ ಮತ್ತು ಸಮಾನ ಅಧಿಕಾರವನ್ನು ಖಚಿತಪಡಿಸಲು ಈ ಒಕ್ಕೂಟ ಸ್ವರೂಪವನ್ನು ಕಾಪಾಡುವುದು ಮತ್ತು ಬಲಪಡಿಸುವುದು ಅಗತ್ಯವಾಗಿದೆ. ಆದ್ದರಿಂದ ಜನತೆಯ ಆಯ್ಕೆಯ ರಾಜಕೀಯ ಪಕ್ಷಕ್ಕೆ ಒಂದು ರಾಷ್ಟ್ರೀಯ ಕಣ್ಣೋಟ ಇರುವುದು ಅತ್ಯಗತ್ಯವಾಗಿದೆ. ನದಿ ನೀರಿನ ಪ್ರಶ್ನೆಯೂ ಸೇರಿದಂತೆ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದರಲ್ಲಿ ಒಂದು ರಾಷ್ಟ್ರೀಯ ನೀತಿಯನ್ನು ಹೊಂದಿರಲು ಬದ್ಧವಾದ ರಾಜಕೀಯ ಪಕ್ಷ ಜನತೆಯ ಆಯ್ಕೆ ಆಗಬೇಕಾಗಿದೆ. ಆದರೆ ರಾಷ್ಟ್ರೀಯ ಹಿತದ ಹೆಸರಿನಲ್ಲಿ ಪ್ರಾದೇಶಿಕ ಹಿತಗಳನ್ನು ಬಲಿಕೊಡಬೇಕಾಗಿಲ್ಲ. ರಾಷ್ಟ್ರೀಯ ಹಿತ ಹಾಗೂ ಪ್ರಾದೇಶಿಕ ಹಿತ ಒಂದಕ್ಕೊಂದು ವಿರುದ್ಧವಾದ ಧ್ರುವಗಳಾಗಬೇಕಾಗಿಲ್ಲ. ಉದಾಹರಣೆಗೆ ಪಶ್ಚಿಮ ಬಂಗಾಳದಲ್ಲಿ ಸುಮಾರು 34 ವರ್ಷ ಆಡಳಿತ ನಡೆಸಿದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ರಾಷ್ಟ್ರೀಯ ಹಿತಗಳ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳದೆ ಸಂವಿಧಾನದ ಇತಿಮಿತಿಗಳಲ್ಲಿ ರಾಜ್ಯದ ಸಂಪೂರ್ಣ ಹಿತ ಕಾಪಾಡಲು ಶ್ರಮಿಸಿದ್ದು ಒಂದು ದಾಖಲೆಯಾಗಿ ನಮ್ಮ ಮುಂದಿದೆ.

ಗ್ರಾಮ ಪಂಚಾಯತ ನೌಕರರಿಗೆ ವೇತನಕ್ಕಾಗಿ ಪ್ರತ್ಯೇಕ ಅನುದಾನ ನೀಡಲು ಒತ್ತಾಯಿಸಿ

ಬೆಂಗಳೂರಿನಲ್ಲಿ ಅನಿರ್ಧಿಷ್ಟ ಹೋರಾಟ

ಕರ್ನಾಟಕ ರಾಜ್ಯದಲ್ಲಿ 5627 ಗ್ರಾಮ ಪಂಚಾಯತಗಳಲ್ಲಿ ಗುಮಾಸ್ತ, ಕರವಸೂಲಿಗಾರ, ಗಣಕಯಂತ್ರ ಸಹಾಯಕ, ನಿರಗಂಟಿ, ಸಿಪಾಯಿ, ಕಸಗೂಡಿಸುವವರು, ಚರಂಡಿ ಸ್ವಚ್ಛಗೊಳಿಸುವವರು ಎಂಬ ಹುದ್ದೆಗಳಲ್ಲಿ 50ಸಾವಿರಕಿಂತ ಹೆಚ್ಚಿನ ಜನ ಕೆಲಸ ನಿರ್ವಹಿಸುತ್ತಿರುವರು ಕರ್ನಾಟಕ ಸರಕಾರವು ಈ ಎಲ್ಲಾ ನೌಕರರಿಗೆ ಪೆಬ್ರವರಿ 2011ರಲ್ಲಿ ಕನಿಷ್ಟ ವೇತನ ನಿಗದಿಗೊಳಿಸಿ ವೇತನ ಪಾವತಿಸಲು ಆದೇಶ ಹೊರಡಿಸಿದೆ.ರಾಜ್ಯದಲ್ಲಿ ಗ್ರಾಮ ಪಂಚಾಯತಗಳಲ್ಲಿ ಆದಾಯದ ಕೊರತೆ ಹಾಗೂ ...ಯ ಸಂಸ್ಥೆಗಳ ಅಧಿಕಾರಿಗಳ ಹಾಗೂ ಜನ ಪ್ರತಿನಿಧಿಗಳು ಸಿಬ್ಬಂದಿಗೆ ವೇತನ ನೀಡಲು ತೋರುತ್ತಿರುವ ಅಸಡ್ಡೆ ಭಾವನೆಯಿಂದ ಒಂದು ವರ್ಷದಿಂದ ವೇತನ ಸಿಗದೆ ಹಲವಾರು ನೌಕರರು ಅತ್ಯಂತ ಕಷ್ಟದಲ್ಲಿ ಜೀವನ ಸಾಗಿಸುತ್ತಿರುವರು. ರಾಜ್ಯದ 4ಕೋಟಿ ಜನರಿಗೆ ಕುಡಿಯಲು ನೀರನ್ನು ಸಮರ್ಪಕವಾಗಿ ಒದಗಿಸುವ 30 ಸಾವಿರ ನೌಕರರಿಗೆ ಕನಿಷ್ಟ ವೇತನವಿಲ್ಲದೆ ಕೊಡುವ ಅಲ್ಪ ವೇತನ ಕೂಡ ಪ್ರತಿ ತಿಂಗಳು ಸಿಗುತ್ತಿಲ್ಲ. ಕಾರಣ ಕರ್ನಾಟಕ ರಾಜ್ಯ ಪಂಚಾಯತ್ ನೌಕರರ ಸಂಘಟನೆಯು ರಾಜ್ಯದ ಮೂರನೇ ಹಣಕಾಸು ಆಯೋಗವು ಸಿಪಾರಸ್ಸು ಮಾಡಿದಂತೆ ನೌಕರರ ವೇತನಕ್ಕೆ ಪ್ರತ್ಯೇಕ ಅನುದಾನ ನೀಡಲು ಒತ್ತಾಯಿಸಿದೆ.

ಇತ್ತೀಚೆಗೆ ಸರಕಾರವು ಉಮಾದೇವಿ ಪ್ರಕರಣವನ್ನು ಮುಂದಿಟ್ಟು ಕೊಂಡು 1993 ರಿಂದ ನೇಮಕಗೊಂಡವರು ಜಿಲ್ಲಾ ಪಂಚಾಯತ ಪೂರ್ವಾನುಮತಿ ಪಡೆದುಕೊಂಡಿರಬೇಕು. ಪಡೆಯದೇ ನೇಮಕಗೊಂಡ ನೌಕರರದ್ದು ಅಕ್ರಮ ನೇಮಕಾತಿಯೆಂದು ಆದೇಶ ನೀಡಿರುವುದು ನೌಕರರ ಜೀವನದ ಜೊತೆ ಚೆಲ್ಲಾಟ ಆಡಿದಂತೆ ಆಗಿದೆ. ಈ ಆದೇಶವನ್ನು ತಕ್ಷಣ ರದ್ದು ಪಡಿಸಬೇಕಿದೆ.



ಈ ನೌಕರರರ ಸಂಘಟನೆಯ ಸತತ ಹೋರಾಟದಿಂದ ರಾಜ್ಯದಲ್ಲಿ 3000 ನೌಕರರಿಗೆ ಗ್ರೇಡ 2 ಕಾರ್ಯದರ್ಶಿ ಹಾಗೂ ಲೆಕ್ಕ ಸಹಾಯಕ ಹುದ್ದೆಗೆ ನೇಮಕಾತಿ ಹೊಂದಿದ್ದರಿಂದ ಎಸ್,ಎಸ್,ಎಲ್.ಸಿ ಪಾಸಾದ ನಿರಗಂಟಿ ಅಥವಾ ಇನ್ನಿತರ ಹುದ್ದೆಗಳಲ್ಲಿ ಕನಿಷ್ಟ 5ವರ್ಷ ಸೇವೆ ಸಲ್ಲಿಸಿದ ನೌಕರರಿಗೆ ಬಡ್ತಿ ನೀಡಲು ಸರಕಾರ 2008ರಲ್ಲಿ ಆದೇಶ ಹೊರಡಿಸಿದೆ. ಅದಕ್ಕಾಗಿ ತಾಲೂಕ ಮಟ್ಟದ ಈ ನೌಕರರ ಸಾಮಾನ್ಯ ಪಟ್ಟಿಯನ್ನು ತಯಾರಿಸಿ ತೆರವಾದ ಗುಮಾಸ್ತ ಅಥವಾ ಕರವಸೂಲಿಗಾರ ಹುದ್ದೆಗೆ ಬಡ್ತಿ ನೀಡಬೇಕು.

ಈ ಹಿಂದೆ ಇದ್ದ ಸಿಬ್ಬಂದಿಯ ಸ್ಟಾಪಿಂಗ್ ಮಾದರಿಯಲ್ಲಿ ಬೆರಳಚ್ಚುಗಾರ ಎಂದು ಇದ್ದು ಈಗ ಬೆರಳಚ್ಚು ಯಂತ್ರಗಳು ಹೋಗಿ ಅದರ ಸ್ಥಾನದಲ್ಲಿ ಗಣಕಯಂತ್ರ (ಕಂಪ್ಯೂಟರ್) ಬಂದಿವೆ. ಈಗ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿವೆ. ಇವುಗಳನ್ನು ಆಪರೇಟ ಮಾಡಲು ಒಬ್ಬ ಸಹಾಯಕನನ್ನು ನೇಮಕ ಮಾಡಿಕೊಂಡಿದ್ದು ಅವರನ್ನು ಹೊರಗುತ್ತಿಗೆ ನೀಡಿದೆ. ಬೆರಳಚ್ಚುಗಾರ ಹುದ್ದೆಯನ್ನು ಬದಲಾಯಿಸಿ ಗಣಕಯಂತ್ರ ಸಹಾಯಕ ಎಂದು ಮಾರ್ಪಡಿಸಿ ಅವರನ್ನು ಮುಂದುವರೆಸಲು ಸಂಘ ಒತ್ತಾಯಿಸಿದೆ.

ಸರಕಾರವು ಈ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಜನವರಿ 17, 2013 ರಿಂದ ಅನಿರ್ಧಿಷ್ಟ ಚಳುವಳಿಯನ್ನು ಬೆಂಗಳೂರಿನಲ್ಲಿ ಆರಂಭಿಸಿದೆ. ಈ ಚಳುವಳಿಗೆ ರಾಜ್ಯದ 30 ಜಿಲ್ಲೆಗಳಿಂದ 12ಸಾವಿರಕ್ಕಿಂತಲು ಹೆಚ್ಚು ನೌಕರರು ಭಾಗವಹಿಸಿದ್ದಾರೆ. ತಕ್ಷಣ ಮುಖ್ಯ ಮಂತ್ರಿಗಳು ಈ ನೌಕರರ ಬೇಡಿಕೆಗಳನ್ನು ಈಡೇರಿಸಲು ಮದ್ಯಪ್ರವೇಶಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕಿದೆ. ●

ಮುಖ್ಯಮಂತ್ರಿ ಭರವಸೆ, ಹೋರಾಟದ ಮುಂದುವರಿಕೆ

ರಾಜ್ಯದ ಮೂಲೆ ಮೂಲೆಗಳಿಂದ ಬಂದ 12ಸಾವಿರಕ್ಕೂ ಅಧಿಕ ನೌಕರರು ಬೆಂಗಳೂರಿನ ಕೇಂದ್ರ ರೈಲ್ವೇ ನಿಲ್ದಾಣದಿಂದ ವಿಧಾನಸೌಧದತ್ತ ಹೊರಟರು. ಪೋಲೀಸರು ತಡೆದದ್ದರಿಂದ ಕಾಳಿದಾಸ ಮಾರ್ಗದಲ್ಲಿಯೇ ಧರಣಿ ಆರಂಭಿಸ ಲಾಯಿತು. ಅಲ್ಲಿ ನೌಕರರನ್ನು ಉದ್ದೇಶಿಸಿ ರಾಜ್ಯ ನಾಯಕರು ಮಾತನಾಡಿ ಬೇಡಿಕೆಗಳನ್ನು ಸರಕಾರ ಈಡೇರಿಸದೇ ಕದಲುವುದಿಲ್ಲ ಎಂಬ ಸಂದೇಶವನ್ನು ನೀಡಿದರು.

ಆ ಬಳಿಕ ಅಲ್ಲಿಗೆ ಆಗಮಿಸಿದ ಪಂಚಾಯತ್ ಇಲಾಖೆ ಪ್ರಧಾನ ಕಾರ್ಯದರ್ಶಿ ರಮಣಾರೆಡ್ಡಿಯವರು ಚರ್ಚಿಸಲು ಒಂದು ಸಭೆಯನ್ನು ಕರೆಯುವುದಾಗಿ ಭರವಸೆ ನೀಡಿದರು. ಆ ಬಳಿಕ ಎರಡನೇ ದಿನಕ್ಕೆ ಧರಣಿ ಮುಂದುವರಿದಿದೆ. ನಂತರ 18ರಂದು ಸಂಘದ ರಾಜ್ಯ ಮುಖಂಡರ ನಿಯೋಗವು ಭೇಟಿ ಮಾಡಿ ಬೇಡಿಕೆಗಳ ಬಗ್ಗೆ ಚರ್ಚಿಸಿ ಈಡೇರಿಸಲು ಆಗ್ರಹಿಸಲಾಯಿತು. ಈ ಕುರಿತು ಮಾತನಾಡಿದ ಮುಖ್ಯಮಂತ್ರಿಗಳು ಪರಿಶೀಲಿಸಿ ಕ್ರಮವಹಿಸುವುದಾಗಿ ಭರವಸೆ ನೀಡಿದ್ದಾರೆ. ಈ ನಿಯೋಗದಲ್ಲಿ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಪ್ರಧಾನ ಕಾರ್ಯದರ್ಶಿ ಎಂ.ಬಿ. ನಾಡಗೌಡ, ಉಪಾದ್ಯಕ್ಷರಾದ ವಿ.ಪಿ.ಕುಲಕರ್ಣಿ ಯವರಿದ್ದರು. ಹೋರಾಟ ಮುಂದುವರಿದಿದೆ. ●

‘ಬೀದಿಗೆ ತಳ್ಳುವ’ ಸರ್ಕಾರದ ಧೋರಣೆ ಖಂಡಿಸಿ ಬೀದಿಗೆ ಬಂದಿರುವ ನರ್ಸ್‌ಗಳು

‘ನನಗೆ ವಯೋಮಿತಿ ಮೀರಿದೆ. ನಾನು 4-5 ವರ್ಷಗಳಿಂದ ವಿಕ್ಟೋರಿಯಾ ಅಸ್ಪತ್ರೆಯಲ್ಲಿ ನರ್ಸ್ ಅಗಿ ದುಡಿಯುತ್ತಿದ್ದೇನೆ. ನಮಗೆ ತಿಂಗಳಿಗೆ 4 ದಿವಸ ಮಾತ್ರ ರಜೆ. ಈಗ ಏಕಾಏಕಿ ನಮನ್ನು ಹೊರ ಹಾಕ್ತೀವಿ ಹೊಸದಾಗಿ ನೇಮಕಾತಿ ಅಧಿಸೂಚನೆ ಹೊರಡಿಸಿದ್ದೀವಿ. ನೀವು ಹೊರ ಹೊಗಿ ಎಂದಿದ್ದಾರೆ. ಈಗ ನಾವು ಬೀದಿಗೆ ಬಿದ್ದಿದ್ದೀವಿ. ನಮಗೆ ನ್ಯಾಯ ಕೊಡಿ. ನಮ್ಮನ್ನು ಖಾಯಂ ಗೊಳಿಸಿ... ಹೀಗೆ ಬಿಕ್ಕಿ ಬಿಕ್ಕಿ ಅಳುತ್ತಾ ಅಳಲು ತೊಡಿಕೊಳುತ್ತಿರುವವರು ಬೆಂಗಳೂರು ವೈದಕೀಯ ಕಾಲಜಿನಡಿ (ಸ್ವಾಯತ್ತ ಸಂಸ್ಥೆ) ಬರುವ ವಿಕ್ಟೋರಿಯಾ ಅಸ್ಪತ್ರೆ, ವಾಣಿ ವಿಲಾಸ, ಮಿಂಟೋ, ಬೋರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಗಳಲ್ಲಿ ದುಡಿಯುತ್ತಿರುವ ನರ್ಸ್‌ಗಳು.



ಈ ರೀತಿಯಲ್ಲಿ ಬೀದಿಗೆ ತಳ್ಳಿರುವ ಬೆಂಗಳೂರು ವೈದ್ಯಕೀಯ ಮಹಾ-ವಿದ್ಯಾಲಯ (ಬಿ.ಎಂ.ಸಿ) ಯೂ ಈ ಹಿಂದೆ ತಾನು ಸ್ವಾಯತ್ತಗೊಳ್ಳಬೇಕೆಂದು ಅವಲತ್ತುಕೊಂಡಾಗ ಪ್ರಗತಿಪರ ಸಂಘಟನೆಗಳು ಚಿಂತಕರು ವಿರೋಧಿಸಿದ್ದು ಉಂಟು. ಈಗ ಸ್ವಾಯತ್ತ ಪಡೆದುದರ ಮರ್ಮವೇನೆಂದು ಒಂದೊಂದಾಗಿ ಗೊತ್ತಾಗಿ, ರಾಜ್ಯದಲ್ಲೇ ಅತ್ಯಂತ ಪ್ರತಿಷ್ಟಿತ ಸಂಸ್ಥೆ ಎಂದು ಖ್ಯಾತಿ ಹೊಂದಿದ್ದ ಸಂಸ್ಥೆಯನ್ನು ಈಗ ಬೀದಿಗೆ ತಂದು ನಿಲ್ಲಿಸುವ ಕೆಲಸವನ್ನು ಬಿಜೆಪಿ ಸರ್ಕಾರ ಮಾಡಿಸುತ್ತಿದೆ.

ಸ್ವಾಯತ್ತ ಸಂಸ್ಥೆಯ ಮೂಲ ನಿಯಮ ತನ್ನ ಸಂಸ್ಥೆಯ ಸರ್ವಾಂಗೀಣ ಅಭಿವೃದ್ಧಿಗೆ ಅಂದರೆ ತನ್ನ ವ್ಯಾಪ್ತಿಗೆ ಬರುವ ವಿದ್ಯಾರ್ಥಿ ಸಮುದಾಯ ಮತ್ತು ಶಿಕ್ಷಕ ಮತ್ತು ಶೂಶ್ರೂಷಕರು ಆಡಳಿತ ವರ್ಗ ಸೇರಿದಂತೆ ಎಲ್ಲರ ಪ್ರಜಾಸತ್ತಾತ್ಮಕ ಹಕ್ಕಗಳನ್ನು ಖಾತ್ರಿಗೊಳಿಸುವುದು. ವೈದ್ಯಕೀಯ ಸೇವೆ ಮತ್ತು ಸಂಶೋಧನೆಯಲ್ಲಿ ಗುಣಮಟ್ಟವನ್ನು ಎತ್ತಿ ಹಿಡಿಯುವುದು, ಆ ಮುಖಾಂತರ ಸಂಸ್ಥೆಯ ಏಳ್ಗೆಯನ್ನು ಸಾಧಿಸಿ ಮಾದರಿ ಸಂಸ್ಥೆಯಾಗುವುದಾಗಿರುತ್ತದೆ. ಇದರಲ್ಲಿ ಅಗತ್ಯವಾಗಿ ಪ್ರಾಧ್ಯಾಪಕರು, ನರ್ಸ್‌ಗಳು, ಆಡಳಿತ ವರ್ಗ ಇನ್ನಿತರ ಮಾನವ ಸಂಪನ್ಮೂಲ ಮತ್ತು ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿಸಿಕೊಳ್ಳುವುದು ಸೇರಿರುತ್ತದೆ.

ಇಂಥಹ ಇಲ್ಲಿ ಕೆಲಸಗಳಿಗೆ ಸ್ವಾಯತ್ತ ಸಂಸ್ಥೆಯಾಗಿ ಆದ್ಯತೆ ಕೊಡದೆ, ನರ್ಸ್‌ಗಳನ್ನು ಖಾಯಂಗೊಳಿಸದೆ ಸ್ಟೈಫಂಡರಿ ಆಧಾರದಲ್ಲೇ, ಅತ್ಯಂತ ಕಡಿಮೆ ಸಂಬಳದಲ್ಲಿ, ಅಮಾನವೀಯವಾಗಿ ದುಡಿಸಿಕೊಳ್ಳಲಾಗುತ್ತಿದೆ.

ಈ ಮಧ್ಯೆ ಅಖಿಲ ಭಾರತ ವೈದ್ಯಕೀಯ ಪರಿಷತ್‌ನಿಂದ ಅನುಮತಿ ಪಡೆಯಲಿಲ್ಲ. ಹಾಲಿ

ಪುಟ 10 ಕ್ಕೆ

ಸೌಜನ್ಯ ಕೊಲೆ, ಮಹಿಳಾ ದೌರ್ಜನ್ಯ ವಿರೋಧಿಸಿ ಪ್ರದರ್ಶನಗಳು

ಎಸ್‌ಎಫ್‌ಐ ಪ್ರತಿಭಟನೆ

ಬೆಳ್ತಂಗಡಿ ತಾಲೂಕು ಉಜಿರೆ ಎಸ್‌ಡಿಎಂ ಕಾಲೇಜು ವಿದ್ಯಾರ್ಥಿನಿ ಧರ್ಮಸ್ಥಳ ಗ್ರಾಮದ ಸೌಜನ್ಯಾ ಎಂಬ ಯುವತಿಯು ಅತ್ಯಾಚಾರಕ್ಕೊಳಗಾಗಿ ಕೊಲೆಗೈಯಲ್ಪಟ್ಟು ಎರಡು ತಿಂಗಳುಗಳೇ ಕಳೆದಿದ್ದರೂ ನೈಜ ಆರೋಪಿಗಳನ್ನು ಬಂಧಿಸಲು ಪೋಲಿಸರಿಗೆ ಇದುವರೆಗೂ ಸಾಧ್ಯವಾಗಿಲ್ಲ. ಜಿಲ್ಲೆಯ ಜನತೆಯು ಆಕ್ರೋಶಕ್ಕೆ ಮಣಿದು ಕಾಟಾಚಾರಕ್ಕೆ ಒಬ್ಬ ಮಾನಸಿಕ ಅಸ್ವಸ್ಥನನ್ನು ಬಂಧಿಸಿ ಕೇಸನ್ನು ಮುಚ್ಚಿ ಹಾಕುವ ಯತ್ನ ಮಾಡಲಾಗುತ್ತಿದೆ. ಈ ಅತ್ಯಾಚಾರ ಕೊಲೆಯ ಹಿಂದೆ ಇನ್ನೂ ಬೇರೆ ಅಪರಾಧಿಗಳಿದ್ದಾರೆ ಎಂಬ ವದಂತಿಗಳಿವೆ. ಕೆಲವು ಸ್ಥಾಪಿತ ಹಿತಾಸಕ್ತಿಗಳು ಈ ಪ್ರಕರಣದ ತನಿಖೆ ತಮ್ಮ ಊರಿನ ಘನತೆಗೆ ಕುಂದು ಎಂದು ಭಾವಿಸಿ, ತನಿಖೆಯನ್ನು ಮುಂದೊಯ್ಯದಂತೆ ಪೋಲಿಸು ಇಲಾಖೆಯ ಮೇಲೆ ಒತ್ತಡ ಹಾಕುತ್ತಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರ ಮೇಲೆ ಯುವತಿಯರ ಮೇಲೆ ಹಲವಾರು ದೌರ್ಜನ್ಯಗಳು ವರದಿಯಾಗುತ್ತಿದ್ದರೂ, ಯಾವುದೇ ಅಪರಾಧಿಗಳನ್ನು ಬಂಧಿಸಿ ಸೂಕ್ತ ಶಿಕ್ಷೆ ನೀಡುವಲ್ಲಿ ಪೋಲಿಸು ಇಲಾಖೆ ಮತ್ತು ಸರಕಾರ ವಿಫಲವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸೌಜನ್ಯ ಕೊಲೆ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಬೇಕೆಂದು ಆಗ್ರಹಿಸಿ ಜನವರಿ 9 ರಂದು ಎಸ್‌ಎಫ್‌ಐ ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ವಿದ್ಯಾರ್ಥಿಗಳು ಪ್ರತಿಭಟನಾ ಪ್ರದರ್ಶನ ನಡೆಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಎಸ್‌ಎಫ್‌ಐ ಜಿಲ್ಲಾ ಸಮಿತಿ ಅಧ್ಯಕ್ಷ ನಿತಿನ್ ಕುತ್ತಾರ್, ಕಾರ್ಯದರ್ಶಿ ರಝಾಕ್ ಮೊಂಟೆಪದವು, ವಿದ್ಯಾರ್ಥಿನಿ ನಾಯಕಿ ಧನಲಕ್ಷ್ಮಿ ಮಾತನಾಡಿದರು.

ಎಸ್‌ಎಫ್‌ಐ ಜಿಲ್ಲಾ ಸಮಿತಿಯ ಚರಣ್ ಪಂಜಿಮೊಗರು, ಹಂಝ ಕಿನ್ಯ, ಸಂಕೇತ್ ಕುತ್ತಾರ್, ರಿತೇಶ್ ಬಜಾಲ್, ಜ್ಯೋತಿ, ಸುಕನ್ಯಾ ಪ್ರತಿಭಟನೆಯಲ್ಲಿ ಉಪಸ್ಥಿತರಿದ್ದರು. ಚರಣ್ ಸ್ವಾಗತಿಸಿ, ಹಂಝ ವಂದಿಸಿದರು. ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



★

ರಸ್ತೆ, ಡ್ರೈನೇಜ್ ದುರಸ್ತಿ ಆಗ್ರಹಿಸಿ ಹಮಾಲಿಗಳಿಂದ ಕೈಗಾಡಿ ಪ್ರತಿಭಟನೆ:



ಮಂಗಳೂರು ಬಂದರು ಪ್ರದೇಶದ ರಸ್ತೆಗಳು ಹಾಗೂ ಡ್ರೈನೇಜ್ ತೀರಾ ಕೆಟ್ಟು ಹೋಗಿದ್ದು, ಅಲ್ಲಿ ಕೈಗಾಡಿ ಬಳಸಿ ಹಮಾಲಿ ವೃತ್ತಿ ಮಾಡುತ್ತಿರುವ ಕಾರ್ಮಿಕರು ತುಂಬ ಬವಣೆ ಪಡಬೇಕಾಗಿದೆ. ರಸ್ತೆಯಲ್ಲಿ ಹರಿಯುವ ಕೊಳಚೆ ನೀರನ್ನು, ರಸ್ತೆ ಹೊಂಡಗಳನ್ನು ಹಾಗೂ ರಸ್ತೆಯಲ್ಲಿ ಸಾಗುವ ವಾಹನಗಳನ್ನು ತಪ್ಪಿಸಿ ಪ್ರಾಣ ಉಳಿಸಿಕೊಂಡು ಕೆಲಸ ಮಾಡುವುದೇ ಕಷ್ಟವಾದ ಪರಿಸ್ಥಿತಿಯಲ್ಲಿ, ಮಂಗಳೂರು ಮಹಾ ನಗರ ಪಾಲಿಕೆ ಹಲವಾರು ಬಾರಿ ಮನವಿ ನೀಡಿ ಗಮನ ಸೆಳೆದಿದ್ದರೂ ಕಿವುಡಾಗಿ ವರ್ತಿಸುತ್ತಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಹಾಗೂ ಮಹಾ ನಗರ ಪಾಲಿಕೆಯ ಗಮನ ಸೆಳೆಯಲು ಕೈಗಾಡಿಗಳನ್ನು ಎಳೆದುಕೊಂಡು ಜಿಲ್ಲಾಧಿಕಾರಿ ಕಚೇರಿಯ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ಮಾಡಬೇಕಾಯಿತು ಎಂದು ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಹೇಳಿದರು.

ಜನವರಿ 11 ರಂದು ಸಿಐಟಿಯು ಸಂಯೋಜಿತ ಬಂದರು ಶ್ರಮಿಕ ಸಂಘದ ನೇತೃತ್ವದ ಪ್ರತಿಭಟನೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.



ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಮುಖಂಡರಾದ ಸುನಿಲ್ ಕುಮಾರ್ ಬಜಾಲ್ ಕೂಡಾ ಮಾತನಾಡಿದರು. ಬಂದರು ಶ್ರಮಿಕ ಸಂಘದ ಅಧ್ಯಕ್ಷ ವಿಲ್ಲಿ ವಿಲ್ಸನ್, ಕಾರ್ಯದರ್ಶಿ ಬಿ.ಕೆ.ಇಮ್ತಿಯಾಜ್, ಖಜಾಂಚಿ ಲ್ಯಾನ್ಸಿ ನೊರೊನ್ಹಾ ಮತ್ತಿತರರು ಪ್ರತಿಭಟನೆಯನ್ನು ಸಂಘಟಿಸಿದ್ದರು. ಪ್ರತಿಭಟನೆಯ ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಜಿಲ್ಲಾಧಿಕಾರಿ ಕಚೇರಿ ಎದುರು ಖಾಲಿ ಕೈಗಾಡಿಗಳ ಪ್ರದರ್ಶನ ಸಾರ್ವಜನಿಕರ ಗಮನ ಸೆಳೆಯಿತು.

★

ಬೀದಿ ಬದಿ ವ್ಯಾಪಾರಿಗಳಿಂದ ಮಂಗಳೂರು ಪಾಲಿಕೆ ಮುಂದೆ ಪ್ರತಿಭಟನೆ

ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವಲ್ಲಿ ಮಂಗಳೂರು ಮಹಾನಗರ ಪಾಲಿಕೆ ವಿಳಂಬ ಧೋರಣೆ ತೋರುತ್ತಿರುವುದನ್ನು ಖಂಡಿಸಿ ಜನವರಿ 12 ರಂದು ಬೀದಿ ಬದಿ ವ್ಯಾಪಾರಿಗಳು ಸಿಐಟಿಯು ನೇತೃತ್ವದಲ್ಲಿ ಮಂಗಳೂರು ಮಹಾ ನಗರ ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಸಮರ್ಪಕ ವ್ಯವಸ್ಥೆ ಕಲ್ಪಿಸಬೇಕೆಂದು ಕೇಂದ್ರ ಸರಕಾರ 2009 ರಲ್ಲಿ ರಾಷ್ಟ್ರೀಯ ನೀತಿಯನ್ನು ಅಂಗೀಕರಿಸಿದೆ. ಈ ಸಂಬಂಧ 2011 ರಿಂದ ವರ್ಷಕ್ಕೂ ಮೀರಿ ಮಂಗಳೂರಿನ ಬೀದಿ ಬದಿ ವ್ಯಾಪಾರಿಗಳು ಸಿಐಟಿಯು ನೇತೃತ್ವದಲ್ಲಿ ಪುನ: ಪುನ: ಪ್ರತಿಭಟನೆ ನಡೆಸಿದ್ದು, ಅದರ ಪರಿಣಾಮವಾಗಿ ಪರ್ಯಾಯ ವ್ಯವಸ್ಥೆಗಾಗಿ ಮಂಗಳೂರು ಪಾಲಿಕೆಯ ಸಾಮಾನ್ಯ ಸಭೆಯಲ್ಲೂ ನಿರ್ಣಯ ಅಂಗೀಕರಿಸಲಾಗಿದೆ. ಆದರೆ ಅದಿನ್ನೂ ಜಾರಿಗೆ ಬಂದಿಲ್ಲ ಎಂದು ಭಾಷಣ ಮಾಡಿದ ಪ್ರತಿಭಟನಾಕಾರರು ಟೀಕಿಸಿದರು. ಪಾಲಿಕೆ ಅಧಿಕಾರಿಗಳು ಕಸ ವಿಲೇವಾರಿ ನೆಪದಲ್ಲಿ ಬೀದಿ ಬದಿ ವ್ಯಾಪಾರಿಗಳನ್ನು ಬೆದರಿಸಿ 50 ರೂ.ನಿಂದ 100. ರೂ.ವರೆಗೂ ಕೀಳುವ ಮೂಲಕ ಹಗಲು ದರೋಡೆ ನಡೆಸುತ್ತಿದ್ದಾರೆ. 2011 ರಲ್ಲಿ ಟೌನ್ ವೆಂಡಿಂಗ್ ಸಮಿತಿ ರಚಿಸಿದ್ದರೂ ಇದುವರೆಗೂ ಆಯುಕ್ತರು ಸಭೆ ನಡೆಸಿಲ್ಲ ಎಂದು ಅವರು ದೂರಿದರು.

ಪ್ರತಿಭಟನೆಯನ್ನುದ್ದೇಶಿಸಿ ಸಿಐಟಿಯು ಮಂಗಳೂರು ನಗರ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿದರು. ಬೀದಿ ಬದಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಮುಹಮ್ಮದ್ ಮುಸ್ತಾಫ, ಮುಖಂಡರಾದ ಸಂತೋಷ್, ಬಿ.ಎಂ.ಹಸನ್, ಆಸಿಫ್, ಅಣ್ಣಯ್ಯ, ಶೋಭಾ, ಮೇರಿ ಡಿಸೋಜ, ಸಂಶುದ್ದೀನ್, ಜಾಕಿರ್ ಹುಸೇನ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಇದಕ್ಕೂ ಮೊದಲು ಪ್ರತಿಭಟನಾಕಾರರು ಮಂಗಳೂರು ಮೈದಾನ್ ಸಿಐಟಿಯು ಕಚೇರಿಯಿಂದ ಮಹಾನಗರ ಪಾಲಿಕೆ ಕಚೇರಿ ವರೆಗೆ ಮೆರವಣಿಗೆ ನಡೆಸಿದರು.

★

ಮಹಿಳೆಯರ ಮೇಲೆ ದೌರ್ಜನ್ಯ ವಿರೋಧಿಸಿ ಮಂಗಳೂರಿನಲ್ಲಿ ಪ್ರತಿಭಟನೆ:

ಮಹಿಳೆಯರ ಮೇಲೆ ದೇಶಾದ್ಯಂತ ನಡೆಯುತ್ತಿರುವ ದೌರ್ಜನ್ಯಗಳನ್ನು ವಿರೋಧಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜನವರಿ 12 ರಂದು ದ.ಕ.ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.



ದೆಹಲಿಯಲ್ಲಿ ಸಾಮೂಹಿಕ ಅತ್ಯಾಚಾರ ಪ್ರಕರಣ ಅಮಾನುಷವಾದುದು, ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಸೌಜನ್ಯ ಎಂಬ ವಿದ್ಯಾರ್ಥಿನಿ ಎರಡು ತಿಂಗಳ ಹಿಂದೆ ಧರ್ಮಸ್ಥಳದಲ್ಲಿ ಅತ್ಯಾಚಾರಕ್ಕೊಳಗಾಗಿ ಕೊಲೆಯಾಗಿದ್ದಾಳೆ. ಕೆಲವು ದಿನಗಳ ಹಿಂದೆ ಕನ್ಯಾನ ಎಂಬಲ್ಲಿಂದ ಯುವತಿಯೊಬ್ಬಳನ್ನು ಸಾಗಣೆ ಮಾಡಿ ಬಲಾತ್ಕಾರ ನಡೆಸಲಾಗಿದೆ. ಈ ಎರಡೂ ಪ್ರಕರಣಗಳಲ್ಲಿ ನ್ಯಾಯವಾದ ತನಿಖೆಯಾಗಿಲ್ಲ ಎಂದು ಪ್ರತಿಭಟನೆ ವೇಳೆ ಖಂಡಿಸಲಾಯಿತು.

ಪ್ರತಿಭಟನೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ, ಹಿರಿಯ ಮುಖಂಡ ಕೆ.ಆರ್.ಶ್ರೀಯಾನ್ ಮಾತನಾಡಿದರು. ಜಿಲ್ಲಾ ಸಮಿತಿ ಮುಖಂ ಉಪಸ್ಥಿತರಿದ್ದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಜೆಟ್ ಬಿಸಿ ಆರಂಭವಾಗಿದೆ. ಹಣಕಾಸು ಮಂತ್ರಿಗಳು ನವ-ಉದಾರವಾದಿ ಸುಧಾರಣಾ ದಿಕ್ಕು-ದಾರಿ ಮತ್ತಷ್ಟು ಬಲಗೊಂಡಿದೆ ಎಂಬುದರ ಸಂಕೇತ ನೀಡಿದ್ದಾರೆ. ಇದು ಎರಡು ಭಾರತಗಳ ನಡುವಿನ ಕಂದರವನ್ನು ಮತ್ತಷ್ಟು ಹೆಚ್ಚಿಸುವುದು ಖಂಡಿತ. ಬಜೆಟಿನಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಖುಶಿಪಡಿಸುವ ಇನ್ನಷ್ಟು ಪ್ರಸ್ತಾವಗಳಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ.

ಬಜೆಟ್ 2013 ನಿರೀಕ್ಷೆ

ಅದೇ ಕಾರ್ಯತಂತ್ರ, ಅದೇ ಕಪಟ, ಅದೇ ಕ್ರಿಮಿನಲ್ ನಿರಾಕರಣೆ

ಸೀತಾರಾಂ ಯೆಚೂರಿ


ವಾರ್ಷಿಕ ಬಜೆಟ್-ಪೂರ್ವ ಉತ್ಸುಕತೆಗಳು ಗರಿ ಬಿಚ್ಚಲಾರಂಭಿಸಿವೆ. ಈ ಬಜೆಟಿನಲ್ಲಿ ತಮಗೇನಿರಬೇಕು ಎಂದು ಎಲ್ಲ ಜನಗಳು, ವಿವಿಧ ವಿಭಾಗಗಳು ಆಶಯ ಪಟ್ಟಿ ಸಿದ್ಧಪಡಿಸಲಾರಂಭಿಸಿದ್ದಾರೆ.

ಈ ಬಜೆಟ್ ಬರುತ್ತಿರುವುದು ನಮ್ಮ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಒಂದು ಅತ್ಯಂತ ಕೆಟ್ಟ ವರ್ಷವನ್ನು ಕಂಡಿರುವ ಹಿನ್ನೆಲೆಯಲ್ಲಿ. ಈ ಹಣಕಾಸು ವರ್ಷದಲ್ಲಿ ಜಿಡಿಪಿ(ಒಟ್ಟು ರಾಷ್ಟ್ರೀಯ ಉತ್ಪನ್ನ) ಬೆಳವಣಿಗೆ ದರ ಎಷ್ಟಿತ್ತು ಎಂಬುದು ಸದ್ಯದಲ್ಲೇ ಪ್ರಕಟವಾಗಲಿದೆ. ಯಾವ ಅಂದಾಜಿನ ಪ್ರಕಾರವೂ ಅದು 6 ಶೇ.ದ ಹತ್ತಿರ ಇರುವ ಸಾಧ್ಯತೆಯಿಲ್ಲ. ಆರ್ಥಿಕತೆ ದೊಡ್ಡ ಪ್ರಮಾಣದಲ್ಲಿ ನಿಧಾನಗೊಳ್ಳುತ್ತಿದೆ, ಅದರ ಸಹಜ ಪರಿಣಾಮ ಎಂಬಂತೆ ನಿರುದ್ಯೋಗ ಹೆಚ್ಚಿದೆ, ಆದಾಯಗಳ ಮಟ್ಟಗಳು ಇಳಿದಿವೆ. ಇದೂ ಸಾಲದೆಂದು ಎಲ್ಲ ಸರಕುಗಳ, ವಿಶೇಷವಾಗಿ ಆಹಾರ ಸಾಮಗ್ರಿಗಳ ನಿರಂತರ ಬೆಲೆಯೇರಿಕೆಗಳು ಜನಗಳ ಆದಾಯಗಳ ನಿಜಮೌಲ್ಯವನ್ನು ಇಳಿಸುತ್ತಲೇ ಇವೆ. ಇಂತಹ ಪರಿಸ್ಥಿತಿಗಳಲ್ಲಿ ತಮ್ಮ ಜೀವನಾಧಾರಗಳನ್ನು ಉತ್ತಮಗೊಳಿಸಿಕೊಳ್ಳಲು ಕೆಲವು ಪರಿಹಾರವನ್ನು, ಅದಕ್ಕಾಗಿ ಕೆಲವು ರಿಯಾಯ್ತಿಗಳನ್ನು ವಿವಿಧ ಜನವಿಭಾಗಗಳು ಕೇಳುವುದು ಸಹಜವೇ.

ಈ ವಿವಿಧ ಆಶಯ ಪಟ್ಟಿಗಳಲ್ಲಿ ಅತ್ಯಂತ ಪ್ರಭಾವಶಾಲಿಯಾಗಿರುವಂತದ್ದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ನೇತೃತ್ವದ ನವ-ಉದಾರವಾದದ್ದು. ಅದು ತನ್ನ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೇರಿಸಲಿಕ್ಕಾಗಿ ನಮ್ಮ ಆರ್ಥಿಕತೆಯನ್ನು ತೆರೆಸುವ ಪ್ರಯತ್ನ ನಡೆಸಿದೆ. ಈ ಸಂಚಿಕೆ ಮುದ್ರಣಕ್ಕೆ ಸಿದ್ಧವಾಗುವ ವೇಳೆಗೆ, ಶೇರು ಸೂಚ್ಯಂಕ ಯುಪಿಎ-2 ಸರಕಾರದ ಬಜೆಟ್ ನಿರೀಕ್ಷೆಯಲ್ಲಿ 20,000 ದ ಘಟ್ಟ ಇನ್ನೇನು ದಾಟಲಿದೆಯಂತೆ. ಈ ಆಶಾವಾದಕ್ಕೆ ಪೋಷಣೆ ಈ ಸರಕಾರ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತೀಯ ದೊಡ್ಡ ಬಂಡವಾಳಿಗರನ್ನು ತೃಪ್ತಿಪಡಿಸಲು ಎಷ್ಟು ಬೇಕಾದರೂ ಬಗ್ಗಲು ಸಿದ್ಧವಿದೆಯೆಂಬ ಸಂಗತಿಯೇ. ಈಗಾಗಲೇ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ, ವ್ಯಾಪಕ ವಿರೋಧದ ನಡುವೆಯೂ ಅವಕಾಶ ಕಲ್ಪಿಸಲಾಗಿದೆ. ಬ್ಯಾಂಕಿಂಗ್ ಸುಧಾರಣೆಗಳ ಶಾಸನ ತಂದು ಬ್ಯಾಂಕ್ ರಾಷ್ಟ್ರೀಕರಣದ ಗಳಿಕೆಗಳನ್ನೆಲ್ಲ ಸಂಪೂರ್ಣವಾಗಿ ಇಲ್ಲವಾಗಿಸಲಾಗಿದೆ, ವಿದೇಶಿ ಬ್ಯಾಂಕುಗಳು ಭಾರತೀಯ ಖಾಸಗಿ ಬ್ಯಾಂಕುಗಳನ್ನು ವಹಿಸಿಕೊಳ್ಳಲು ಅನುಕೂಲ ಮಾಡಿಕೊಡಲಾಗಿದೆ. ವಿಮಾ ವಲಯದಲ್ಲಿ ಎಫ್‌ಡಿಐ ಮಿತಿಯನ್ನು ಏರಿಸಲಾಗುವುದಂತೆ.

ಬಜೆಟ್-ಪೂರ್ವ ಪ್ರಕಟಣೆ

'ಸಾರ್ವತ್ರಿಕ ತೆರಿಗೆ ತೆರವು ನಿರೋಧಕ ನಿಯಮ'ಗಳ(ಜಿಎಎಆರ್)ನ್ನು ಎರಡು ವರ್ಷಗಳ ಕಾಲ ಮುಂದೂಡಲಾಗಿದೆ. ಇದು ಕಳೆದ ಬಜೆಟಿನಲ್ಲಿ ಆಗಿನ ಹಣಕಾಸು ಮಂತ್ರಿಗಳು(ಈಗ ರಾಷ್ಟ್ರಪತಿಗಳು) ತಂದಿದ್ದ ಒಂದು ಕ್ರಮ. ಈ ಮುಂದೂಡಿಕೆ ವಿದೇಶಿ ಹೂಡಿಕೆದಾರರಿಗೆ, ಅದರಲ್ಲೂ ಅವರು ಈ ದೇಶದಲ್ಲಿ ಗಳಿಸುವ ಲಾಭಗಳ ಮೇಲೆ ಎಲ್ಲ ತೆರಿಗೆಗಳಿಂದ ಪಾರಾಗಲು ಮಾರಿಶಸ್ ಕೋಟಿ



ರೂ.ಗಳಿಗಿಂತ ಹೆಚ್ಚು ಲಾಭ ಗಳಿಸುವವರು ಮಾತ್ರ ತೆರಿಗೆ ನೀಡಬೇಕಾಗುತ್ತದೆ ಎಂದು ಮಾರ್ಪಾಟು ಮಾಡಲಾಗಿದೆ. ಅಲ್ಲದೆ, ಇದು ಅನಿವಾಸಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ಯಾವುದೇ ದುಪ್ಪಟ್ಟು ತೆರಿಗೆ ತೆರವು ಸಂಧಿಗಳ ಅಡಿಯಲ್ಲಿ ತೆರಿಗೆ ಪ್ರಯೋಜನ ಪಡೆಯುದವರಿಗೂ ಈ ನಿಯಮಗಳು ಅನ್ವಯವಾಗುವುದಿಲ್ಲ. ನಮ್ಮ ದೇಶದೊಳಕ್ಕೆ ಜೂಜುಕೋರ ಬಂಡವಾಳದ ಹರಿವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲು ಅನುಮತಿ ನೀಡುವ ಕ್ರಮವಾಗಿ ಈ ಹೊಸ ಮಾರ್ಪಾಟುಗಳು ಶೇರು ಮಾರುಕಟ್ಟೆಗಳಲ್ಲಿ ಪಾರ್ಟಿಸಿಪೇಟರಿ ನೋಟ್‌ಗಳ ಮೂಲಕ ಹೂಡಿಕೆ ಮಾಡುವವರಿಗೆ ವಿನಾಯ್ತಿ ನೀಡುತ್ತದೆ. ಅವರು ತಮ್ಮ ಲಾಭಗಳ ಮೇಲೆ ತೆರಿಗೆ ತೆರಬೇಕಾಗಿಲ್ಲ. ಈ ಪಾರ್ಟಿಸಿಪೇಟರಿ ನೋಟ್‌ಗಳ ಮಾರ್ಗದಲ್ಲಿ ವ್ಯಕ್ತಿಗಳಾಗಲಿ, ತಮ್ಮ ಕಂಪನಿಗಳಾಗಲಿ ತಮ್ಮ ಪರಿಚಯವನ್ನು ತಿಳಿಸಬೇಕಿಲ್ಲವಾದ್ದರಿಂದ ಇದು ವ್ಯಾಪಕ ಪ್ರಮಾಣದಲ್ಲಿ ಕಪ್ಪು ಹಣವನ್ನು ಬಿಳಿ ಮಾಡುವ ಮತ್ತು ತೆರಿಗೆ ತಪ್ಪಿಸುವ ಮೂಲವಾಗಿದೆ ಎಂಬುದನ್ನು ನಮ್ಮ ಓದುಗರು ನೆನಪಿಸಿಕೊಳ್ಳಬಹುದು.

ಬಜೆಟ್-ಪೂರ್ವದಲ್ಲಿ ಈ ಪ್ರಕಟಣೆಗಳನ್ನು ಮಾಡಿ ಹಣಕಾಸು ಮಂತ್ರಿಗಳು ನವ-ಉದಾರವಾದಿ ಸುಧಾರಣಾ ದಿಕ್ಕು-ದಾರಿ ಮತ್ತಷ್ಟು ಬಲಗೊಂಡಿದೆ ಎಂಬುದರ ಸಂಕೇತ ನೀಡಿದ್ದಾರೆ. ಇದು ಎರಡು ಭಾರತಗಳ ನಡುವಿನ ಕಂದರವನ್ನು ಮತ್ತಷ್ಟು ಹೆಚ್ಚಿಸುವುದು ಖಂಡಿತ. ಬಜೆಟಿನಲ್ಲಿ ಇಂತಹ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಖುಶಿಪಡಿಸುವ ಇನ್ನಷ್ಟು ಪ್ರಸ್ತಾವಗಳಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ.

ಇದಕ್ಕೆ ಯುಪಿಎ ಸಮರ್ಥನೆಯೆಂದರೆ ಹೆಚ್ಚೆಚ್ಚು ವಿದೇಶಿ ಬಂಡವಾಳ ಹರಿದು ಬಂದರೆ ಹೂಡಿಕೆಗೆ ಹೆಚ್ಚೆಚ್ಚು ಹಣ ಸಿಗುತ್ತದೆ, ಇದು ಹೆಚ್ಚಿನ ಬೆಳವಣಿಗೆ ದರ ಮತ್ತು ನಮ್ಮ ಜನತೆಯ ಸಾರ್ವತ್ರಿಕ ಸಮೃದ್ಧಿಗೆ ಕಾರಣವಾಗುತ್ತದೆ ಎಂಬುದು. ಆದರೆ ಇದು ತಪ್ಪುದಾರಿಗೆಳೆಯುವ ಮತ್ತು ವಂಚಕ ತಿಳುವಳಿಕೆ. ವಾಸ್ತವ ತದ್ವಿರುದ್ಧವಾಗಿದೆ-ವಿದೇಶಿ ಬಂಡವಾಳದ ಹರಿವು ಹೆಚ್ಚಿದರೆ, ಜಾಗತಿಕ ಹಿಂಜರಿತದಿಂದಾಗಿ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಲಾಭವನ್ನು ಗರಿಷ್ಟಗೊಳಿಸಿಕೊಳ್ಳಲು ಅವಕಾಶಗಳು ಇಲ್ಲದಿರುವ ಸನ್ನಿವೇಶದಲ್ಲಿ ನಮ್ಮ ದೇಶದಲ್ಲಿ ತಮ್ಮ ಲಾಭಗಳನ್ನು ಗರಿಷ್ಟಗೊಳಿಸಿಕೊಳ್ಳಲು ಅದಕ್ಕೆ ಸಾಧ್ಯವಾಗುತ್ತದೆಯೇ ಹೊರತು ನಮ್ಮ ದೇಶದೊಳಗೆ ಹೂಡಿಕೆಗೆ ಹಣವನ್ನೇನೂ ಲಭ್ಯಗೊಳಿಸುವುದಿಲ್ಲ. ಅಲ್ಲದೆ, ಈ ರೀತಿ ಲಭ್ಯವಾದರೂ, ಇಂತಹ ಹೂಡಿಕೆಗಳ ಉತ್ಪನ್ನಗಳನ್ನು ಜನಗಳು ತಮ್ಮ ಬಳಕೆಗೆ ಖರೀದಿಸಿದರೆ ಮಾತ್ರವೇ ಇದರಿಂದ ಹೆಚ್ಚಿನ ಆರ್ಥಿಕ ಬೆಳವಣಿಗೆ ಸಾಧ್ಯವಾಗುತ್ತದೆ. ಆದರೆ ಭಾರತೀಯ ಜನತೆಯ ಕೊಳ್ಳುವ ಸಾಮರ್ಥ್ಯ ಇಳಿಮುಖವಾಗುತ್ತಿರುವ ಸನ್ನಿವೇಶದಲ್ಲಿ ಇಂತಹ ಬೆಳವಣಿಗೆಯನ್ನು ನಿರೀಕ್ಷಿಸುವುದು ಕೇವಲ ಭ್ರಮೆಯಾಗುತ್ತದೆ. ಹೀಗೆ ಇಂತಹ ಕಾರ್ಯತಂತ್ರ ಈಗಾಗಲೇ ಶ್ರೀಮಂತರಾಗಿರುವವರ ಲಾಭಗಳನ್ನು ಹೆಚ್ಚಿಸುತ್ತವೆಯಷ್ಟೇ. ಅದೇ ವೇಳೆಗೆ ವಿಶಾಲ ಜನಸಮೂಹಗಳ ಮೇಲೆ ಇನ್ನಷ್ಟು ಆರ್ಥಿಕ ಹೊರೆಗಳನ್ನು ಹಾಕುತ್ತದೆ.

ಇಂತಹ ಒಂದು ಕಾರ್ಯತಂತ್ರದ ಭಾಗವಾಗಿ ಸರಕಾರ ಕಳೆದ ಎರಡು ವರ್ಷಗಳಲ್ಲಿ ನೀಡಿದ ಬೃಹತ್ ತೆರಿಗೆ ರಿಯಾಯ್ತಿಗಳನ್ನು ಮುಂದುವರೆಸಬಹುದು. ಇಂತಹ ರಿಯಾಯ್ತಿಗಳ ಮೊತ್ತ ಬೃಹತ್ ಸ್ವರೂಪದ್ದು, 5.28ಲಕ್ಷ ಕೋಟಿ ರೂ.ಗಳು ಎಂದು ಕಳೆದ ವರ್ಷದ ಬಜೆಟ್ ದಸ್ತಾವೇಜುಗಳು ತೋರಿಸಿವೆ. ಹಣಕಾಸು ಕೊರತೆ ಹಿಂದೆಂದೂ ಕಾಣದಷ್ಟು ಹೆಚ್ಚಿತ್ತು, ಜಿಡಿಪಿಯ 6.9ಶೇ. ಎಂದು ಹೇಳಲಾಗಿತ್ತು. ಅಂದರೆ ಅದು 5.22 ಲಕ್ಷ ಕೋಟಿ ರೂ.ಗಳಷ್ಟಾಗುತ್ತದೆ, ಅಂದರೆ ಸರಕಾರ ಕಾನೂನು ಪ್ರಕಾರ ಸಂಗ್ರಹಿಸಬೇಕಾಗಿದ್ದ, ಅದರೆ ತಾನಾಗಿಯೇ ಬಿಟ್ಟುಕೊಟ್ಟ ತೆರಿಗೆ ಮೊತ್ತಕ್ಕಿಂತ 6000 ಕೋಟಿ ರೂ.ಗಳಷ್ಟು ಕಡಿಮೆ.

ಶುದ್ಧ ಅನ್ಯಾಯ-ಜತೆಗೆ ಗೇಲಿ

ಈಗ ಹಣಕಾಸು ಶಿಸ್ತಿನ ಹೆಸರಲ್ಲಿ, ಈ ವಿಪರೀತ ಕೊರತೆಯ ಮಟ್ಟವನ್ನು ಇಳಿಸಲೆಂದು ಸರಕಾರ ನಿರ್ದಯವಾಗಿ ಪೆಟ್ರೋಲಿಯಂ ಬೆಲೆಗಳನ್ನು ಹೆಚ್ಚಿಸಿದೆ ಮತ್ತು ಸಬ್ಸಿಡಿಗಳನ್ನು ಸಾರಾಸಗಟು ಕಡಿತ ಮಾಡಿದೆ. ಇಂತಹ ಕಾರ್ಯತಂತ್ರ ಮುಂದುವರೆಯುತ್ತದೆ ಎಂದೂ ಅದು ಎಚ್ಚರಿಸಿದೆ. ಪ್ರಧಾನ ಮಂತ್ರಿಗಳು "ಹಣವೇನೂ ಮರಗಳಲ್ಲಿ ಬೆಳೆಯುವುದಿಲ್ಲ" ಎಂದು ಈ ರೀತಿ ಶ್ರೀಮಂತರನ್ನು ಶ್ರೀಮಂತರಾಗಿಸಲು ಬಡವರನ್ನು ಬಡವರಾಗಿಸುವ ಇಂತಹ ನಗ್ನ ಅನ್ಯಾಯವನ್ನು ವಿರೋಧಿಸುವವರನ್ನು ಗೇಲಿ ಮಾಡಿದ್ದಾರೆ.

ಸರಕಾರದ ಧೋರಣೆ ಈ ದಿಕ್ಕಿನಲ್ಲಿ ಸಾಗುತ್ತಿದ್ದರೆ, ಅದರಿಂದ ವಿಪರೀತ ನರಳುವವರು ಗ್ರಾಮೀಣ ಭಾರತದ ನಮ್ಮ ವಿಶಾಲ ಜನಸಮೂಹಗಳು. ಕೃಷಿ ಸಂಕಟ ಮುಂದುವರೆಯುತ್ತಿದೆ, ಹಾಗೇನೇ ರೈತರ ಹತಾಶ ಆತ್ಮಹತ್ಯೆಗಳೂ. 40 ಶೇ. ರೈತರು ವಿಪರೀತ ಸಾಲಗ್ರಸ್ತರಾಗಿದ್ದಾರೆ ಎನ್ನುತ್ತವೆ ಅಧ್ಯಯನಗಳು. ಸರಕಾರಕ್ಕೆ ಕಳೆದ 20 ವರ್ಷಗಳಲ್ಲಿ 10ಶೇ.ಕ್ಕಿಂತ ಹೆಚ್ಚು ಬೆಳೆಗಳಿಗೆ ಬೆಳೆ ವಿಮೆ ಒದಗಿಸಲು ಸಾಧ್ಯವಾಗಿಲ್ಲ. ಕೃಷಿ ಲಾಗುವಾಡುಗಳ ಖರ್ಚು, ಅದರಿಂದಾಗಿ ಉತ್ಪಾದನೆಯ ಖರ್ಚು, ರೈತರಿಗೆ ತಮ್ಮ ಉತ್ಪನ್ನಗಳಿಗೆ ಸಿಗುವ ಬೆಲೆಗಳಿಗಿಂತ

ಪುಟ 15ಕ್ಕೆ

ಚಾರಿತ್ರಿಕವಾದ ತೆಲಂಗಾಣ ರೈತರ ಸಶಸ್ತ್ರ ಹೋರಾಟದ ನಾಯಕರೂ ಸಿಪಿಐ(ಎಂ)ನ ಹಿಂದಿನ ಪ್ರಧಾನ ಕಾರ್ಯದರ್ಶಿಗಳು ಆಗಿದ್ದ ಕಾಮ್ರೆಡ್ ಪಿ. ಸುಂದರಯ್ಯ ಅವರ ಜನ್ಮ ಶತಾಬ್ದಿಯನ್ನು ದೇಶಾದ್ಯಂತ ಆಚರಿಸಲಾಗುತ್ತಿದೆ. ದೇಶದಲ್ಲಿ ಪ್ರಥಮ ಕೃಷಿ ಕೂಲಿಕಾರರ ಸಂಘವನ್ನು ಸ್ಥಾಪಿಸಿದ ಕೀರ್ತಿ ಅವರಿಗೇ ಸಲ್ಲುತ್ತದೆ. ಫೆಬ್ರವರಿ 7 ರಿಂದ 9, 2013 ರವರೆಗೆ ಗಂಗಾವತಿಯಲ್ಲಿ ನಡೆಯಲಿರುವ ಕೃಷಿ ಕೂಲಿಕಾರರ 5ನೇ ರಾಜ್ಯ ಸಮ್ಮೇಳನದ ಅಂಗವಾಗಿ ಈ ಲೇಖನವನ್ನು ಪ್ರಕಟಿಸಲಾಗಿದೆ.

ದಲಿತ – ಕೃಷಿ ಕೂಲಿಕಾರರ ಸಂಘಟನೆಯ ಪ್ರವರ್ತಕ

ಪಿ. ಸುಂದರಯ್ಯ

ನಿತ್ಯಾನಂದಸ್ವಾಮಿ



Com. P. Sundaraiah


ಅವರ ಪೂರ್ಣ ಹೆಸರು ಪುಚ್ಚಲಪಲ್ಲಿ ವೆಂಕಟ ಸುಂದರರಾಮಿ ರೆಡ್ಡಿ. ಅವರು ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಅಲಗಾನಿಪಾಡು ಎಂಬ ಗ್ರಾಮದಲ್ಲಿ ಒಂದು ಶ್ರೀಮಂತ ರೈತ ಕುಟುಂಬದಲ್ಲಿ 1913, ಮೇ 1ರಂದು ಜನಿಸಿದರು. ಇವರ ತಂದೆ ಪುಚ್ಚಲಪಲ್ಲಿ ವೆಂಕಟರಾಮಿ ರೆಡ್ಡಿ ಮತ್ತು ತಾಯಿ ಶೇಷಮ್ಮ ಅವರ 7 ಮಕ್ಕಳಲ್ಲಿ 6ನೇಯವರು ಇವರು. ಇವರ ತಂದೆ ಮತ್ತು ಅವರ ಮೂರು ಸಹೋದರರನ್ನು ಒಳಗೊಂಡ ಕುಟುಂಬವು ಗ್ರಾಮದ ಅತಿ ದೊಡ್ಡ ಜಮಿನ್ದಾರಿ ಕುಟುಂಬವಾಗಿತ್ತು.

ಅಲಗಾನಿಪಾಡು ಗ್ರಾಮದಲ್ಲಿ ರೆಡ್ಡಿ ಸಮುದಾಯಕ್ಕೆ ಸೇರಿದ ಸುಮಾರು 40 ಮನೆತನಗಳಿದ್ದವು. ಗ್ರಾಮದ ಬಹುತೇಕ ಕೃಷಿ ಭೂಮಿ ಅವರಿಗೇ ಸೇರಿತ್ತು. ಪದ್ಮಸಾಲಿ ನೇಕಾರರು ಇನ್ನೊಂದು ಪ್ರಮುಖ ಸಮುದಾಯವಾಗಿತ್ತು. ಅವರು ತಮ್ಮ ಪರಂಪರಾಗತ ನೇಯ್ಗೆ ಉದ್ಯೋಗವನ್ನು ಅವಲಂಬಿಸಿದ್ದರು. ಮೂರನೇ ಮುಖ್ಯ ಸಮುದಾಯ ದಲಿತರದು. ದಲಿತರಲ್ಲಿ ಮಾದಿಗರು ಮತ್ತು ಮಾಲಾ ಎಂಬ ಎರಡು ವಿಭಾಗಗಳಿದ್ದವು: ಮಾದಿಗರ ಸುಮಾರು 20 ಮನೆಗಳಿದ್ದವು. ಮಾಲಾ ವಿಭಾಗಕ್ಕೆ ಸೇರಿದ ದಲಿತರ ಸುಮಾರು 150 ಮನೆಗಳಿದ್ದವು. ಮಾದಿಗರು ಮುಖ್ಯವಾಗಿ ಚಮ್ಮಾರರಾಗಿದ್ದರು. ಇತರ ಕೀಳೆಂದು ಪರಿಗಣಿಸಲ್ಪಡುವ ವೃತ್ತಿಗಳನ್ನು ಅವರು ಮಾಡುತ್ತಿದ್ದರು. ಸತ್ತ ಪ್ರಾಣಿಗಳನ್ನು ಊರ ಹೊರಗೆ ಸಾಗಿಸಿ ಅವುಗಳ ಚರ್ಮವನ್ನು ಸುಲಿದು ಆದರಿಂದ ಅವರು ಚಪ್ಪಲಿಗಳನ್ನು ಹೊಲಿಯುತ್ತಿದ್ದರು. ಆದರೆ ಮಾಲಾ ಸಮುದಾಯಕ್ಕೆ ಸೇರಿದವರೆಲ್ಲರೂ ಬಹುತೇಕವಾಗಿ ಕೃಷಿ ಕೂಲಿಕಾರರಾಗಿದ್ದರು.

ದೊಡ್ಡ ಜಮಿನ್ದಾರರು ಕೃಷಿ ಕೂಲಿಕಾರರ ಮೂಲಕವೇ ವ್ಯವಸಾಯ ಮಾಡುತ್ತಿದ್ದರು. ಅವರಿಗೆ ಕಾಳಿನ ರೂಪದಲ್ಲಿ ಕೂಲಿ ಪಾವತಿ ಮಾಡಲಾಗುತ್ತಿತ್ತು. ದಿನಕ್ಕೊಂದು ಊಟ ಕೊಡಲಾಗುತ್ತಿತ್ತು. ಜಮಿನ್ದಾರರ ಮನೆಗಳಲ್ಲಿ ಕೆಲಸ ಮಾಡುವ ಕೂಲಿಕಾರರಿಗೆ ದಿನಕ್ಕೆ ಮೂರು ಸಲ ಊಟ ನೀಡಲಾಗುತ್ತಿತ್ತು. ಆದರೆ ಅವರ ಕೆಲಸ ಬೆಳಗಿನ ಜಾವ 4 ಗಂಟೆಗೆ ಆರಂಭವಾದರೆ ರಾತ್ರಿ 9 ಗಂಟೆಯ ವರೆಗೂ ನಡೆಯುತ್ತಿತ್ತು. ಕೂಲಿಕಾರರು ಹೆಚ್ಚಾಗಿ ದಲಿತರೇ ಆಗಿರುತ್ತಿದ್ದು ಜಮೀನ್ದಾರರ ಮನೆಯೊಳಗೆ ಕೆಲಸಕ್ಕೆ ಅವರನ್ನು ಬಳಸಲಾಗುತ್ತಿರಲಿಲ್ಲ. ದನದ ಕೊಟ್ಟಿಗೆಯಂತಹ ಮನೆಯ ಹೊರಗಿನ ಕೆಲಸಕ್ಕೆ ಮಾತ್ರ ಅವರನ್ನು ಬಳಸಲಾಗುತ್ತಿತ್ತು. ದನಗಳ ಹಾಲು ಕರೆಯುವ ಕೆಲಸವನ್ನು ಮನೆಯ ಮಹಿಳೆಯರೇ ಮಾಡುತ್ತಿದ್ದರು. ಹೊಲಗದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ಮಹಿಳಾ ಕೃಷಿ ಕೂಲಿಕಾರರಿಗೆ ಕೂಲಿಯನ್ನೇನು ಕೊಡಲಾಗುತ್ತಿದ್ದರೂ ಅದು ಪುರುಷರಿಗೆ ನೀಡಲಾಗುತ್ತಿದ್ದ ಕೂಲಿಗಿಂತ ತೀರಾ ಕಡಿಮೆ ಆಗಿರುತಿತ್ತು.

ಬಾಲ್ಯದಲ್ಲೇ ಮೊಳಕೆಯೊಡೆದ ಸಾಮಾಜಿಕ ಕಾಳಜಿ :

ಅಲಗಾನಿಪಾಡು ಗ್ರಾಮದಲ್ಲಿ ಅಂದು ಒಂದು ಪಂಚಾಯತ್ ಶಾಲೆ ಇತ್ತು. ಅದೊಂದು ಏಕೋಪಾಧ್ಯಾಯ ಶಾಲೆ. ಅದು ಊರ ಮಧ್ಯದಲ್ಲಿ ಇತ್ತು. ದಲಿತ ಮಕ್ಕಳಿಗೆ ಆ ಶಾಲೆಯೊಳಗೆ ಪ್ರವೇಶ ಇರಲಿಲ್ಲ. ಅವರಿಗಾಗಿ ಬೇರೆ ಶಾಲೆಯೂ ಇರಲಿಲ್ಲ. ಸುಂದರರಾಮಿ ರೆಡ್ಡಿ ಮೇಲ್ವರ್ಗ, ಮೇಲ್ಜಾತಿಯಲ್ಲಿ ಹುಟ್ಟಿದವರಾಗಿದ್ದರೂ, ಸಮಾಜದಲ್ಲಿ ಮತ್ತು



ಐತಿಹಾಸಿಕ ತೆಲಂಗಾಣ ಶಸಸ್ತ್ರ ಹೋರಟಗಾರರು

ಸ್ವತಃ ಅವರ ಮನೆಯಲ್ಲಿ ದಲಿತ ಕೂಲಿಕಾರರನ್ನು ಜಾತಿ ಆಧಾರದಲ್ಲಿ ಅಸ್ಪ್ರಶ್ಯರಾಗಿ ಕಾಣುವುದನ್ನು, ತಾರತಮ್ಯ ವೆಸಗುವುದನ್ನು ಕಂಡು ಖಿನ್ನರಾಗುತ್ತಿದ್ದರು. ತನ್ನ ತಾಯಿಯೊಂದಿಗೆ ಆಗಾಗ ಜಗಳ ತೆಗೆದು ದಲಿತರಿಗೆ ಮನೆಯೊಳಗೆ ಪ್ರವೇಶ ನಿರಾಕರಿಸುವುದನ್ನು ಪ್ರಶ್ನಿಸುತ್ತಿದ್ದರು. ತಾನು ರೆಡ್ಡಿ ಜಾತಿಗೆ ಸೇರಿದವನೆಂದು ಹೇಳಿಕೊಳ್ಳಲು ಅವರು ಅಸಹ್ಯ ಪಟ್ಟುಕೊಳ್ಳುತ್ತಿದ್ದರು. ಅದೊಂದು ದಿನ ಅವರು ತಮ್ಮ ಹೆಸರನ್ನೇ ಬದಲಾಯಿಸಿಕೊಂಡರು. ತನ್ನ ಹೆಸರಿಗೆ ಇನ್ನು ಮುಂದೆ ಯಾರೂ ರೆಡ್ಡಿ ಎಂಬ ಜಾತಿವಾಚಕ ಪದವನ್ನು ಸೇರಿಸಿ ಕರೆಯಬಾರದೆಂದು ತನ್ನ ಹೆಸರು ಪಿ. ಸುಂದರಯ್ಯ ಎಂದು ಅವರು ಘೋಷಿಸಿಕೊಂಡರು. ಆಗ ಅವರ ವಯಸ್ಸು 17 ವರ್ಷ.

ವಿದ್ಯಾರ್ಥಿ ದೆಸೆಯಲ್ಲೇ ಸುಂದರಯ್ಯ ಪುಸ್ತಕಗಳನ್ನು ಓದುವುವುದರಲ್ಲಿ ತುಂಬಾ ಆಸಕ್ತಿಯನ್ನು ಬೆಳೆಸಿಕೊಂಡಿದ್ದರು. ವೇಮನ ಮೊದಲಾದ ಸಮಾಜ ಸುಧಾರಕರ 'ಜಾತಿ ರಹಿತ ಸಮಾಜ'ದ ಕಲ್ಪನೆ ಅವರನ್ನು ಆಕರ್ಷಿಸಿತ್ತು. ಅವರು ತಮ್ಮ ಆತ್ಮ ಚರಿತ್ರೆಯಲ್ಲಿ ಹೇಳಿರುವಂತೆ ವಿವೇಕಾನಂದ, ಗಾಂಧೀಜಿ ಮೊದಲಾದವರ ವಿಚಾರಗಳಿಂದಲೂ ಅವರು ಪ್ರಭಾವಿತರಾಗಿದ್ದರು. ಹೈಸ್ಕೂಲ್ ವಿದ್ಯಾರ್ಥಿಯಾಗಿರುವಾಗಲೇ ಅವರು ಸ್ವಾತಂತ್ರ್ಯ ಚಳುವಳಿಯ ಸಭೆಗಳಲ್ಲಿ, ಸತ್ಯಾಗ್ರಹಗಳಲ್ಲಿ ಭಾಗವಹಿಸತೊಡಗಿದ್ದರು. ಮದ್ರಾಸಿನಲ್ಲಿ ಅವರು ಕಾಲೇಜ್ ವಿದ್ಯಾರ್ಥಿಯಾಗಿ ವ್ಯಾಸಂಗ ಮಾಡುತ್ತಿದ್ದಾಗ ಪ್ರಗತಿಪರ ವಿಚಾರಧಾರೆಯ ವಿದ್ಯಾರ್ಥಿಗಳ ಕೂಟವೊಂದನ್ನು ರಚಿಸಿಕೊಂಡು ರಾಜಕೀಯ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ವಿಜ್ಞಾನದ ವಿಷಯಗಳನ್ನು ಕುರಿತು ಚರ್ಚಿಸುತ್ತಿದ್ದರು. ಇದೇ ಅವಧಿಯಲ್ಲಿ ಅವರಿಗೆ "ಕಮ್ಯೂನಿಸ್ಟ್ ಮ್ಯಾನಿಫೆಸ್ಟೊ' ಪುಸ್ತಕದ ಒಂದು ಪ್ರತಿ ಸಿಕ್ಕಿತು. ಅದನ್ನು ಓದಿ ಚರ್ಚಿಸಿದ ಸುಂದರಯ್ಯ ಮತ್ತು ಅವರ ಸ್ನೇಹಿತರು ಅದರಿಂದ ಪ್ರಭಾವಿತರಾಗಿ ತಮ್ಮ ಮುಂದಿನ ದಾರಿ ಕಮ್ಯೂನಿಸಂ ಎಂದು ನಿರ್ಧರಿಸಿದರು. ಕಮ್ಯೂನಿಸ್ಟ್ ಚಳುವಳಿಯನ್ನು ಕಟ್ಟವುದೆಂದರೆ ಶೋಷಿತರನ್ನು, ಶ್ರಮಿಕರನ್ನು ಸಂಘಟಿಸುವುದು ಎಂದು ಅರ್ಥ ಮಾಡಿಕೊಂಡ ಅವರು ಆದಷ್ಟು ಬೇಗ ಕೆಳ ಮಟ್ಟದಿಂದ ದುಡಿಯುವ ಜನರನ್ನು ಸಂಘಟಿಸುವ ಕೆಲಸದಲ್ಲಿ ತೊಡಗಿಕೊಳ್ಳಲು ತೀರ್ಮಾನಿಸಿದರು. ಆದರೆ ಅಲ್ಲಿಯವರೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯ ಪಾತ್ರ ನಿರ್ವಹಿಸಲು ನಿರ್ಧರಿಸಿದರು. ಇಂಟರ್ ಮೀಡಿಯೆಟ್ (ಪದವಿ ಪೂರ್ವ) ಪಾಸಾಗಿರುವುದು ತಿಳಿದ ತಕ್ಷಣ ಸುಂದರಯ್ಯ 1930 ಮಾರ್ಚ್ ತಿಂಗಳಲ್ಲಿ ಸ್ವಗ್ರಾಮಕ್ಕೆ ಹಿಂತಿರುಗಿದರು.

ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ :

ಊರಿಗೆ ಮರಳಿದ ಸುಂದರಯ್ಯ ಗ್ರಾಮದ ಕೆಲವು ಯವಕರನ್ನು ಸೇರಿಸಿ ವಿಚಾರವಾದಿ ಕವಿ ವೇಮನರ ಜಯಂತಿಯನ್ನು ಆಚರಿಸಲು ನಿರ್ಧರಿಸಿ ಜಯಂತಿಯ ಆಚರಣೆಯಲ್ಲಿ ಪಾಲ್ಗೊಳ್ಳುವಂತೆ ಗ್ರಾಮದ ಮೇಲ್ಜಾತಿಯವರನ್ನೂ ಹಾಗೂ ದಲಿತರನ್ನೂ ಆಹ್ವಾನಿಸಿದರು. ಕಾರ್ಯಕ್ರಮದ ಅಂಗವಾಗಿ ಸಹಭೋಜನವನ್ನು ಏರ್ಪಡಿಸಲಾಗಿತ್ತು. ಆದರೆ ಸುಂದರಯ್ಯ ಅವರ ಸಂಬಂಧಿಗಳೂ ಸೇರಿದಂತೆ ಭೂಮಾಲಿಕರು3 ಗ್ರಾಮದ ದಲಿತರಿಗೆ ಬೆದರಿಕೆ ಹಾಕಿದ ಕಾರಣಕ್ಕಾಗಿ ದಲಿತರು ಯಾರೂ ಜಯಂತಿ ಆಚರಣೆಗೆ ಆಗಮಿಸಲಿಲ್ಲ. ಮೇಲ್ಜಾತಿಯವರ ಈ ಕ್ರಮವನ್ನು ಬಲವಾಗಿ ಖಂಡಿಸಿ ಸುಂದರಯ್ಯ 2ದಿನಗಳ ಉಪವಾಸ ಸತ್ಯಾಗ್ರಹ ನಡೆಸಿದರು. ಇದರಿಂದಾಗಿ ಗ್ರಾಮದ ದಲಿತರ ಮೇಲೆ ಗಾಢವಾದ ಪರಿಣಾಮ ಬೀರುವಂತಾಯಿತು. ಸುಂದರಯ್ಯ ಗ್ರಾಮದ ದಲಿತರ ನಡುವೆ ಹೆಚ್ಚೆಚ್ಚು ಬೆರೆಯತೊಡಗಿದರು. ದಲಿತರ ನಡುವೆ ಹೆಚ್ಚೆಚ್ಚು ವಿಶ್ವಾಸಗಳಿಸಿಕೊಳ್ಳುತ್ತಾ ಹೋದಂತೆ ತಮ್ಮ ಸಮಸ್ಯೆಗಳನ್ನು ಅವರು ಸುಂದರಯ್ಯ ಅವರಿಗೆ ಮುಕ್ತವಾಗಿ ವಿವರಿಸ ತೊಡಗಿದರು. ಭೂಮಾಲಿಕರು ಹೇಗೆ ದಲಿತರನ್ನು ನಡೆಸಿಕೊಳ್ಳುತ್ತಾರೆ, ಹೇಗೆ ತಮ್ಮ ದನಕರುಗಳು ಭೂಮಾಲಿಕರ ಜಮೀನುಗಳಲ್ಲಿ ಮೇಯುವುದನ್ನು ತಡೆಯುತ್ತಾರೆ, ಹೇಗೆ ತಮಗೆ ನ್ಯಾಯವಾಗಿ ಸಲ್ಲಬೇಕಾದ ಕೂಲಿ ಹಣವನ್ನು ಕಡಿತ ಮಾಡುತ್ತಾರೆ, ಹೇಗೆ ದಲಿತ ಮಹಿಳೆಯರನ್ನು ಲೈಂಗಿಕವಾಗಿ ದುರ್ಬಳಕೆ ಮಾಡುತ್ತಾರೆ. ಮೊದಲಾದ ಸಮಸ್ಯೆಗಳನ್ನು ಹೇಳಿಕೊಳ್ಳತೊಡಗಿದರು.

ಮನೆಯೊಳಗೆ ಕೆಲಸ ಮಾಡುವ ಮೇಲ್ಜಾತಿ ಕೂಲಿಕಾರರಿಗೆ ಹೆಚ್ಚಿನ ಕೂಲಿ ಕೊಡುವುದನ್ನು ಮನೆಯ ಹೊರಗಡೆ ಕೆಲಸ ಮಾಡುವ ದಲಿತ ಕೂಲಿಕಾರರಿಗೆ ಕಡಿಮೆ ಕೂಲಿ ಕೊಡುವುದನ್ನು ಸುಂದರಯ್ಯ ಪ್ರಶ್ನೆ ಮಾಡತೊಡಗಿದಾಗ ಭೂ


ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ



ವಿವೇಕಾನಂದ ಮತ್ತು ಕುವೆಂಪು

ಜೋಡಿ ವಿಚಾರ ವಾಹಿನಿಯ ಮುಂಬೆಳಗು



ಜಿ.ಎನ್.ನಾಗರಾಜ್

"ಚಮ್ಮಾರ, ಜಾಡಮಾಲಿಗಳ ಬಡ ಗುಡಿಸಿಲಿನಿಂದ ನವೀನ ಭಾರತ ಹೊರಹೊಮ್ಮಲಿ"

"ಪುರಾತನ ಆರ್ಯ ಮಹರ್ಷಿ ಕುಲಸಂಭೂತರೆಂದು ನೀವೆನಿತು ಹಿಗ್ಗಿದರೂ, ಪುರಾತನ ಆರ್ಯಾವರ್ತದ ಮಹಿಮೆ ಗೌರವಗಳನ್ನು ನೀವೆನಿತು ಕೀರ್ತಿಸಿದರೂ, ಉತ್ತಮ ವರ್ಗದವರು ಎಂದೆನಿಕೊಂಡಿರುವ ನೀವೆಲ್ಲ ಜೀವದಿಂದ್ದೀರೆಂದು ತಿಳಿದಿರುವಿರೇನು? ನೀವೆಲ್ಲ ಹೆಣಗಳಾಗಿದ್ದೀರಿ-ಶತಶತಮಾನಗಳ ಮಮ್ಮಿಗಳಾಗಿದ್ದೀರಿ. ಯಾರನ್ನು ನಿಮ್ಮ ಪೂರ್ವಿಕರು "ಚಲಿಸುವ ಸ್ಮಶಾನ"ಗಳೆಂದು ತಿರಸ್ಕರಿಸಿದರೋ ಅವರಲ್ಲಿ ಮಾತ್ರವೇ ಭಾರತದಲ್ಲಿ ಇನ್ನೂ ಉಳಿದಿರುವ ಸ್ವಲ್ಪವಾದರೂ ಜೀವಂತಿಕೆ ಕಾಣುತ್ತಿದೆ.ನೀವು ಮಾತ್ರ "ಜೀವಂತ ಶವ"ಗಳಾಗಿದ್ದೀರಿ??

"ನಿಮ್ಮ ಸ್ಥಾನದಲ್ಲಿ ನವೀನ ಭಾರತವೇಳಲಿ.ರೈತನ ಗುಡಿಸಿಲಿನಿಂದ ನೇಗಿಲನ್ನು ಹಿಡಿದು ಆಕೆ ಮೈದೋರಲಿ.ಬೆಸ್ತನ ಜೋಪಡಿಯಿಂದಾಕೆ ಮೂಡಲಿ.ಚಮ್ಮಾರ ಜಾಡಮಾಲಿಗಳ ಬಡ ಗುಡಿಸಿಲಿಂದಾಕೆಯು ಹೊರ ಹೊಮ್ಮಲಿ. ಕಾರ್ಖಾನೆಗಳಿಂದಲೂ, ಅಂಗಡಿಗಳಿಂದಲೂ,ಸಂತೆಗಳಿಂದಲೂ ಆಕೆಯು ಪ್ರತ್ಯಕ್ಷವಾಗಲಿ.

ಸಾಮಾನ್ಯ ಜನರು ಸಹಸ್ರಾರು ವರ್ಷಗಳಿಂದ ಪದ ದಲಿತರಾಗಿದ್ದಾರೆ.ಉಚ್ಚ ವರ್ಗದವರ ಕ್ರೂರ ಪದಾಘಾತವನ್ನು ಗೊಣಗದೆ ಸಹಿಸಿ ಸಹಿಸಿ ಅವರಲ್ಲೊಂದು ಅದ್ಭುತ ಸಹಿಷ್ಣುತೆಯು ಮೂಡಿದೆ. ಅನಂತ ಸಂಕಷ್ಟಗಳಿಗೆ ತುತ್ತಾದುದರಿಂದ ಅಮಿತ ಶಕ್ತಿಶಾಲಿಗಳಾಗಿದ್ದಾರೆ. ಬೊಗಸೆ ಗಂಜಿಯಲ್ಲಿ ಜೀವಿಸುತ್ತಿದ್ದರೂ ಅವರು ಲೋಕವನ್ನೇ ಅಲುಗಿಸಲು ಸಮರ್ಥರಾಗಿದ್ದಾರೆ.ಇನ್ನೊಂದು ಮುಷ್ಟಿ ಅನ್ನವನ್ನು ಅವರಿಗೆ ನೀಡಿ. ಅವರ ಶಕ್ತಿಯ ಮೆರೆತಕ್ಕೆ ಈ ಜಗತ್ತು ಸಾಲದಾಗುತ್ತದೆ?.. ಗತಕಾಲದ ಅಸ್ಥಿ ಪಂಜರಗಳಿರಾ.ನಿಮ್ಮ ಮುಂದೆ ನಿಂತಿದ್ದಾರೆ ನಿಮ್ಮ ಉತ್ತರಾಧಿಕಾರಿಗಳು-ಮುಂದೆ ಆವಿರ್ಭವಿಸಲಿರುವ ಭಾರತದ ಮೂರ್ತಿರೂಪದಂತೆ."

ಈ ಓಜಸ್ಸು ತುಂಬಿದ ಮಾತುಗಳು ಇತ್ತೀಚಿನ ವಿವೇಕಾನಂದ ಜಯಂತಿಯಂದು ಉದುರಿದ ಮಾತುಗಳ ಮಳೆಯನ್ನು ಕೇಳಿಯೇ ಸಿಟ್ಟಿನಿಂದ ನೀಡಿದ ಪ್ರತಿಕ್ರಿಯೆಯೆನೋ ಎಂದೆನ್ನಿಸುವಂತಿದೆ. ಈ ಮಾತುಗಳನ್ನು ನೂರು ವರ್ಷಗಳಿಗೂ ಮೊದಲು ಬರೆದವರು ವಿವೇಕಾನಂದರು.ಕನ್ನಡಕ್ಕೆ ಅದನ್ನು ಎಂಬತ್ತು ವರ್ಷಗಳ ಹಿಂದೆಯೇ ಅನುವಾದಿಸಿದವರು ಕುವೆಂಪುರವರು. ಕರ್ನಾಟಕದ ರಾಜ್ಯ ಸರ್ಕಾರ, ಹಾಗೂ ಅದನ್ನು ನಡೆಸುತ್ತಿರುವ ಸಂಘ ಪರಿವಾರದವರು ವಿವೇಕಾನಂದರ ನೂರೈವತ್ತನೆಯ ಜಯಂತಿಯನ್ನೇ ಬಳಸಿ ಜನರನ್ನು ಹಿಂದುತ್ವದ ಮಂಕು ಬೂದಿ ಎರಚುವ ನೀಚ ಪ್ರಯತ್ನಕ್ಕೆ "ಪುರಾತನ ಆರ್ಯಾವರ್ತದ ಮಹಿಮೆ ಗೌರವಗಳನ್ನು ನೀವೆನಿತು ಕೀರ್ತಿಸಿದರೂ, ಉತ್ತಮ ವರ್ಗದವರು ಎಂದೆನಿಕೊಂಡಿರುವ ನೀವೆಲ್ಲ ಜೀವದಿಂದ್ದೀರೆಂದು ತಿಳಿದಿರುವಿರೇನು ? ನೀವೆಲ್ಲ ಹೆಣಗಳಾಗಿದ್ದೀರಿ-ಶತಶತಮಾನಗಳ ಮಮ್ಮಿಗಳಾಗಿದ್ದೀರಿ." ಎಂದು ವೀರ ಸನ್ಯಾಸಿ ಗರ್ಜಿಸಿದ್ದಾರೆ ಎಂದೆನಿಸುತ್ತದೆ. ಜಾತಿ ವ್ಯವಸ್ಥೆಯನ್ನು ಜೀವಂತವಾಗಿರಿಸಿಕೊಂಡು, ಮೇಲು ಕೀಳು ಭಾವನೆಯನ್ನು ಮತ್ತಷ್ಟು ಗಟ್ಟಿಯಾಗಿಸುತ್ತಾ ಆದರೂ 'ಹಿಂದು ನಾವೆಲ್ಲ ಒಂದು' ಎಂದು ನಿತ್ಯ ವಿವಿಧ ರೀತಿಯ ಕೋಮುವಾದೀ ವಿಭಜನೆ ಯನ್ನು ತರುತ್ತಿರುವ ಬಿಜೆಪಿ ಮತ್ತು ಆರೆಸ್ಸೆಸ್‌ಗಳ ಕುಟಿಲ ತಂತ್ರಗಳಿಗೆ ಸಮರ್ಪಕವಾದ ಎದುರೇಟು ಈ ಮಾತುಗಳು.

ಜಾತಿ ವ್ಯವಸ್ಥೆಯನ್ನು ನಾಶ ಮಾಡದೆ ಭಾರತದ ಮುನ್ನಡೆ ಸಾಧ್ಯವಾಗುವುದಿಲ್ಲವೆಂಬ ವಿವೇಕಾನಂದರ ಚಿಂತನೆ ಕರ್ನಾಟಕದಲ್ಲಿ ಶಿಕ್ಷಣ ಪಡೆಯುತ್ತಿದ್ದ,ಆ ಸಂದರ್ಭದಲ್ಲಿ ದಿನ ನಿತ್ಯವೂ ತಮ್ಮತರಗತಿಗಳಲ್ಲಿ ಅತಿ ದೊಡ್ಡ ಸಂಖ್ಯೆಯಲ್ಲಿ ತುಂಬಿ ತುಳುಕಾಡುತ್ತಿದ್ದ ಮೇಲ್ಜಾತಿಯ ವಿದ್ಯಾರ್ಥಿಗಳು ಮಾತ್ರ ವಲ್ಲದೆ ಅನೇಕ ಉಪಾಧ್ಯಾಯರ ಹೀಗಳಿಕೆಗೆ,ಕಿರುಕುಳಗಳಿಗೆ ತುತ್ತಾಗಿದ್ದ ಶೂದ್ರರ ಮೊದಲ ತಲೆಮಾರಿನ ವಿದ್ಯಾರ್ಥಿಯಾದ ಕುವೆಂಪುರವರನ್ನು ಆಕರ್ಷಿಸಿತು. ಕುವೆಂಪುರವರು ವಿವೇಕಾನಂದರ ಚಿಂತನೆಗಳನ್ನು ಆಳವಾಗಿ ಅಭ್ಯಾಸ ಮಾಡಿದರು. ಸ್ವತಃ ಕೊಲಕತ್ತಾದ ರಾಮಕೃಷ್ಣರ ಮಠಕ್ಕೆ ಧಾವಿಸಿದರು. ಅವರ ವಿಚಾರಗಳನ್ನು ಅನುವಾದಗಳ ಮೂಲಕ, ಉಪನ್ಯಾಸಗಳ ಮೂಲಕ ಕನ್ನಡನಾಡಿನಲ್ಲಿ ಹಬ್ಬಿಸಿದರು. ವಿವೇಕಾನಂದರ ಬಗ್ಗೆ, ರಾಮಕೃಷ್ಣ ಪರಮಹಂಸರ ಬಗ್ಗೆ ಕುವೆಂಪುರವರು ಬರೆದ ಜೀವನ ಚರಿತ್ರೆ ಇಂದಿಗೂ ಅತ್ಯಂತ ಹೆಚ್ಚು ಓದುಗರನ್ನು ಸೆಳೆದ ಆಕರ್ಷಕ ಬರಹಗಳಾಗಿವೆ.

ಕುವೆಂಪುರವರ ಕಾವ್ಯ, ಕಥೆ ಕಾದಂಬರಿಗಳಲ್ಲಿ ಕೂಡ ವಿವೇಕಾನಂದರ ವಿಚಾರಗಳ ಗಾಢ ಪ್ರಭಾವ ಎದ್ದು ಕಾಣುತ್ತದೆ. ಜಾತಿ ವ್ಯವಸ್ಥೆಯ ಬಗ್ಗೆ ಕುವೆಂಪು ಸಿಡಿದೇಳಲು, ಕರ್ನಾಟಕದ ಪುರೋಹಿತಶಾಹಿಯನ್ನು ಎದುರಿಸಿ ಮಲೆತು ನಿಲ್ಲಲು ವಿವೇಕಾನಂದರ ವಿಚಾರಗಳು ಅವರಲ್ಲಿ ತುಂಬಿದ ಕೆಚ್ಚು ಮುಖ್ಯ ಕಾರಣವಾಗಿದೆ. ಅವರ ಜಲಗಾರ ನಾಟಕ, ಶೂದ್ರ ತಪಸ್ವಿ ನಾಟಕದ ಬಗ್ಗೆ ಮಾಸ್ತಿಯವರೊಡನೆ ನಡೆಸಿದ ವಾಗ್ವಾದ, ಅವರ ಕಥೆ, ಕಾದಂಬರಿಗಳಲ್ಲಿ ಕೆಳ ಜಾತಿಗಳ, ಜೀವಂತಿಕೆ ತುಂಬಿ ತುಳುಕುವ ಪಾತ್ರಗಳು ವಿವೇಕಾನಂದರ ವಿಚಾರಗಳ ಮೂಸೆಯಲ್ಲಿ ಮಿಂದು ಬೆಳಗಿವೆ. ಅದರಲ್ಲಿಯೂ ಕನ್ನಡ ಸಾಹಿತ್ಯದಲ್ಲಿ ಅಪೂರ್ವವಾದ, ಕಾರಂತರ 'ಚೋಮ'ನಿಗೆ ಹೆಗಲೆಣೆಯಾದ, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಗುತ್ತಿ-ನಾಯಿಗುತ್ತಿ ಪಾತ್ರದ ಚಿತ್ರಣವನ್ನಿಲ್ಲಿ ವಿಶೇಷವಾಗಿ ನೆನೆಯಬೇಕು.

ಬೆಂಗಳೂರು ವಿಶ್ವ ವಿದ್ಯಾಲಯದ ಪದವಿ ಪ್ರಧಾನ ಸಮಾರಂಭದಲ್ಲಿ ಅಲ್ಲಿ ನೆರೆದ ಸಾವಿರಾರು ವಿದ್ಯಾರ್ಥಿಗಳಿಗೆ ಕುವೆಂಪು ನೀಡಿದ 'ವಿಚಾರ ಕ್ರಾಂತಿಗೆ ಆಹ್ವಾನ' ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟವನ್ನು ಉದ್ಘಾಟಿಸುವಾಗ ಮೊಳಗಿಸಿದ 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ', ಮಂಡ್ಯದಲ್ಲಿ ಕೆ.ವಿ ಶಂಕರೇಗೌಡ ದತ್ತಿ ಉಪನ್ಯಾಸ ಮಾಲೆಯಲ್ಲಿ ಮಾಡಿದ 'ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗೃತಿ' ಎಂಬ ದೀರ್ಘ ಭಾಷಣ ಇವೆಲ್ಲವೂ ಮತ್ತು ವೈಯುಕ್ತಿಕವಾಗಿ, ವಿಶ್ವ ವಿದ್ಯಾಲಯದ ತರಗತಿಗಳಲ್ಲಿ, ಅನೇಕ ಸಭೆ ಸಮಾರಂಭಗಳಲ್ಲಿ ವಿಚಾರ ಗೋಷ್ಠಿಗಳಲ್ಲಿ ಆಡಿದ ಮಾತುಗಳು ಕರ್ನಾಟಕದಲ್ಲಿ ಆಗ ತಾನೆ ವಿದ್ಯಾಭ್ಯಾಸ ಪಡೆದು ವಿಚಾರ ಪ್ರಪಂಚದಲ್ಲಿ ಕಣ್ತೆರೆಯುತ್ತಿದ್ದ ವಿದ್ಯಾರ್ಥಿಗಳ, ವಿದ್ವಾಂಸರ ಒಂದು ತಲೆಮಾರನ್ನೇ ಕಂದಾಚಾರ, ಜಾತಿ ವ್ಯವಸ್ಥೆಗಳ ವಿರುದ್ಧ ಸಿಡಿದೇಳಲು ಪ್ರೇರೇಪಿಸಿದವು. ಧೈರ್ಯ ತುಂಬಿದವು. ಅದು ಇಂದಿನ ದಲಿತ-ಬಂಡಾಯ ಸಾಹಿತ್ಯದ ರಚನೆಗೆ ಪೂರಕವಾಯಿತು.

ಹೀಗೆ ವಿವೇಕಾನಂದರ ವಿಚಾರ ಶಕ್ತಿ ಕುವೆಂಪುರವರಲ್ಲಿ ಪಡಿಮೂಡಿ ಗಣನೀಯ ಪ್ರಮಾಣದಲ್ಲಿ ಕನ್ನಡಿಗರನ್ನು ಕಂದಾಚಾರಗಳ, ಜಾತಿ ವ್ಯವಸ್ಥೆಯ ವಿರುದ್ಧ, ಪುರೋಹಿತಶಾಹಿ ಕುತಂತ್ರಗಳ ವಿರುದ್ಧ ಸೆಟೆದು ನಿಲ್ಲುವಂತೆ ಮಾಡಿವೆ. ಅವರನ್ನು ಕೋಮುವಾದೀ ವಿಚಾರಗಳಿಗೆ ಬಲಿಯಾಗದಂತೆ ಮಾಡಿವೆ. ಇದೇ ಇಂದು ಕರ್ನಾಟಕವನ್ನು ನಿರಂತರವಾಗಿ ಆಳ ಬಯಸುವ, ಹಿಂದುತ್ವದ ಹೆಸರಿನಲ್ಲಿ ಮೇಲ್ಜಾತಿ, ಮೇಲ್ವರ್ಗಗಳ ತುಳಿತವನ್ನು ಗಟ್ಟಿಗೊಳಿಸಲು ಇನ್ನಿಲ್ಲದ ಪ್ರಯತ್ನಗಳನ್ನು ಮಾಡುತ್ತಿರುವ ಬಿಜೆಪಿ ಮತ್ತು ಆರೆಸ್ಸೆಸ್ ನ ಕುತಂತ್ರಗಳಿಗೆ ಅಡ್ಡಗಲ್ಲಾಗಿವೆ. ವಿವೇಕಾನಂದರನ್ನು ತಮಗೆ ಬೇಕಾದಂತೆ ತಿರುಚಿ ಜನರನ್ನು ವೀರ ಹಿಂದು ರಾಷ್ಟ್ರ ನಿರ್ಮಾಣದ ತಮ್ಮ ಕುಟಿಲ ಯತ್ನಗಳತ್ತ ಸೆಳೆಯಲು ರಾಜ್ಯಾದ್ಯಂತ ವಿವೇಕಾನಂದರ ನೂರೈವತ್ತನೇ ಜಯಂತಿಯ ಆಚರಣೆಯ ಹೆಸರಿನಲ್ಲಿ ಎಲ್ಲ ಶಾಲೆ, ಕಾಲೇಜುಗಳ ವಿದ್ಯಾರ್ಥಿಗಳಿಗೆ, ಯುವಕರಿಗೆ ಆರೆಸ್ಸೆಸ್ ಪ್ರಮುಖರ, ಅದರಂತೆಯೇ ಯೋಚಿಸುವ ಕೆಲ ಪಂಡಿತರ ಬಾಷಣಗಳನ್ನು ಏರ್ಪಡಿಸುತ್ತಾ ಸಾಗಿದ್ದಾರೆ. ಹಿಂದೆ ಇಂತಹುದೇ ಒಂದು ಸಂದರ್ಭದಲ್ಲಿ ಪ್ರಸಿದ್ಧ ಮಾರ್ಕ್ಸ್‌ವಾದಿ ನಾಯಕ ಇಎಂಎಸ್ ನಂಬೂದರೀಪಾದ್ ರವರು ಹೇಳಿದ ಈ ಮಾತುಗಳನ್ನು ನೆನಪಿಸಿಕೊಳ್ಳೋಣ. "ಸಂಭ್ರಮೋತ್ಸವದ ಶತಮಾನಾಚರಣೆಯ ಈ ಸಂದರ್ಭವನ್ನು ಹಿಂದುತ್ವ ರಾಜಕಾರಣದ ವಕ್ತಾರರು ಬಹು ಹುನ್ನಾರಿನ ತಮ್ಮ ಬೇಳೆ ಬೇಯಿಸಿಕೊಳ್ಳಲು ಬಳಸಲೆತ್ನಿಸಿದ್ದಾರೆ. ತಾವು ಮಾತ್ರ ಸ್ವಾಮೀಜಿಯವರ ಅನುಯಾಯಿಗಳೆಂದು, ಹಿಂದೂ ತತ್ವ ಶಾಸ್ತ್ರದ ಮಹಾನತೆಯನ್ನು ಎತ್ತಿ ಹಿಡಿಯುವ ಗುತ್ತಿಗೆ ತಮ್ಮದೇ ಎಂದೂ ಅಪಲಾಪಿಸುತ್ತಿದ್ದಾರೆ. ಆದರೆ ಸ್ವಾಮೀಜಿಯವರು 19 ನೇ ಶತಮಾನದ ಭಾರತೀಯ ಪುನರುಜ್ಜೀವನದ ಆಂದೋಲನದ ಪ್ರಮುಖ ನೇತಾರರಲ್ಲಿ ಒಬ್ಬರಾಗಿದ್ದರೇ ವಿನಾ ಹಿಂದುತ್ವವಾದಿಗಳು ಪ್ರತಿಪಾದಿಸುವಂತೆ ಕೇವಲ ಸಂಕುಚಿತ ದೃಷ್ಟಿಯ ಹಿದುತ್ವದ ನೇತಾರರಾಗಿರಲಿಲ್ಲ?. ವಿವೇಕಾನಂದರ ಕ್ರಾಂತಿಕಾರೀ ಬೋಧನೆ, ಪ್ರಬೋಧನೆಗಳನ್ನು ಮರೆಮಾಚಿ ಅವರನ್ನು ವಿರೂಪಗೊಳಿಸುವುದೇ ಈ ಎಲ್ಲ ಪ್ರತಿಗಾಮಿಗಳ ಸಂಚಾಗಿದೆ."

.....ಸಂಘಟನೆಯ ಪ್ರವರ್ತಕ ಪಿ. ಸುಂದರಯ್ಯ

ಪುಟ 8 ರಿಂದ


ಮಾಲಿಕರಿಂದ ತೀವ್ರ ವಿರೋಧವನ್ನು ಎದುರಿಸಬೇಕಾಯಿತು. ದಲಿತ ಕೂಲಿಕಾರರಿಗೆ ದಿನಕ್ಕೆ ಎರಡು ಸೇರು ಕೂಲಿಯನ್ನು ಕೊಡಲಾಗುತ್ತಿತ್ತು. ಕೂಲಿಕಾರರಿಗೆ ದಿನಕ್ಕೆ 6ಸೇರು ದರದಲ್ಲಿ ಕೂಲಿ ಕೊಡಬೇಕೆಂದು ಸುಂದರಯ್ಯ ಕೂಲಿಕಾರರ ಪರವಾಗಿ ಬೇಡಿಕೆಯಿಟ್ಟರು. ಆ ಪ್ರಮಾಣದಲ್ಲಿ ಕೂಲಿ ಕೊಟ್ಟರೆ ನಾವು ದಿವಾಳಿಯಾಗಬೇಕಾಗುತ್ತದೆ ಎಂದು ಹೇಳಿ ಸುಂದರಯ್ಯ ಮುಂದಿಟ್ಟ ಬೇಡಿಕೆಯನ್ನು ಅವರು ತಿರಸ್ಕರಿಸಿದರು. ಆಗ ಸುಂದರಯ್ಯ ಕೂಲಿಕಾರರ ಶ್ರಮಶಕ್ತಿಯನ್ನು ಲೆಕ್ಕಹಾಕಿ ದಿನಕ್ಕೆ ಸರಾಸರಿ 12 ಸೇರು ಉತ್ಪಾದನೆ ಮಾಡುವ ಕೂಲಿಕಾರರನಿಗೆ ಕನಿಷ್ಠ 6 ಸೇರನ್ನು ಕೂಲಿಯಾಗಿ ಕೊಡುವುದು ನ್ಯಾಯಬದ್ಧವಾಗಿದೆ ಎಂದು ಸಮರ್ಥವಾಗಿ ವಾದಿಸಿ ಭೂಮಾಲಿಕರ ಬಾಯಿ ಮುಚ್ಚಿಸಿದರು.

ಆದರೆ ನ್ಯಾಯಬದ್ಧವಾದ ಕೂಲಿಗಾಗಿ ಹೋರಾಟವನ್ನು ಕೈಗೆತ್ತಿಕೊಳ್ಳುವಷ್ಟರಲ್ಲಿ ಕಾಂಗ್ರೆಸಿನ ಕರೆಯ ಮೇರೆಗೆ ಶೇಂದಿ ಗಿಡಗಳನ್ನು ಕಡಿಯುವ ಚಳುವಳಿಯಲ್ಲಿ ಭಾಗವಹಿಸಿದ್ದ ಸುಂದರಯ್ಯ ಮತ್ತು ಸಂಗಡಿಗರನ್ನು ಬಂಧಿಸಿ ಎರಡು ವರ್ಷಗಳ ಕಾಲ ಜೈಲಿನಲ್ಲಿ ಇಡಲಾಯಿತು. ಇದು ಸುಂದರಯ್ಯನವರ ಮೊದಲ ಜೈಲುವಾಸವಾಗಿತ್ತು. ಜೈಲಿನಲ್ಲಿ ಸುಂದರಯ್ಯ ಅವರಿಗೆ ಅನೇಕ ಕಮ್ಯೂನಿಸ್ಟ್ ಸಂಗಾತಿಗಳ ಸಂಪರ್ಕ ದೊರೆಯುವಂತಾಯಿತು. ಜೈಲಿನಿಂದ ಬಿಡುಗಡೆಯಾದ ಮೇಲೆ ತಾಯಿಯ ಒತ್ತಾಯದ ಮೇರೆಗೆ ಕಾಲೇಜ್ ಶಿಕ್ಷಣವನ್ನು ಮುಂದುವರೆಸಲು ಸುಂದರಯ್ಯ ಬೆಂಗಳೂರಿಗೆ ಬಂದರು. ಇಲ್ಲಿ ಅವರ ಭಾವಮೈದುನ ಜಿಲ್ಲಾ ದಂಡಾಧಿಕಾರಿಯಾಗಿ ಬ್ರಿಟಿಷ್ ಸರ್ಕಾರದ ಸೇವೆಯಲ್ಲಿದ್ದರು.

ಈ ನಡುವೆ ಭಾರತ ಕಮ್ಯೂನಿಸ್ಟ್ ಚಳುವಳಿಯ ಪ್ರವರ್ತಕರಲ್ಲಿ ಒಬ್ಬರಾದ ಅಮಿರ್ ಹೈದರ್ ಖಾನ್ ಅವರು ಬೆಂಗಳೂರಿನಲ್ಲಿ ಸುಂದರಯ್ಯ ಅವರನ್ನು ಬೇಟಿಯಾಗಿ ಕಮ್ಯೂನಿಸ್ಟ್ ಪಕ್ಷದ ಸದಸ್ಯತ್ವ ಪಡೆಯಲು ಆಹ್ವಾನ ನೀಡಿದರು. ಮುಂದೆ ಸುಂದರಯ್ಯ ಅವರು ಭಾರತ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದರು. ಆದರೆ ಅವರು ತಮ್ಮ ಕಾಲೇಜ್ ಶಿಕ್ಷಣವನ್ನು ಪೂರ್ಣಗೊಳಿಸಲಿಲ್ಲ, ಸುಂದರಯ್ಯ ಅವರ ಭಾವ ಮೈದುನನ ಹಿರಿಯ ಮಗಳ ಮದುವೆಗೆ ಏರ್ಪಾಡಾಗಿತ್ತು. ಮದುವೆ ಮನೆಯಲ್ಲಿ ಶೃಂಗರಿಸುವ ಭಾಗವಾಗಿ ಮನೆಯ ಅವರಣದಲ್ಲಿ ಬ್ರಿಟಿಷ್ ಧ್ವಜ (ಯೂನಿಯನ್ ಜಾಕ್)ವನ್ನು ಏರಿಸಲಾಗಿತ್ತು. ಸುಂದರಯ್ಯ ಅದನ್ನು ಬಲವಾಗಿ ವಿರೋಧಿಸಿದರು. ಉನ್ನತ ಶಿಕ್ಷಣ ಪಡೆಯುವುದೆಂದರೆ, ಬ್ರಿಟಿಷ್ ಧ್ವಜವನ್ನು ಏರಿಸುವುದು ಎಂದಾದರೆ ನಾನು ಇಂದೇ ಕಾಲೇಜ್ ಬಿಟ್ಟು ಊರಿಗೆ ಹೋಗಿ ವ್ಯವಸಾಯ ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡಿದ ಸುಂದರಯ್ಯ ಮದುವೆ ಮನೆಯಿಂದ ಹೊರಟು ತಮ್ಮ ಊರಿಗೆ ವಾಪಸ್ಸಾದರು.

ಕೃಷಿ ಕೂಲಿಕಾರರ ಸಂಘ ಸ್ಥಾಪನೆ :

ಇದೇ ಊರಿನಲ್ಲಿ ಹುಟ್ಟಿ ಬೆಳೆದಿದ್ದ ಸುಂದರಯ್ಯ ಅವರಿಗೆ ವ್ಯವಸಾಯದ ಬೇರೆ ಬೇರೆ ಕೆಲಸಗಳ ಬಗ್ಗೆ ಈಗಾಗಲೇ ಸಾಕಷ್ಟು ಪರಿಜ್ಞಾನವಿತ್ತು. ಅವರು ತಮ್ಮ ಅನುಭವವನ್ನು ಹೆಚ್ಚಿಸಿಕೊಳ್ಳಲು ಕೃಷಿ ಕೂಲಿಕಾರರ ಜೊತೆಯಲ್ಲಿ



ಕೆಲಸ ಮಾಡಲು ಆರಂಭಿಸಿದರು. ಬೀಜ ಬಿತ್ತುವುದು. ನಾಟಿ ಮಾಡುವುದು, ಹೊರೆ ಹೊರುವುದು, ಕಟಾವು ಮಾಡುವುದು ಮೊದಲಾದ ಕೆಲಸಗಳು ತುಂಬಾ ದಣಿವು, ಬೆನ್ನು ನೋವು ಉಂಟು ಮಾಡುವ ಕೆಲಸಗಳಾಗಿದ್ದವು. ದೈಹಿಕವಾಗಿ ಇಷ್ಟೊಂದು ಕಷ್ಟದ ಕೆಲಸಗಳನ್ನು ಕೂಲಿಕಾರರು ಏಕೆ ಮಾಡುತ್ತಾರೆ ಎಂದು ಸುಂದರಯ್ಯ ಒಮ್ಮೆ ಪಿಟ್ಟಯ್ಯ ಎಂಬ ಹಿರಿಯ ಕೂಲಿಕಾರರನ್ನು ಪ್ರಶ್ನಿಸಿದಾಗ ಎರಡು ಹೊತ್ತಿನ ಊಟಕ್ಕಾಗಿ ಕೃಷಿ ಕೂಲಿಕಾರರು ಬೆನ್ನು ನೋವು ಎನ್ನದೆ ಕೆಲಸ ಮಾಡಲೇ ಬೇಕಾಗುತ್ತದೆ ಎಂದು ಉತ್ತರಿಸಿದ್ದನ್ನು ಸುಂದರಯ್ಯ ತಮ್ಮ ಆತ್ಮ ಚರಿತ್ರೆಯಲ್ಲಿ ಉಲ್ಲೇಖಿಸಿದ್ದಾರೆ.

ದಲಿತ ಕೃಷಿ ಕೂಲಿಕಾರರ ಬಗ್ಗೆ ಸ್ವತಃ ತನ್ನ ತಾಯಿ ಹೇಗೆ ತಾರತಮ್ಯ ಮಾಡುತ್ತಿದ್ದರು ಎನ್ನುವುದನ್ನೂ ಅವರು ನೆನಪಿಸಿಕೊಳ್ಳುತ್ತಾರೆ. ಇವರ ತಾಯಿ, ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ಎಲ್ಲ ಕೂಲಿಕಾರರಿಗಾಗಿ ಊಟವನ್ನು ಕೊಟ್ಟು ಕಳುಹಿಸುತ್ತಿದ್ದರು. ಸುಂದರಯ್ಯರಿಗಾಗಿ ಪ್ರತ್ಯೇಕವಾಗಿ ಅಡುಗೆ ಮಾಡಿದ್ದನ್ನು ಪ್ರತ್ಯೇಕವಾಗಿ ಕಳುಹಿಸುತ್ತಿದ್ದರು. ಸುಂದರಯ್ಯ ಈ ತಾರತಮ್ಯವನ್ನು ಪ್ರತಿಸಲ ವಿರೋಧಿಸುತ್ತಿದ್ದರು. ಆದರೆ ಅವರ ತಾಯಿ ತನ್ನ ಪದ್ಧತಿಯನ್ನು ಬಿಡುತ್ತಿರಲಿಲ್ಲ. ಕೊನೆಗೊಮ್ಮೆ ಸುಂದರಯ್ಯ ತನಗಾಗಿ ಕಳುಹಿಸಲಾದದ್ದನ್ನು ಊಟ ಮಾಡಲು ನಿರಾಕರಿಸಿದರು. ಅಂದಿನಿಂದ ಅವರ ತಾಯಿ ಪ್ರತ್ಯೇಕವಾಗಿ ಅಡುಗೆ ಮಾಡಿ ಕಳುಹಿಸುವುದನ್ನು ನಿಲ್ಲಿಸಿದರು. ಹೀಗೆ ಸುಂದರಯ್ಯ ಅವರು ದಲಿತರಿಗೆ ತಮ್ಮ ಮನೆಯಲ್ಲಿ ಹಾಗೂ ಸಮಾಜದಲ್ಲಿ ಮಾಡಲಾಗುತ್ತಿದ್ದ ತಾರತಮ್ಯವನ್ನು ನಿರಂತರವಾಗಿ ವಿರೋಧಿಸುತ್ತಿದ್ದರು.

ಕಮ್ಯೂನಿಸ್ಟ್ ಚಳುವಳಿಯ ನೇತೃತ್ವವಹಿಸಬೇಕಾದ ಕಾರ್ಮಿಕ ವರ್ಗದ ನಂಬಿಗಸ್ಥ ಮಿತ್ರರಾದ ಗ್ರಾಮೀಣ ಕೂಲಿಕಾರರನ್ನು ಸಂಘಟಿಸುವ ಅಂಗವಾಗಿ 1932ರಲ್ಲೇ ಸುಂದರಯ್ಯನವರು ತಮ್ಮ ಗ್ರಾಮದಲ್ಲಿ ಕೃಷಿ ಕೂಲಿಕಾರರ ಯೂನಿಯನ್ ಸ್ಥಾಪನೆ ಮಾಡಿದರು ಮತ್ತು ಅದರ ಸಂವಿಧಾನವನ್ನು ರಚಿಸಿದರು. ಕೃಷಿ ಕೂಲಿಕಾರರ ಪ್ರತಿಯೊಂದು ಕುಟುಂಬ ವರ್ಷದಲ್ಲಿ ಒಂದು ದಿನದ ಕೂಲಿಯನ್ನು ಸಂಘದ ಚಂದಾ ಬಾಬತ್ತು ಕೊಡುತ್ತಿದ್ದರು. ಆದರೆ ಕೃಷಿ ಕೂಲಿಕಾರರು ಸಂಘಕ್ಕೆ ಬರುವುದನ್ನು ತಡೆಯಲು ಭೂಮಾಲಿಕರು ನಿರಂತರ ಪ್ರಯತ್ನ ಮಾಡುತ್ತಿದ್ದರು. ಸಂಘದ ನೇತೃತ್ವದಲ್ಲಿ ಬಲಿಷ್ಠವಾದ ಹೋರಾಟಗಳನ್ನು ನಡೆಸಿ ಕೂಲಿ ಹೆಚ್ಚಳ ಪಡೆಯಲು ಅವರಿಗೆ ಸಾಧ್ಯವಾಯಿತು ಮಾತ್ರವಲ್ಲ ರಜಾ ದಿನಗಳ ಕೂಲಿಯನ್ನು ಸಹ ಪಡೆಯಲು ಸಾಧ್ಯವಾಯಿತು.

ಸುಂದರಯ್ಯನವರು ನಿರಂತರವಾಗಿ ದಲಿತ ಕೂಲಿಕಾರರ ಪರವಾಗಿ ನಿಂತು ಪಾಳೆಗಾರಿ ಆಚರಣೆಗಳ ವಿರುದ್ಧ ಹೋರಾಡಿದರು. ಸವರ್ಣೀಯರಿಗಷ್ಟೆ ಮೀಸಲಾಗಿದ್ದ ಗ್ರಾಮದ ಬಾವಿಯಿಂದ ದಲಿತರು ಸಹ ನೀರನ್ನು ಸೇದಲು ಸಾಧ್ಯವಾಗುವಂತೆ ಮಾಡಿದರು. ಗ್ರಾಮದಲ್ಲಿ ಒಂದು ಸಹಕಾರಿ ಸಂಘವನ್ನು ಸ್ಥಾಪನೆ ಮಾಡಿ ಅದರ ಮೂಲಕ ದಲಿತರಿಗೆ ಮತ್ತು ಇತರ ಬಡವರಿಗೆ ಕಡಿಮೆ ದರಗಳಲ್ಲಿ ಜೀವನಾವಶ್ಯಕ ವಸ್ತುಗಳನ್ನು ಪೂರೈಸುವಲ್ಲಿ ಯಶಸ್ವಿಯಾದರು. ಇದರಿಂದಾಗಿ ಗ್ರಾಮದ ಮೇಲ್ಜಾತಿ ವ್ಯಾಪಾರಸ್ಥರು ಬಡವರಿಗೆ ಬೆಲೆ ಹಾಗೂ ತೂಕದಲ್ಲಿ ಮಾಡುತ್ತಿದ್ದ ಮೋಸವನ್ನು ತಡೆಗಟ್ಟಲು ಸಾಧ್ಯವಾಯಿತು. ಗ್ರಾಮದಲ್ಲಿ ಒಂದು ಔಷದಾಲಯವನ್ನು ಸಹ ಸುಂದರಯ್ಯನವರು ಸ್ಥಾಪನೆ ಮಾಡಿದರು. ಅಲ್ಲಿ ಸುಂದರಯ್ಯನವರೇ ಸ್ವತಃ ಸಣ್ಣ ಪುಟ್ಟ ಕಾಯಿಲೆಗಳಿಗೆ ಔಷಧಿಗಳನ್ನು ನೀಡಿ ಪ್ರಥಮ ಚಿಕಿತ್ಸೆ ಒದಗಿಸುತ್ತಿದ್ದರು. ಗಾಯಗಳನ್ನು ತೊಳೆದು ಮದ್ದು ಹಾಕಿ ಕಟ್ಟುತ್ತಿದ್ದರು. ಗಂಭೀರ ಕಾಯಿಲೆಗಳಿಗೆ ತುತ್ತಾದವರನ್ನು ಹತ್ತಿರದ ಆರೋಗ್ಯ ಕೇಂದ್ರಕ್ಕೆ ಕಳುಹಿಸಿ ತಜ್ಞ ವೈದ್ಯರಿಂದ ಚಿಕಿತ್ಸೆ ಕೊಡಿಸುತ್ತಿದ್ದರು. ಹೀಗೆ ಸುಂದರಯ್ಯನವರು ದಲಿತ ಕೃಷಿ ಕೂಲಿಕಾರರನ್ನು ಸಂಘಟಿಸಿ ಅವರ ಹಕ್ಕುಗಳಿಗಾಗಿ ಹೋರಾಡಿದರು ಮಾತ್ರವಲ್ಲ ಅವರ ಆಪತ್ಬಾಂಧವರೆನಿಸಿಕೊಂಡಿದ್ದರು.

ಬೀದಿಗೆ ಬಂದಿರು
ನರ್ಸ್‌ಗಳು

ಪುಟ 5 ರಿಂದ

ಈಗಿರುವ 450 ನರ್ಸ್‌ಗಳನ್ನು ಕಡ
ಹೊಸದಾಗಿ ನೇಮಕಾತಿ ಮಾಡಿಕೊಳ್ಳ
ಹೊಸದಾಗಿ ಅಧಿಸೂಚನೆಯನ್ನು ಬಿಜೆಪಿ ರಾ
ಸರ್ಕಾರ ಹೊರಡಿಸಿದೆ.

ಈ ರೀತಿಯ ಇಬ್ಬಗೆಯ ನೀತಿಯ
ಕೈ ಬಿಡಬೇಕು, ಕಳೆದ 5 ವರ್ಷಗಳಿಂದ ಸೇ
ಸಲ್ಲಿಸುತ್ತಿರುವವರನ್ನು ಮೊದ
ಖಾಯಂಗೊಳಿಸಬೇಕು. ಈ ವಿಚಾರದ
ಕಾನೂನಾತ್ಮಕ ತೊಡಕುಗಳು ಎದುರಾದ
ಮೀಸಲಾತಿ ಹುದ್ದೆಗಳನ್ನು ಸೃಷ್ಠಿಸಿ ಎರ
ಕಡೆಯಲ್ಲೂ ಅನುಪಾತ ಆಧಾರದಲ್ಲಿ ನೇಮ
ಮಾಡಿಕೊಳ್ಳಬೇಕು. ಇದಕ್ಕೆ ಉದಾಃ ಹುಬ್ಬಳಿ
ಕಿಮ್ಸ್ ಆಸ್ಪತ್ರೆ, ಮೈಸೂರು ಮೆಡಿಕಲ್ ಮ
ಹಾಸನ ಮೆಡಿಕಲ್ ಕಾಲೇಜು ಹಾಗ
ಜಯದೇವ ಹೃದ್ರೋಗ ಸಂಸ್ಥೆಗಳು.
ರೀತಿಯಲ್ಲಿ ಸ್ವೈಫಂಡರಿ ಆಧ ವ
ದುಡಿಯುತ್ತಿದ್ದವರನ್ನು ಖಾಯಂಗೊಳಿಸು
ಪ್ರಕ್ರಿಯೆಯನ್ನೇ ಅನುಸರಿಸಲಾಗಿದೆ.

ಹೀಗಾಗಿ ಕಳೆದ ಒಂದು ವಾರದಿಂ
ಪ್ರತಿಭಟನೆ ನಿರತ 450 ಶುಶ್ರೂಷಕರನ
ಖಾಯಂಗೊಳಿಸಬೇಕೆಂದು ಭಾರ
ಪ್ರಜಾಸತ್ತಾತ್ಮಕ ಯುವಜನ ಫೆಡರೇಷ
(ಡಿವೈಎಫ್ಐ) ಹಾಗೂ ದಲಿತ ಸಂಘಪ
ಸಮಿತಿ (ಅಂಬೇಡ್ಕರ್ ವಾದ) ನೇತೃತ್ವದ
ಬೆಂಗಳೂರು ವೈದಕೀಯ ಮಹಾ ವಿದ್ಯಾಲಯ
ಶುಶ್ರೂಷಕರ ಕಲ್ಯಾಣ ಸಂಘದ 45
ಶುಶ್ರೂಷಕರು ಹೋರಾಟಕ್ಕಿಳಿದಿದ್ದಾರೆ.
ನ್ಯಾಯ ಬದ್ಧವಾದ ಉದ್ಯೋಗದ ಮೂಲಭೂ
ಹಕ್ಕಿಗಾಗಿ ನಡೆಸುತ್ತಿರುವ ಹೋರಾಟವನ
ನಿಡುಮಾಮಿಡಿ ಮಠದ ಶ್ರೀ ವೀರಭದ್ರ ಚೆನ್ನಮ
ಸ್ವಾಮಿಜಿಯವರು, ನಾಡೋಜ ಡಾ॥ ಬರಗೂ
ರಾಮಚಂದ್ರಪ್ಪನವರು ಸೇರಿದಂತೆ ನಾ ಎ
ಪ್ರಗತಿಪರ ಚಿಂತಕರು, ಪ್ರಗತಿಪರ ಸಂಘಟನೆಗ
ಬೆಂಬಲಕ್ಕೆ ನಿಂತಿವೆ. ಈ ದುಡಿಯುವ ನರ್ಸ್‌ಗ
ಖಾಯಂ ಉದ್ಯೋಗಕ್ಕಾಗಿನ ಹೋ ಟ
ಜನವರಿ 9 ರಂದು ಆರಂಭಗೊಂಡಿತ
ಬೆಂಗಳೂರು ನಗರದ ಬನಪ್ಪ ಪಾರ್ಕ್
ಮೈದಾನದಲ್ಲಿ ಅನಿರ್ಧಿಷ್ಟ ಧರಣ ಹೋರಾಟದ
ನೂರಾರು ನರ್ಸ್‌ಗಳು ಪಟ್ಟುಬಿಡ
ಕುಳಿತಿದ್ದಾರೆ.

ಪ್ರತಿಭಟನೆ ಸ್ಥಳಕ್ಕೆ ರಾಜ್ಯ ಆರೋ
ಇಲಾಖೆ ಸಚಿವರಾದ ಎ. ರಾಮದಾಸ್ ಭೇ
ನೀಡಿ ನರ್ಸ್‌ಗಳ ವೇತನ ಹೆಚ್ಚಳ ಮಾಡು
ಮಾತನಾಡಿದ್ದಾರೆ. ಆದರೆ ಪ್ರತಿಭಟನಾ ನಿರತ
ತಮ್ಮ ಸೇವೆ ಖಾಯಂ ಮಾಡಬೇಕೆಂದ
ಒತ್ತಾಯಿಸಿದರು. ಒಮ್ಮತ ಏರ್ಪಡದಿದ್ದರಿಂ
ಹೋರಾಟ ಮುಂದುವರಿಸುವುದ
ಅನಿವಾರ್ಯವಾಗಿದೆ. ಹೋರಾ
ಮುಂದುವರಿಸುವುದು ಮಾತ್ರವ
ತೀವ್ರಗೊಳಿಸುವ ದೃಢ ನಿರ್ಧಾರದೊಂದಿ
ಚಳುವಳಿ ಮುಂದುವರಿದಿದೆ. ಡಿವೈಎಫ್
ಸಂಘಟನೆಯ ಬೆಂಗಳೂರು ಮ ರಾ
ಮುಖಂಡರುಗಳು ಹಾಗೂ ಡಿ.ಎಸ್.ಎಸ್
ರಾಜ್ಯ ಸಂಚಾಲಕರಾದ ಮಾವಳ್ಳಿ ಶಂಕರ್ ಅವ
ನೇತೃತ್ವದಲ್ಲಿ ಚಳುವಳಿ ಮುಂದುವರೆ

ಮೈಸೂರಿನಲ್ಲಿ ದುಂಡು ಮೇಜಿನ ಸಭೆ


ಮಡೆಸ್ನಾನ ಪಂಕ್ತಿಭೇದದ ವಿರುದ್ಧ ಜನಾಂದೋಲನದ ತೀರ್ಮಾನ

ವರದಿ: ಎಲ್. ಜಗದೀಶ್ ಸೂರ್ಯ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಮೈಸೂರು ಜಿಲ್ಲಾ ಸಮಿತಿ ಹಾಗೂ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ವತಿಯಿಂದ ಮೈಸೂರು ವಿಶ್ವ ವಿದ್ಯಾನಿಲಯದ ಮಾನಸಗಂಗೋತ್ರಿ ಇ.ಎಂ.ಆರ್.ಸಿ. ಸಭಾಂಗಣದಲ್ಲಿ ಮಡೆಸ್ನಾನ, ಪಂಕ್ತಿ ಭೇದದ ಕುರಿತು ದುಂಡು ಮೇಜಿನ ಸಭೆ ನಡೆಯಿತು.

ಪ್ರಾಸ್ತಾವಿಕವಾಗಿ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ ಮಡೆಸ್ನಾನ ಪ್ರಸ್ತುತ ಸಂದರ್ಭದಲ್ಲಿ ಮಾನವ ಘನತೆಗೆ ಮಾಡುತ್ತಿರುವ ಅಪಮಾನವಾಗಿದ್ದು ಸಂವಿಧಾನ ವಿರೋಧಿ ಆಗಿದೆ ಎಂದರು. ನಂತರ ಮಾತನಾಡಿದ ಭಾರತ ಕಮ್ಯೂನಿಸ್ಟ್ ಪಕ್ಷದ (ಮಾರ್ಕ್ಸ್‌ವಾದಿ) ಕಾರ್ಯದರ್ಶಿಗಳಾದ ಜಿ.ವಿ. ಶ್ರೀರಾಮ ರೆಡ್ಡಿ ಮಾತನಾಡಿ ಮಡೆಸ್ನಾನ ಪಂಕ್ತಿಭೇದ ಮೊದಲಾದವು ಮನುಷ್ಯನನ್ನು ಕೀಳಾಗಿ ನೋಡುವ ಪರಂಪರೆಯಾಗಿದೆ. ಕಟ್ಟಕಡೆಯ ವರ್ಗದವರು ಆಚರಿಸುವ ಮಡೆಸ್ನಾನದಲ್ಲಿ ವಿದ್ವಾಂಸರು, ವಿಜ್ಞಾನಿಗಳಿಂದ ಪಾಲ್ಗೊಳ್ಳುತ್ತಾರೆ ಎಂಬ ಮಾತಿನಿಂದ ಆಚರಣೆಯನ್ನು ಸಮರ್ಥಿಸಿಕೊಳ್ಳಲಾಗುತ್ತಿದೆ. 'ವೃತ್ತಿ'ಯ ದೃಷ್ಟಿಯಿಂದ ವಿಜ್ಞಾನಿಗಳೆಂದ ಮಾತ್ರಕ್ಕೆ ಅವರು ಜ್ಞಾನಿಗಳೆಂದು ಅರ್ಥವಲ್ಲ ಎಂಬುದನ್ನು ಅರಿತುಕೊಳ್ಳಬೇಕು ಎಂದರು. ದಲಿತರ ಕೇರಿಯಲ್ಲಿ ಪಾದಯಾತ್ರೆ ಮಾಡುವ ಪೇಜಾವರ ಶ್ರೀಗಳು ತಮ್ಮ ಮಠದಲ್ಲೇ ದಲಿತರನ್ನು ಪಕ್ಕ ಕುಳ್ಳರಿಸಿಕೊಳ್ಳುವುದಿಲ್ಲ ಎಂದು ತಿಳಿಸಿದರು. ಇಡೀ ಕರಾವಳಿ ಭಾಗದಲ್ಲಿ ಸಂಘ ಪರಿವಾರದ್ದೇ ಕಾನೂನು ನಡೆಯುತ್ತಿದೆ. ಈ ಪರಿಸ್ಥಿತಿ ಇಡೀ ಕರ್ನಾಟಕಕ್ಕೆ ಹಬ್ಬುವ ಅಪಾಯವಿದೆ. ಮಡೆ ಸ್ನಾನ ವಿರುದ್ಧ ಸಿಪಿಐ(ಎಂ) ಪಕ್ಷ ಉಡುಪಿಯಲ್ಲಿ ಪ್ರತಿಭಟನೆ ನಡೆಸಿದಾಗ ಪೋಲಿಸರು ನಡೆಸಿದ ಲಾಠಿ ಚಾರ್ಜ್ ವಿರುದ್ಧ ಯಾವ ರಾಜಕೀಯ ಪಕ್ಷವು ಧ್ವನಿಯೆತ್ತಲಿಲ್ಲ. ಅವುಗಳಿಗೆ ಓಟಿನ ಹೆದರಿಕೆಯಿರುವುದು ರಾಜಕೀಯ ದುರಂತವಾಗಿದೆ. ಈ ರಾಜಕೀಯ ಪಕ್ಷಗಳು ದೌರ್ಜನ್ಯವನ್ನು ದುರುಪಯೋಗ ಮಾಡಿಕೊಳ್ಳುತ್ತಿವೆ ಎಂದರು. ಈ ಆಚರಣೆಗಳು ಕೆಲವೇ ಜನರು ಬಹುಪಾಲು ಜನರ ಮೇಲೆ ಔನತ್ಯ ಸಾಧಿಸಲು ಮಾಡುತ್ತಿರುವ ಅಪಮಾನವಾಗಿದೆ. ಪಂಕ್ತಿಭೇದ ಕುಕ್ಕೆ ಸುಬ್ರಮಣ್ಯದಲ್ಲಿ ಮಾತ್ರವಲ್ಲ ರಾಜ್ಯದ ಇತರ 11 ಕಡೆ ಇದೆ. ಮಡೆ ಸ್ನಾನ ನಿಷೇದ ಕೋರಿ ನ್ಯಾಯಾಲಯಕ್ಕೆ ಹೋದರೆ ಅಲ್ಲಿಯು ಸರ್ಕಾರದ ಪ್ರಮಾಣ ಪತ್ರ ಆಧರಿಸಿ ಆಚರಣೆ ನಿಷೇಧಿಸಿಲ್ಲ. ದೇಶ ರಾಜ್ಯದಲ್ಲಿ ಸಾಮಾಜಿಕ ಅಸಮಾನತೆ ವಿರುದ್ಧ ಹಲವಾರು ಶತಮಾನಗಳಿಂದ ಹೋರಾಟ ನಡೆಯುತ್ತಿದೆ. ಆದರೂ ಸಮಾಜದಲ್ಲಿ ಅಪಮಾನಕರ ಅಂಶಗಳಿರುವುದು ದುರಂತದ ವಿಷಯವಾಗಿದೆ. ಸಮಾಜ ಮುಖಿ, ಜನಪರ ಆಲೋಚನೆಯುಳ್ಳವರು ಈ ಅನಾಗರೀಕ ಪದ್ಧತಿಗಳನ್ನು ವಿರೋಧಿಸಬೇಕೆಂದರು.

ನಂತರ ಮಾತನಾಡಿದ ಸಾಹಿತಿ ಪ್ರೊ. ಅರವಿಂದ ಮಾಲಗತ್ತಿಯವರು ಕೆಸರು ಸ್ನಾನ ಪದ್ಧತಿ ಬಹಳ ಹಿಂದಿನಿಂದ ಇದೆ. ಗಾಯಕ್ಕೆ ಕೆಸರು ಹಚ್ಚಿದರೆ ಬೇಗ ಗುಣವಾಗುತ್ತದೆ ಎಂಬ ಮಾತು ಇದೆ. ಆದರೆ ಈ ವಿಷಯದಲ್ಲಿ ಸತ್ಯವನ್ನು ಮರೆ ಮಾಚಿ ಧರ್ಮ ವ್ಯವಸ್ಥೆಯಲ್ಲಿ ಮೌಢ್ಯಕ್ಕೆ ಬಳಸಿಕೊಳ್ಳಲಾಗುತ್ತಿದೆ. ಮಡೆ ಸ್ನಾನ ಬೇಡ ಎಡೆ ಸ್ನಾನ ಬೇಕು ಎನ್ನುವುದೂ ಸರಿಯಲ್ಲ, ಉಂಡು ಬಿಟ್ಟ ಅನ್ನ ಎಂಜಲ ಮೇಲೆ ಉರುಳಾಡುವುದು ಸರಿಯಲ್ಲ. ಅನ್ನದ ಮೇಲೆ ಉರುಳಾಡುವುದು ಅನ್ನಕ್ಕೆ ಮಾಡುವ ಅಪಮಾನವಾಗಿದೆ. ಉನ್ನತ ಸ್ಥಾನದಲ್ಲಿರುವವರೇ ಈ ಅಗೌರವದ ಕೆಲಸ ಮಾಡಿಸುತ್ತಾರೆ. ಇದು ಆಚಾರದ ಹೆಸರಿನಲ್ಲಿ ಅತ್ಯಾಚಾರ ನಡೆಸುವುದಾಗಿದೆ. ಹಾಗೂ ಬೌದ್ಧಿಕ ದಿವಾಳಿಯೂ ಆಗಿದೆ. ಇತಿಹಾಸ ಪುಟದಲ್ಲಿ ಮಾಂಸಹಾರಿಗಳು ಸಸ್ಯಹಾರಿಗಳು ಒಂದೆಡೆ ಊಟ ಮಾಡುತ್ತಿದ್ದ ಉದಾಹರಣೆಗಳೂ ಇವೆ ಎಂದರು.



ನಿವೃತ್ತ ಪ್ರಾಧ್ಯಾಪಕ ಹಿ.ಶಿ. ರಾಮಚಂದ್ರೇಗೌಡ ಮಾತನಾಡಿ ಮಡೆ ಸ್ನಾನ ಪಂಕ್ತಿಭೇದದ ಜೊತೆಗೆ ಇತರ ಸಾಮಾಜಿಕ ಸಮಸ್ಯೆಗಳನ್ನು ಸಹ ಕೈಗೆತ್ತಿಕೊಂಡು ಹೋರಾಟ ನಡೆಸಬೇಕು ಹಾಗೂ ಈ ರೀತಿ ಚಿಂತನೆಗಳು ಪ್ರತಿ ಜಿಲ್ಲೆಗಳಲ್ಲೂ ನಡೆಸಬೇಕು ಆ ಮೂಲಕ ಜನರ ನಡುವೆ ಈ ಚಳುವಳಿಯನ್ನು ಕೊಂಡ್ಯೊಯ್ಯಬಹುದು ಎಂದರು. ಪ. ಮಲ್ಲೇಶ ಮಾತನಾಡಿ 70 ರ ದಶಕದಲ್ಲಿ 4-3 ಜನರಿಂದ ಸಂಘಪರಿವಾರದ ಶಾಸಕರು ಇಂದು ರಾಜ್ಯದಲ್ಲಿ ಆಡಳಿತ ನಡೆಸುತ್ತಾ ಎಲ್ಲವನ್ನು ಕೇಸರೀಕರಣಗೊಳಿಸುತ್ತಿದ್ದಾರೆ. ಇದರ ವಿರುದ್ಧ ಹೋರಾಟ ಅಗತ್ಯ ಎಂದರು.

ಬಹುಜನ ಸಮಾಜ ಪಕ್ಷದ ಎನ್. ಮಹೇಶ ಮಾತನಾಡಿ ಇಂದು ಎಲ್ಲಾ ಕ್ಷೇತ್ರಗಳಲ್ಲಿ ಮೇಲ್ಜಾತಿಯವರ ಅಧಿಪತ್ಯ ಮೆರೆಯುತ್ತಿದ್ದಾರೆ. ಸಣ್ಣ ಪುಟ್ಟ ದೇವಸ್ಥಾನಗಳಲ್ಲಿ ಕೆಳ ಜನರೇ ಪೂಜೆ ಪುರಸ್ಕಾರ ಮಾಡಿಕೊಂಡಿರುವಾಗ ಆ ದೇವಸ್ಥಾನ ಪ್ರಚಾರಕ್ಕೆ ಬಂದರೇ ಅದನ್ನು ಬ್ರಾಹ್ಮಣರು ಆಕ್ರಮಿಸಿ ಅದನ್ನು ಬ್ರಾಹ್ಮಣೀಕರಣಗೊಳಿಸುತ್ತಿದ್ದಾರೆ. ಇಂತಹ ವಿಚಾರಗಳ ಬಗ್ಗೆ ಮೊದಲು ಜನರಲ್ಲಿ ತಿಳುವಳಿಕೆ ತರಬೇಕು. ಸಮುದಾಯದ ತಿಳಿದವರು ಜನರನ್ನು ಸರಿದಾರಿಗೆ ತರುವ ಕೆಲಸ ಮಾಡಬೇಕು ಎಂದರು. ನಂತರ ಮಾತನಾಡಿದ ಪ್ರೊ. ಕೆ.ಎಸ್. ಭಗವಾನ್ ಮಡೆಸ್ನಾನ, ಪಂಕ್ತಿಭೇದದ ವಿರುದ್ಧ ಸಿಪಿಐ(ಎಂ) ನ ಹೋರಾಟ ಶ್ಲಾಘನೀಯ. ಬಿಜೆಪಿ ಸರ್ಕಾರ ಇಂದು ಇಡೀ ಸಮಾಜವನ್ನು ಕೋಮುವಾದೀಕರಣಗೊಳಿಸುತ್ತಿದ್ದು, ಪುರೋಹಿತ ಶಾಹಿ ವ್ಯವಸ್ಥೆಯನ್ನು ಬಲಗೊಳಿಸಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ. ಈ ಪುರೋಹಿತಶಾಹಿ ವ್ಯವಸ್ಥೆಯ ವಿರುದ್ಧ ಹೋರಾಟಕ್ಕೆ ಎಲ್ಲರೂ ಸಿದ್ದರಾಗಬೇಕೆಂದರು. ಈ ದುಂಡು ಮೇಜಿನ ಸಭೆಯಲ್ಲಿ ಪ್ರೊ. ಕಾಳೇಗೌಡ ನಾಗವಾರ, ಪ್ರೊ. ನಾಲಗಿರಿ ತಳವಾಳ, ಪ್ರೊ. ನಂಜರಾಜೇಅರಸು, ಲಕ್ಷ್ಮಣ ಹೊಸಕೋಟೆ, ಪಿಯುಸಿಎಲ್‌ನ ಡಾ. ಲಕ್ಷ್ಮಿನಾರಾಯಣ ಸಿಪಿಐ(ಎಂ) ನ ಜಗನ್ನಾಥ್, ಸಿಐಟಿಯು ನ ಜಿಲ್ಲಾ ಕಾರ್ಯದರ್ಶಿ ಜಯರಾಂ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಚಂದ್ರಶೇಖರ್, ದಲಿತ ವಿದ್ಯಾರ್ಥಿ ವೇದಿಕೆಯ ಮುಖಂಡರು ವಿವಿಧ ಹಿಂದುಳಿದ ಜಾತಿಗಳ ಮುಖಂಡರು ಭಾಗವಹಿಸಿದ್ದರು. ಸಂದೀಪ್ ಸ್ವಾಗತಿಸಿದರೆ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿಗಳಾದ ಕೆ. ಬಸವರಾಜು ವಂದನಾರ್ಪಣೆ ಮಾಡಿದರುಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷ ಎಲ್. ಜಗದೀಶ್ ಸೂರ್ಯ ನಿರೂಪಣೆ ಮಾಡಿದರು. ಈ ಸಭೆಯು ಈ ಕೆಳಕಂಡ ನಿರ್ಣಯಗಳನ್ನು ಕೈಗೊಂಡಿತು.

ನಿರ್ಣಯ

1. ಮಡೆಸ್ನಾನ ಮತ್ತು ಪಂಕ್ತಿಭೇದ ಪದ್ಧತಿ ಸಂವಿಧಾನ ಬಹಿರ ಮತ್ತು ಅವೈಜ್ಞಾನಿಕ ಪದ್ಧತಿ, ಆದ್ದರಿಂದ ರಾಜ್ಯ ಸರ್ಕಾರ ಈ ಅಂಶಗಳನ್ನು ಮಾನ್ಯ ಉಚ್ಚ ನ್ಯಾಯಲಯಕ್ಕೆ ಮನವರಿಕೆ ಮಾಡಿ ಈ ಪದ್ಧತಿಯನ್ನು ನಿಷೇಧ ಮಾಡಬೇಕು.
2. ಆ ನಿಟ್ಟಿನಲ್ಲಿ ಜನಾಭಿಪ್ರಾಯ ರೂಪಿಸಲು ಸಿ.ಪಿ.ಐ.(ಎಂ) ಮತ್ತು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಹಮ್ಮಿಕೊಂಡಿರುವ ಜನಾಂದೋಲನಕ್ಕೆ ಈ ಸಭೆ ಬೆಂಬಲ ವ್ಯಕ್ತ ಪಡಿಸಿ ಭಾಗವಹಿಸಲು ತೀರ್ಮಾನಿಸಿತು.
3. ಮನುವಾದಿ ಪುರೋಹಿತಶಾಹಿ ಹಿಂದುತ್ವದ ಮೌಲ್ಯಗಳನ್ನು ಅಜ್ಞಾನದಿಂದ ಒಪ್ಪಿಕೊಂಡು ಅನುಸರಿಸುತ್ತಿರುವ ಶೂದ್ರ, ದಲಿತ ಸಮುದಾಯಗಳ ನಡುವೆ ಜಾಗೃತಿ ಮೂಡಿಸಿ ಪುರೋಹಿತ ಶಾಹಿಯ ಜೀವವಿರೋಧಿ ಅವೈಜ್ಞಾನಿಕ ಮೌಲ್ಯಗಳನ್ನು ಧಿಕ್ಕರಿಸಬೇಕೆಂದು ಈ ಸಭೆಯು ನಿರ್ಣಯಿಸಿತು.

"ಒಂದಾಗಿ ಹೋರಾಡಬೇಕು"

“ಇಎಂಎಸ್ ನಂಬೂದರಪಾಡ್ ಹೇಳಿದಂತೆ ಎಲ್ಲಾ ಭೇದಗಳನ್ನು ಮರೆತು ಸಾಮಾಜಿಕ ಸಮಸ್ಯೆಗಳ ವಿರುದ್ಧ ಹೋರಾಟಕ್ಕೆ ಒಂದಾಗ ಬೇಕಿದೆ." ಪ್ರೊ. ಕಾಳೇಗೌಡ ನಾಗವಾರ

ದುಂಡು ಮೇಜಿನ ಸಭೆಯಲ್ಲಿ ಮಾತನಾಡಿದ ಸಾಹಿತಿ ಪ್ರೊ. ಕಾಳೇಗೌಡನಾಗವಾರರವರು "1979 ರಲ್ಲಿ ಬಂಡಾಯ ಲೇಖಕರರ ಸಮ್ಮೇಳನ ನಡೆದಿದ್ದು ಈ ಸಮ್ಮೇಳನದಲ್ಲಿ ಗಾಂಧಿವಾಧಿ, ಲೋಹಿಯಾವಾದಿ, ಅಂಬೇಡ್ಕರ್ ವಾಧಿ, ಮಾರ್ಕ್ಸ್‌ವಾದಿ ಸೇರಿದಂತೆ ಇತರ ಪ್ರಗತಿಪರ ಲೇಖಕರು ಭಾಗವಹಿಸಿದ್ದರು. ಆಗ ಯುವ ಲೇಖಕರ ಶಿಬಿರವನ್ನು ಉದ್ಘಾಟನೆ ಮಾಡಿದ ಇಎಂಎಸ್ ನಂಬೂದರಿಪಾಡ್‌ರವರು ಮಾತನಾಡಿ "ಕರ್ನಾಟಕವನ್ನು ಕೇರಳ, ಪಶ್ಚಿಮ ಬಿಂಗಾಳಕ್ಕೆ ಹೋಲಿಸಿಕೊಳ್ಳಬೇಡಿ. ಕರ್ನಾಟಕದಲ್ಲಿ ಸಾಕ್ಷರತೆ ಕಡಿಮೆ ಇದೆ, ಊಳಿಗಮಾನ ವ್ಯವಸ್ಥೆ ಇನ್ನೂ ಸಂಪೂರ್ಣವಾಗಿ ಅಳಿದಿಲ್ಲ. ಹಾಗಾಗಿ ಜಾತಿ ತಾರತಮ್ಯ ಲಿಂಗಭೇದ, ಹಾಗೂ ಇತರ ಸಮಾಜಿಕ ಸಮಸ್ಯೆಗಳು ಇವೆ. ಇದರ ವಿರುದ್ಧ ಹೋರಾಟ ನಡೆಸಬೇಕಿದೆ. ಸೈದ್ಧಾಂತಿಕ ಭಿನ್ನಾಭಿಪ್ರಾಯ ಮರೆತು ಹೋರಾಟ ಮಾಡಬೇಕಾದ ಅನಿವಾರ್ಯತೆ ಇದೆ ಎಂದಿದ್ದರು. ಅವರ ಮಾತು ಇಂದಿಗೂ ಅನ್ವಯವಾಗುತ್ತದೆ. ಮಡೆ ಸ್ನಾನ ಪಂಕ್ತಿ ಭೇದ ಜಾತಿಬೇದ ವಿರುದ್ಧ ಎಲ್ಲಾ ಭೇದಗಳನ್ನು ಮರೆತು ಒಟ್ಟಾಗಿ ಸೇರಿ ಹೋರಾಟ ನಡೆಸಬೇಕಿದೆ. ಈ ರೀತಿ ಚರ್ಚೆಗಳನ್ನು ನಿರಂತರವಾಗಿ ಮುಂದೆ ನಡೆಸೋಣ ಎಂದರು.

'ಧರ್ಮಪುರಿ' ಎಂಬಲ್ಲಿ ಜಾತಿವಾದಿ ಕ್ರೌರ್ಯದ ರುದ್ರ ನರ್ತನ

ಅದೊಂದು ಪುಟ್ಟ ಮಗು. ಅದು ತನ್ನ ಎರಡು ಬೆರಳುಗಳನ್ನು ತಂದೆಗೆ ತೋರಿಸಿ ಅದರಲ್ಲಿ ಯಾವುದಾದರೂ ಒಂದು ಬೆರಳನ್ನು ಮುಟ್ಟು ಅಂತ ಕೇಳುತ್ತದೆ. ಅಪ್ಪ ಬೆರಳು ಮುಟ್ಟುತ್ತಾನೆ. ಆಮೇಲೆ ಮಗು ಹೇಳುತ್ತದೆ " ಹಾಗಿದ್ದರೆ ಅವರು ಇವತ್ತೂ ಬರುತ್ತಾರೆ. ಅವರು ನಮ್ಮನ್ನೆಲ್ಲಾ ಹೊಡೆಯುತ್ತಾರೆ. ಅವರು ಎಲ್ಲವನ್ನೂ ಸುಡುತ್ತಾರೆ."

ಇದು ಯಾವುದೋ ಒಂದು ಸಿನಿಮಾ ಅಥವಾ ನಾಟಕವೊಂದರ ಕಪೋಲ ಕಲ್ಪಿತ ದೃಶ್ಯವಲ್ಲ. ನೈಜ ಘಟನಾವಳಿ.

ಅದೊಂದು ದಲಿತ ಮಗು. ತನ್ನ 'ಅನುಭವ'ದ ಆಧಾರದ ಮೇಲೆ ಮಗು ತನ್ನದೇ ವಿಧಾನದಲ್ಲಿ ತಮ್ಮ ಕುಟುಂಬದ 'ನಾಳಿನ ಗತಿ'ಯನ್ನು ಲೆಕ್ಕ ಹಾಕುತ್ತಿದೆ.

ಈ ಮೇಲಿನ ಘಟನೆಯನ್ನು ಹಾಗೂ ಭೀಕರ ದುಃಸ್ವಪ್ನದಂತಹ ತಮ್ಮ ಬದುಕಿನ ಮೇಲಿನ ದಾಳಿಯನ್ನು ವಿವರಿಸಿ ಹೇಳಿದ್ದು 'ತಾಯಲ್ ನಾಯಕಿ' ಎಂಬ ದಲಿತ ಮಹಿಳೆ.

ಸ್ಥಳ: ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಒಂದು ಗ್ರಾಮ. **ಸಂದರ್ಭ:** ಜಿಲ್ಲೆಯ ಮೂರು ದಲಿತ ಗ್ರಾಮಗಳ ಮೇಲೆ ಸುಮಾರು 3,000 ಕ್ಕೂ ಹೆಚ್ಚು ಹಿಂದೂ ಸವರ್ಣೀಯರು ಅತ್ಯಂತ ಯೋಜಿತ ದಾಳಿ ನಡೆಸಿ ನೂರಾರು ದಲಿತರ ಮನೆಗಳಿಗೆ ಬೆಂಕಿ ಇಟ್ಟಿದ್ದಾರೆ. ಮನಸ್ಸೋ ಇಚ್ಛೆ ಆಸ್ತಿ, ಪಾಸ್ತಿ ನಾಶ ಮಾಡಿದ್ದಾರೆ. ಇದ್ದ ಬೆಲೆ ಬಾಳುವ ಒಡವೆ ವಸ್ತು ಲೂಟಿ ಮಾಡಿದ್ದಾರೆ. ಜೀವ ಭಯದಿಂದ ಗ್ರಾಮ ಬಿಟ್ಟು ಹೊಲಕ್ಕೆ, ಕಾಡಿಗೆ ಓಡಿ ಹೋಗಿದ್ದ ದಲಿತರು ಸಿಪಿಐ(ಎಂ) ಪಕ್ಷದ ರಾಜ್ಯ ಮಟ್ಟದ ನಿಯೋಗ, 'ತಮಿಳು ನಾಡು ಅಸ್ಪೃಶ್ಯತಾ ನಿವಾರಣ ರಂಗ'ದ ಮುಖಂಡರು ಗ್ರಾಮಕ್ಕೆ ಭೇಟಿ ನೀಡಿದಾಗ ತಮ್ಮ ನೋವು ಆಘಾತವನ್ನು ಹೇಳಿಕೊಳ್ಳಲು ಸೇರಿದ್ದಾರೆ. ಅಲ್ಲಿ ನೆರೆದ ನೊಂದ ದಲಿತರ ಸಂಖ್ಯೆಯೂ ಸುಮಾರು ಮೂರು ಸಾವಿರದಷ್ಟಿದೆ.

ಇದೆಲ್ಲಾ ಯಾಕೆ ? ಹೇಗಾಯಿತು ?

ಇದೆಲ್ಲಾ ಯಾಕೆ ನಡೆಯಿತು? ಹೇಗಾಯಿತು? ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಈ ಪ್ರಶ್ನೆ ಬೆಂಗಳೂರಿನ ನಮ್ಮ 'ಉಚಿತ ತಂತ್ರಾಂಶ ಆಂದೋಲನ'(ಎಫ್‌ಎಸ್‌ಎಂಕೆ)ದ ಸ್ನೇಹಿತರ ತಲೆಯೊಳಗೂ ಕೂಡ ಎದ್ದಿತು. ಅವರು ತಮಿಳು ನಾಡಿನ ಪ್ರಗತಿಪರ ಬರಹಗಾರರ ಸಂಘ, ಹಾಗೂ ಪತ್ರಕರ್ತರ ತಂಡಗಳು ಈ ಗ್ರಾಮಗಳಿಗೆ ಭೇಟಿ ನೀಡಿದಾಗ ಅವರೊಂದಿಗೆ ತಪ್ಪದೇ ಒಂದು ತಂಡವನ್ನು ಕೊಂಡೊಯ್ಯುತ್ತಾರೆ. ಅವರು ಅಲ್ಲಿ ಕಂಡ ವಾಸ್ತವ ಸತ್ಯವೇನು. ಅವರದೇ ಮಾತುಗಳಲ್ಲಿ ಕೇಳಿ. ಓದಿ.

ಯೋಜಿತ ದಾಳಿ

ಇದೊಂದು ಯೋಜಿತ ದಾಳಿಯಾಗಿತ್ತು. ಹಿಂದುಳಿದ 'ವಣ್ಣಿಯಾರ್' ಸಮುದಾಯದ ಸು. 3000 ದಷ್ಟು ಜನರು ಈ ದಾಳಿ ನಡೆಸಿದ್ದಾರೆ. ಪೋಲೀಸರಿಗೆ ಇದು ಮೊದಲೇ ಗೊತ್ತಿತ್ತು. ಆದರೆ ಘಟನಾವಳಿಗಳಿಗೆ ಅವರು ಮೌನ ವೀಕ್ಷಕರಾಗಿದ್ದರು.

ದಾಳಿಗೆ ಕಾರಣ ಇದು. ಆತ ದಲಿತ ಸಮುದಾಯದ ಯುವಕ-ಇಳವರಸನ್, 23 ವರ್ಷದ ಒಳ್ಳೆಯ ಕ್ರೀಡಾಪಟು. ಪೋಲೀಸ್ ಇಲಾಖೆಯ ಪರೀಕ್ಷೆಯಲ್ಲಿ ಪಾಸಾಗಿ ಆಯ್ಕೆಯೂ ಆಗಿದ್ದವನು. ಈತ ಮತ್ತು ವಣ್ಣಿಯಾರ್ ಸಮುದಾಯದ 21 ವರ್ಷದ ವಿದ್ಯಾವಂತ ಯುವತಿ ದಿವ್ಯಾ ಪರಸ್ಪರ ಪ್ರೀತಿಸಿದರು. ಹಾಗೂ ದೇವಸ್ಥಾನದಲ್ಲಿ ಈ ಇಬ್ಬರು ಮದುವೆಯೂ ಆದರು. ಇದೇ ಅವರು ಮಾಡಿದ ಅಪರಾಧ.

ಊರಿನ ಜಾತಿ ಪಂಚಾಯ್ತಿ 'ನ್ಯಾಯ' ತೀರ್ಮಾನಿಸಿ ಈ ಮದುವೆ ವಿರೋಧಿಸಿತು. ದಿವ್ಯಾಳನ್ನು ವಾಪಸ್ ಕಳುಹಿಸುವಂತೆ ಆದೇಶಿಸಿತು.



ಹುಡುಗಿಯ ತಂದೆ ಸ್ವಲ್ಪ ಉದಾರವಾದಿಯಾಗಿದ್ದಂತೆ ತೋರುತ್ತದೆ. ಅವರು ವಿವಾಹಿತರು ಬೇರೆ ಆಗಬೇಕೆಂಬ ಬಗ್ಗೆ ಬಹಳಷ್ಟು ಒತ್ತಾಯವನ್ನೇನು ಮಾಡಿದಂತಿಲ್ಲ. ಜಾತಿ ಪಂಚಾಯ್ತಿ ಆದೇಶದಂತೆ 50 ದಿನಗಳು ಕಳೆದರೂ ದಿವ್ಯಾ ಹಿಂದಿರುಗಿ ಬರಲು ಒಪ್ಪಲಿಲ್ಲ. ಇಳವರಸನ್ ಕುಟುಂಬ ಪೋಲೀಸ್ ರಕ್ಷಣೆ ಪಡೆಯಿತು. ಜಾತಿವಾದಿಗಳು ಇದು ತಮಗೆ ಎಸಗಿದ ಘೋರ ಅಪಮಾನ ಎಂದು ಭಾವಿಸಿದರು. ಮೇಲ್ಜಾತಿಯ ಜನರ ಒತ್ತಡಕ್ಕೆ ಸಿಲುಕಿದ ಹುಡುಗಿಯ ತಂದೆ ಆತ್ಮಹತ್ಯೆಗೆ ಶರಣಾದರು. ಅವರಿಗೆ ಕುಡಿತದ ಅಭ್ಯಾಸವು ಇತ್ತೆಂದು ಹೇಳಲಾಗಿದೆ.

ಲೂಟಿ,ಲೂಟಿ

ವಾಹನಗಳಲ್ಲಿ ಸು. 3000 ಜನರು ಪೆಟ್ರೋಲ್ ಬಾಂಬ್, ಕಬ್ಬಿಣದ ರಾಡ್‌ಗಳನ್ನು, ಹಿಡಿದುಕೊಂಡು ದಲಿತ ಕಾಲನಿಯ ಮೇಲೆ ಎರಗಿದ್ದಾರೆ. ಪ್ರತಿ ಮನೆಯ ಮುಂದೆ ಒಂದೊಂದು ವಾಹನ ನಿಲ್ಲಿಸಿಕೊಳ್ಳುವುದು ಮನೆಯನ್ನು ಲೂಟಿ ಮಾಡುವುದು ನಡೆದಿದೆ. ಅಲ್ಮೇರಾಗಳನ್ನು ಕಬ್ಬಿಣದ ರಾಡ್‌ಗಳಿಂದ ಒಡೆದು ಹಾಕಿ ಅಲ್ಲಿದ್ದ ಆಭರಣಗಳನ್ನು, ನಗದು ದೋಚಲಾಗಿದೆ. ಹೋಗುವಾಗ ಇಡೀ ಮನೆಗಳನ್ನು ಧ್ವಂಸ ಮಾಡಲಾಗಿದೆ. ಮನೆಯೊಳಗಿದ್ದ ಎಲ್ಲ ಸಾಮಾನುಗಳನ್ನು ಧ್ವಂಸ ಮಾಡಿ ಮನೆಗಳಿಗೆ ಬೆಂಕಿ ಇಡಲಾಗಿದೆ. ಆಹಾರ ಧಾನ್ಯದ ಚೀಲಗಳಿಗೆ ಮತ್ತು ಮಾರ್ಕ್ಸ್‌ಕಾರ್ಡ್‌ಗಳು ಮುಂತಾದ ಸರ್ಟಿಫಿಕೇಟುಗಳಿಗೆ ಕೂಡ ಬೆಂಕಿ ಹಚ್ಚಲಾಗಿದೆ.

ನಾಥಮ್ ಗ್ರಾಮದಲ್ಲಿ ಮನೆಗೆ ಟೈಲ್ಸ್ ಹಾಕಿಸಿಕೊಂಡಿದ್ದ ದಲಿತರ ಮನೆಗಳ ಟೈಲ್ಸ್‌ಗಳನ್ನು ಆಕ್ರೋಶದಿಂದ ಪುಡಿ ಪುಡಿ ಮಾಡಲಾಗಿದೆ. ದಲಿತರು ಮನೆಗಳಿಗೆ ಟೈಲ್ಸ್ ಹಾಕಿಸಿಕೊಳ್ಳುವುದು ಮೇಲ್ಜಾತಿ ಹಿಂದುಗಳಿಗೆ ಮಾಡುವ ಅವಮಾನ ! ದಲಿತರ ಮನೆಗಳಿಗೆ ಟೈಲ್ಸಾ !!! ಎಂದು ದಾಳಿಕೋರರು ಅಣಕವಾಡಿದ್ದಾರೆ. ಟೈಲ್ಸ್ ಕೀಳಲು ಬಾರದ ಕೆಲವು ಮನೆಗಳಿಗೆ ಪೆಟ್ರೋಲ್ ಬಾಂಬ್ ಹಾಕಲಾಗಿದೆ.

ದಲಿತ ಕಾಲೋನಿಯಲ್ಲಿ ಯುವಕನೊಬ್ಬನ ಆಡಿಯೋ ಸ್ಪೀಕರ್ ಅಂಗಡಿಯ ಮೇಲೆ ದಾಳಿ ನಡೆಸಿ ಅಂಗಡಿಯಲ್ಲಿ ಒಂದೇ ಒಂದು ಆಡಿಯೋ ಸಿಸ್ಟಂ ಇಲ್ಲದಂತೆ ಎಲ್ಲವನ್ನು ಪುಡಿಪುಡಿ ಮಾಡಲಾಗಿದೆ. ಅಣ್ಣಾನಗರದಲ್ಲಿ " ನಿಮ್ಮನ್ನು ಇಲ್ಲಿ ಇರಗೊಡುವುದಿಲ್ಲ... " ಎಂದು ಒಂದೇ ಸಮನೆ ಕೂಗುತ್ತಿದ್ದವರು " ಇದೇ ನಿಮಗೆ ದೀಪಾವಳಿ ಉಡುಗೊರೆ" ಎಂದೂ ಕಿರುಚಿದ್ದಾರೆ. ಇದೇ ದಲಿತ ಕಾಲೋನಿಯಲ್ಲಿ ವಾಸಿಸುವ ಪೋಲೀಸ್ ಹೆಡ್ ಕಾನ್ಸ್‌ಟೇಬಲ್ ಮನೆ ಸಹ ದಾಳಿಗೆ ಗುರಿಯಾಗಿದೆ. ಆದರೆ ಅದನ್ನು ಮಾತ್ರ ಸುಡಲು ಆಗಿಲ್ಲ. ಯಾಕೆಂದರೆ ಅದು ಒಂದು ಪಕ್ಕಾ ಮನೆ. ಆದರೂ ಮನೆಯ ಬಾಗಿಲು, ಕಿಟಕಿಗಳನ್ನು ಒಡೆದು ಹಾಕಲಾಗಿದೆ. ಟೈಲ್ಸ್‌ಗಳನ್ನು ಕಿತ್ತುಹಾಕಲಾಗಿದೆ.

ದಲಿತರು ಇಟ್ಟುಕೊಂಡಿದ್ದ ದ್ವಿಚಕ್ರ, ನಾಲ್ಕು ಚಕ್ರದ ವಾಹನಗಳನ್ನು ಸುಡಲಾಗಿದೆ. ದಲಿತರು ಹೇಗೆ ವಾಹನ ಇಟ್ಟುಕೊಳ್ಳಲು ಸಾಧ್ಯವಾಯಿತು? ದಲಿತರು ಬೈಕು, ಕಾರು ಇತ್ಯಾದಿ ಸ್ವಂತ ವಾಹನಗಳಲ್ಲಿ ಓಡಾಡುವುದು 'ಉತ್ತಮ ಜಾತಿ'ಯವರಿಗೆ ಮಾಡಿದ ಅವಮಾನ.!! ಅದು ಅವರಿಗೆ ಅಗೌರವ ಸೂಚಿಸಿದಂತೆ !! ವಾಹನಗಳಿಗೆಲ್ಲ ಬೆಂಕಿ ಹಚ್ಚಿ ಸುಟ್ಟಿದ್ದಾರೆ. ಗುಂಪಿನ ಆಕ್ರೋಶಕ್ಕೆ ತತ್ತರಿಸಿದ ದಲಿತ ಕಾಲೋನಿಯ ಪುರುಷರು, ಮಹಿಳೆಯರು ಕಾಲೋನಿಯಿಂದ ದೂರ ಓಡಿ ಹೊಲಗಳಲ್ಲಿ ಬಚ್ಚಿಟ್ಟುಕೊಂಡಿದ್ದಾರೆ. ದಾಳಿ ಮಾಡಲು ಬಂದವರಲ್ಲಿ ಮಹಿಳೆಯರು ಮತ್ತು ಮಕ್ಕಳು ಸಹ ಇದ್ದದ್ದು ವಿಶೇಷವಾಗಿ ಗಮನಿಸಬೇಕಾದ ಅಂಶವಾಗಿದೆ. ನಾಥಮ್ ಗ್ರಾಮದಲ್ಲಿ ಒಟ್ಟು 268 ಮನೆಗಳು ಸುಟ್ಟು ನಾಶವಾಗಿವೆ.

ಹಲ್ಲೆಗೀಡಾದ ಹಲವು ದಲಿತರು ಕೃಷಿ ಕೂಲಿಕಾರರು. ಅವರಿಗೆ ಸ್ವಂತ ಜಮೀನು ಇಲ್ಲ. ಇವರ ಮೇಲೆ ಹಲ್ಲೆ ನಡೆಸಿದ ಮೇಲ್ಜಾತಿಯ ಜನರ ಹೊಲಗಳಲ್ಲೇ ಇವರು ಕೂಲಿ ಮಾಡಬೇಕು. ಹಾಗೇ ದುಡಿದು ಅಕ್ಕಿ ಮತ್ತಿತರರ ದವಸವನ್ನು ಅವರಿಂದಲೇ ಪಡೆಯಬೇಕು. ದಾಳಿಯ ದಿನವೂ ಕೂಡ ಹಲವು ದಲಿತರು ಎಂದಿನಂತೆ ಮೇಲ್ಜಾತಿಯವರ ಹೊಲಗಳಲ್ಲಿ ಕೂಲಿ ಮಾಡಿದ್ದರು. ಅವರು ಕೂಡ ಎಂದಿನಂತೆ 'ಸ್ನೇಹಮಯ'ವಾಗಿಯೇ ಮಾತನಾಡಿಸಿದ್ದರು. ದಾಳಿಯ ಸುಳಿವಿನ ಯಾವ ಲವಶೇಷವೂ ಅವರ ಮುಖಗಳಲ್ಲಿ ಕಂಡು ಬಂದಿರಲಿಲ್ಲ. ಆದರೆ ರಾತ್ರಿ ಅವರೆಲ್ಲರೂ ನಮ್ಮ ಮೇಲೆ ರಾಕ್ಷಸದಂತೆ ಬಿದ್ದರು ಎನ್ನುತ್ತಾರೆ ದಲಿತರು.

ಸವರ್ಣೀಯರ ಪ್ರಕಾರ ಈ ಕಾಲನಿಗಳ ಹೆಚ್ಚಿನ ದಲಿತರು ಸಾಕಷ್ಟು 'ಮುಂದುವರಿದಿದ್ದಾರೆ'. 'ಮುಂದುವರಿದಿದ್ದಾರೆ' ಎಂದರೆ ಅರ್ಥ ಏನೆಂದರೆ ಕಾಲೋನಿಯ ಹೆಚ್ಚಿನ ದಲಿತರು ಪರಂಪರೆಯಿಂದ ತಮ್ಮ ಪಾಲಿಗೆ ಮೀಸಲಾಗಿದ್ದ ಚಾಕರಿಗಳನ್ನು ಮಾಡುವುದನ್ನು ಬಿಟ್ಟಿದ್ದಾರೆ. ಬೆಂಗಳೂರು, ಕೊಯಮತ್ತೂರಿನಲ್ಲಿ ಕೂಲಿ ಕೆಲಸಕ್ಕೆ, ಕಟ್ಟಡ ಕೆಲಸಕ್ಕೆ ಹೋಗುತ್ತಾರೆ. ಅಲ್ಲಿ ಬೀದಿಗಳಲ್ಲಿ, ತಾತ್ಕಾಲಿಕ ಶೆಡ್‌ಗಳಲ್ಲಿ ಮಲಗುತ್ತಾ ಕೂಲಿಯ ಹಣ ಉಳಿಸಿ ದೀಪಾವಳಿ ಅಥವಾ ಪೊಂಗಲ್ ಹಬ್ಬಕ್ಕಷ್ಟೇ ಕಾಲೋನಿಗೆ ಬರುತ್ತಾರೆ. ಇದೇ ಹಬ್ಬದ ಸಂದರ್ಭವನ್ನು ಹಲ್ಲೆಗೆ ಬಳಸಿಕೊಂಡಿರುವುದು ಇದೊಂದು ಪೂರ್ವ ನಿಯೋಜಿತ ಕೃತ್ಯ ಎಂಬುದನ್ನು ತೋರಿಸುತ್ತದೆ.

ತಮ್ಮ ಗ್ರಾಮಗಳಿಂದ ದೂರದ ನಗರಗಳಿಗೆ ಹೋಗಿ ಕೂಲಿ ಕೆಲಸ ಮಾಡುವುದರಿಂದ ತಾವು ಜಾತಿ ಬಂಧನದ ಕಪಿಮುಷ್ಟಿಯಿಂದ ತಪ್ಪಿಸಿಕೊಂಡು ಬಿಡಬಹುದು ಎಂದು ದಲಿತರು ತಿಳಿಯುವಂತಿಲ್ಲ. ಎಲ್ಲಿ ಹೋದರೂ ನೀವು ದಲಿತರೆ. ದಲಿತರು ಯಾವಾಗಲೂ ನಮ್ಮ ಕರುಣೆಯಲ್ಲೇ ಬದುಕಬೇಕು ಎಂಬ ಸಂದೇಶವನ್ನು ಕೂಡ ದಾಳಿಯ ಮೂಲಕ ಜಾತಿವಾದಿಗಳು ರವಾನಿಸಿದ್ದಾರೆ.

ವಣ್ಣಿಯಾರ್ ಸಮುದಾಯದ ಗ್ರಾಮಕ್ಕೆ ತಂಡ ಭೇಟಿ ನೀಡಿದಾಗ ಅಲ್ಲಿ ಸಣ್ಣ ಟೀ ಅಂಗಡಿ ಇಟ್ಟುಕೊಂಡಿದ್ದ ಮಹಿಳೆಯೊಬ್ಬರೊಂದಿಗೆ ತಂಡ

ಪುಟ 14ಕ್ಕೆ


ಬಹಿರಂಗದಲ್ಲಿ ಪ್ರಚಾರ, ಅಂತರಂಗದಲ್ಲಿ ವಂಚನೆ

ರೇಗಾ, ಅರಣ್ಯ ಕಾನೂನು ಮತ್ತು ನಗದು ವರ್ಗಾವಣೆ

ಅರಣ್ಯ ಕಾನೂನು ಮತ್ತು ಉದ್ಯೋಗ ಖಾತ್ರಿಯ ರೇಗ ಯುಪಿಎ ಸರಕಾರ ತನ್ನ 'ಆಮ್ ಆದ್ಮಿ'-ಪರತೆಯ ಪ್ರಚಾರಕ್ಕಾಗಿ ಬಹುವಾಗಿ ಬಳಸಿರುವ ಎರಡು ಕ್ರಮಗಳು. ಇವುಗಳ ಪ್ರಚಾರದ ಪ್ರಯೋಜನ ಮುಗಿದ ಮೇಲೆ ಈಗ ವಂಚನೆಯ ಪರ್ವ ಆರಂಭವಾದಂತಿದೆ.

ಯೋಜನಾ ಆಯೋಗ ಪರಿಶಿಷ್ಟ ಜಾತಿ ಉಪ ಯೋಜನೆಗೆ ಹಣ ನೀಡಿಕೆಯಲ್ಲಿ ರೂ. 10,000 ಕೋಟಿ ಕಡಿತ ಮಾಡುವ ಪ್ರಯತ್ನ ನಡೆಸಿರುವುದಾಗಿ ವರದಿಯಾಗಿದೆ. ಇಷ್ಟು ಹಣ ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನಿನ(ಎಂಎನ್‌ರೇಗ) ಅಡಿಯಲ್ಲಿ ಒದಗಿಸಿರುವ ಹಣ. ಇದು ಕೂಡ ಪರಿಶಿಷ್ಟ ಜಾತಿಗಳ ಉದ್ಧಾರದ ಕ್ರಮವಾದ್ದರಿಂದ ಹೀಗೆ ಮಾಡಿದೆಯಂತೆ. ಇದನ್ನು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಬಲವಾಗಿ ಖಂಡಿಸಿದೆ.

ಉಪಯೋಜನೆ ಎಂಬುದು ಪರಿಶಿಷ್ಟ ಜನತೆಗೆ ಸಾಮಾಜಿಕ



ನ್ಯಾಯದ ಕ್ರಮ, ರೇಗ ಸಾರ್ವತ್ರಿಕವಾದ ಗ್ರಾಮೀಣ ನಿರುದ್ಯೋಗ ಇಳಿಕೆಯ ಕ್ರಮ. ಇದು ದಲಿತರಿಗಷ್ಟೇ ಅಲ್ಲ. ಆದ್ದರಿಂದ ಯೋಜನಾ ಆಯೋಗದ ಈ ಪ್ರಯತ್ನ ಸಂಪೂರ್ಣ ತರ್ಕಹೀನ ಎಂಬುದು ಸ್ಪಷ್ಟ. ಆದರೆ ಇಂತಹ ತರ್ಕಹೀನತೆ ಯುಪಿಎ ಸರಕಾರ ಅನುಸರಿಸುತ್ತಿರುವ ನವ-ಉದಾರವಾದಿ ಚೌಕಟ್ಟಿನಲ್ಲಿ ಯೋಜನಾ ಆಯೋಗದ ಜಾಯಮಾನವೇ ಆಗಿಬಿಟ್ಟಿದೆಯಲ್ಲ! ಜನ-ವಿರೋಧಿ ನಿಲುವಿಗೆ ಈಗ ಕುಖ್ಯಾತವಾಗಿರುವ ಯೋಜನಾ ಆಯೋಗದ ಈ ಪ್ರಯತ್ನ ಎರಡೂ ಕಡೆ ಕುಯ್ಯುವ ಕತ್ತಿ- ಒಂದೇ ಏಟಿನಲ್ಲಿ ದಲಿತರಿಗೂ ವಂಚನೆ, ಗ್ರಾಮೀಣ ನಿರುದ್ಯೋಗಿಗಳಿಗೂ ವಂಚನೆ.


ಬೆಲೆಯೇರಿಕೆಗಳನ್ನು ತಡೆಯುವ ಬದಲು, ಆಹಾರ ಸರಕುಗಳಲ್ಲಿ ವಾಯಿದಾ ವ್ಯಾಪಾರಕ್ಕೆ ಅವಕಾಶ ನೀಡಿ, ಆಗಾಗ ಪೆಟ್ರೋಲ್-ಡೀಸೆಲ್ ದರಗಳನ್ನು ಏರಿಸಿ ತಾನೇ ತುಪ್ಪ ಸುರಿಯುತ್ತದೆ, ಆದರೆ ರೇಗದ ಅಡಿಯಲ್ಲಿ ಕೂಲಿಯನ್ನು ಬೆಲೆಯೇರಿಕೆಗೆ ಅನುಗುಣವಾಗಿ ಹೆಚ್ಚಿಸಲು ನಿರಾಕರಿಸುತ್ತಿದೆ, ಇದೂ ಸಾಲದೆಂಬಂತೆ ಕಾಮನ್ವೆಲ್ತ್ ಕ್ರೀಡಾಕೂಟದಲ್ಲಿ ಮಾಡಿದ ಅಕ್ರಮವನ್ನು (ದಲಿತರಿಗೆ ಎಂದಿರುವ ಹಣವನ್ನು ಬೇರೆಡೆಗೆ ತಿರುಗಿಸಿ) ಪುನರಾವರ್ತಿಸಲು ಹೊರಟಿದೆ. ಇದು ಮೋಸದ ಕಸರತ್ತು ಎಂದು ಕೃಷಿ ಕಾರ್ಮಿಕರ ಸಂಘ ಬಲವಾಗಿ ಟೀಕಿಸಿದೆ.

ಅರಣ್ಯ ಹಕ್ಕುಗಳ ಕಾನೂನು ಬುಡಕಟ್ಟು ಜನಗಳಿಗೆ ಅವರ ಅರಣ್ಯ ಭೂಮಿಯ ಮೇಲಿನ ಹಕ್ಕುಗಳನ್ನು ಮರಳಿ ಕೊಡುವ ಕಾನೂನು ಎನ್ನಲಾಗಿದೆ. ಈ ವಾರ ಉದ್ದಿಮೆಗಳಿಗೆ ಪರಿಸರ ಮಂಜೂರಾತಿಯನ್ನು ಸರಳಗೊಳಿಸುವ ಹೆಸರಿನಲ್ಲಿ ಮಧ್ಯ ಪ್ರವೇಶಿಸಿರುವ ಪ್ರಧಾನ ಮಂತ್ರಿಗಳ ಕಚೇರಿ ಈ ಕಾನೂನನ್ನೂ ಅರ್ಥಹೀನಗೊಳಿಸಿದೆ.

ರೇಗದಂತೆ ಇದೂ ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ ಯುಪಿಎ-1 ಸರಕಾರ ಎಡಪಕ್ಷಗಳ ಒತ್ತಾಯದಿಂದ ತಂದ ಕಾನೂನು. 2009 ರಲ್ಲಿ ಪರಿಸರ ಇಲಾಖೆ ಉದ್ದಿಮೆಗಳಿಗೆ ಪರಿಸರ ಮಂಜೂರಾತಿ ನೀಡುವಾಗ ಈ ಕಾನೂನಿನ ಪಾಲನೆಯಾಗುವಂತಿರಬೇಕು ಎಂದು ರಾಜ್ಯ ಸರಕಾರಗಳಿಗೆ ವಿಧಿಸಲಾಯಿತು. ಇದರ ಪ್ರಕಾರ ಯಾವುದೇ ಪ್ರಾಜೆಕ್ಟಿಗೆ ಅರಣ್ಯ ಭೂಮಿಯನ್ನು ವಹಿಸಿ ಕೊಡುವ ಮೊದಲು ಅಲ್ಲಿಯ ಬುಡಕಟ್ಟು ಜನಗಳ ಹಕ್ಕುಗಳ ಇತ್ಯರ್ಥ ಮಾಡಬೇಕು ಮತ್ತು ಅವರ ಔಪಚಾರಿಕ ಒಪ್ಪಿಗೆ ಪಡೆದಿರಬೇಕು.

ಆದರೆ ಈಗ ಪ್ರಧಾನ ಮಂತ್ರಿಗಳ ಕಚೇರಿ ನೀಡಿರುವ ಶಿಫಾರಸುಗಳ ಪ್ರಕಾರ ಯಾವುದೇ ರೀತಿಯ ಸಾರ್ವಜನಿಕ ವಿಚಾರಣೆ ನಡೆದಿರುವ ಪ್ರಾಜೆಕ್ಟುಗಳಿಗೆ ಬುಡಕಟ್ಟು ಜನಗಳ ಔಪಚಾರಿಕ ಒಪ್ಪಿಗೆಯ ಆವಶ್ಯಕತೆ ಇಲ್ಲ, ರಸ್ತೆ, ರೈಲು, ಪೈಪ್‌ಲೈನ್ ಮುಂತಾದ ಪ್ರಾಜೆಕ್ಟುಗಳಲ್ಲಿಯೂ ಇಂತಹ ಒಪ್ಪಿಗೆ ಬೇಕಿಲ್ಲ, ಅರಣ್ಯ ಹಕ್ಕು ಕಾನೂನಿನ ಅಡಿಯ ವಿಧಾನಗಳನ್ನು ಪೂರೈಸಲಾಗಿದೆ ಎಂದು ರಾಜ್ಯ ಸರಕಾರ ಸರ್ಟಿಫಿಕೇಟ್ ಕೊಟ್ಟರೆ ಸಾಕು. ಪರಿಸರ ಮಂಜೂರಾತಿ ಬೇಕಾಗುವ ಪ್ರಾಜೆಕ್ಟುಗಳಲ್ಲೆಲ್ಲ ಸಾರ್ವಜನಿಕ ವಿಚಾರಣೆ ನಡೆದಿರುವುದರಿಂದ ಇಂತಹ ಯಾವ ಪ್ರಾಜೆಕ್ಟಿಗೂ ಇನ್ನು ಮುಂದೆ ಅರಣ್ಯ ಹಕ್ಕು ಕಾನೂನು ಅನ್ವಯವಾಗುವುದಿಲ್ಲವೆಂದೇ ಅರ್ಥವಾಗುತ್ತದೆ.

ಈ ಶಿಫಾರಸು ಬರುವ ಮೊದಲು ಒಡಿಶಾದಲ್ಲಿ ವೆದಾಂತ ಕಂಪೆನಿಯ ಬಾಕ್ಸೈಟ್ ಗಣಿಗಾರಿಕೆಗೆ ಮಂಜೂರಾತಿ ನಿರಾಕರಿಸಿದ್ದು ಅರಣ್ಯ ಹಕ್ಕುಗಳ ಕಾನೂನಿನ ಅಡಿಯಲ್ಲಿ-ಇದರಲ್ಲಿ ಕಾಂಗ್ರೆಸ್ ಯುವರಾಜ ರಾಹುಲ್ ಗಾಂಧಿ ಮಧ್ಯಪ್ರವೇಶಿಸಿ ತಾನು ಬುಡಕಟ್ಟು ಜನರ ಪರವಹಿಸುವ ಮುಖಂಡ ಎಂದನಿಸಿಕೊಂಡಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.



ವೇದರಾಜ ಎನ್.ಕೆ.

ನೇರ ನಗದು ವರ್ಗಾವಣೆ: 'ಶುದ್ಧ ಜಾದೂ' ಅಥವ 'ಶುದ್ಧ ವಂಚನೆ'?

ಮೇಲಿನದು ಎಡಪಕ್ಷಗಳ ಒತ್ತಡದಿಂದ ಕಾನೂನಗಳನ್ನು ತಂದು ಅದರಿಂದ ಪ್ರಚಾರ ಗಿಟ್ಟಿಸಿ ಈಗ ಅದರಲ್ಲಿಯೇ ಜನಗಳನ್ನು ವಂಚಿಸುವ ಪ್ರಯತ್ನವಾದರೆ 'ನೇರ ನಗದು ವರ್ಗಾವಣೆ'ಯಲ್ಲಿ ಪ್ರಚಾರ ಮತ್ತು ವಂಚನೆಯನ್ನು ಸಂಯೋಜಿಸುವ ಪ್ರಯತ್ನ ನಡೆಸಿರುವಂತೆ ಕಾಣುತ್ತದೆ. ಯುಪಿಎ-2 ಸರಕಾರದ ಈ 'ಕ್ರಾಂತಿಕಾರಿ' ಪರಿಕಲ್ಪನೆಯ 'ದಿಲ್ಲಿ ಅನ್ನಶ್ರೀ' ಯೋಜನೆಯನ್ನು ಯುಪಿಎ ಅಧ್ಯಕ್ಷೆ ಜನವರಿ 1 ರಂದು ಉದ್ಘಾಟಿಸಿದರು. ಇದರ ಅಡಿಯಲ್ಲಿ ಪ್ರತಿ ತಿಂಗಳು ಒಂದು ಬಡ ಕುಟುಂಬದ ಅತ್ಯಂತ ಹಿರಿಯ ಮಹಿಳೆಯ ಬ್ಯಾಂಕ್ ಖಾತೆಗೆ ಅಗ್ಗದ ರೇಶನ್ ಬದಲಿಗೆ 600ರೂ. ಜಮಾ ಮಾಡಲಾಗುವುದು. ಇದು ಬಡವರಿಗೆ ಅಗ್ಗದಲ್ಲಿ ಧಾನ್ಯಗಳನ್ನು ಒದಗಿಸುವ ಅತ್ಯುತ್ತಮ ವಿಧಾನ ಎಂದು ಆ ಸಮಾರಂಭದಲ್ಲಿ ದಿಲ್ಲಿಯ ಮುಖ್ಯಮಂತ್ರಿಗಳು ಸಾರಿದರು. ಕೇವಲ 600ರೂ.ಗಳಿಂದ ಏನಾಗುತ್ತದೆ ಎಂದು ಕೇಳಿದಾಗ, ದಿಲ್ಲಿಯಲ್ಲಿ 5-6 ಸದಸ್ಯರಿರುವ ಕುಟುಂಬಕ್ಕೆ ಬೇಕಾಗುವಷ್ಟು ರೇಶನ್ ಇದರಿಂದ ಕೊಂಡುಕೊಳ್ಳಬಹುದು ಎಂದರಂತೆ. ಇದಕ್ಕೆ ಸಾರ್ವಜನಿಕರಿಂದ ಬಹಳಷ್ಟು ಕ್ರೋಧ ವ್ಯಕ್ತವಾದಾಗ ಈ ಹಣ "ಕುಟುಂಬಗಳಿಗೆ ಒಂದು ರೀತಿಯ ಬೆಂಬಲ. ನೀವಿದರಿಂದ ಏನು ಬೇಕಾದರೂ ಕೊಳ್ಳಬಹುದು. ಆ ಹಿರಿಯೆ ಇದರ ನೆರವಿನಿಂದ ಔಷಧಿಗಳನ್ನಾದರೂ ಕೊಳ್ಳಬಹುದು, ಮಕ್ಕಳಿಗೆ ಹಾಲನ್ನಾದರೂ ಕೊಳ್ಳಬಹುದು" ಎಂದು 'ಸ್ಪಷ್ಟೀಕರಣ' ನೀಡಿದರಂತೆ. ಅಂದರೆ ಯುಪಿಎ ಮುಖಂಡರ ಆಶಯ ಈ ಮೂಲಕ ಬಡವರಿಗೆ ಅಗ್ಗದ ಆಹಾರ ಒದಗಿಸುವುದಂತೂ ಅಲ್ಲ, ಹೆಚ್ಚೆಂದರೆ ತುರ್ತು ಅಗತ್ಯವನ್ನು ಪೂರೈಸಿಕೊಳ್ಳಲು ಅಲ್ಪ 'ಬೆಂಬಲ' ಅಷ್ಟೆ. ಇದು ಯುಪಿಎ-2 ಹಣಕಾಸು ಮಂತ್ರಿಗಳ ಮಟ್ಟಿಗೆ 'ಶುದ್ಧ ಜಾದೂ'! ಹಾಗೆಂದು ಅವರು ಈ ವಾರ ಮತ್ತೆ ಅದನ್ನು ವರ್ಣಿಸಿದ್ದಾರೆ. ಪಡಿತರ ವ್ಯವಸ್ಥೆಯನ್ನು ಸಾರ್ವತ್ರೀಕರಿಸುವ ಬದಲು ಅದನ್ನು ಖಾಸಗೀಕರಿಸಿ ಸಬ್ಸಿಡಿ ಮೊತ್ತಗಳನ್ನು ಕಡಿತ ಮಾಡುವ 'ಜಾದೂ'.

ಬಹುಪಾಲು ಬಡವರಿಗೆ ಇಂತಹ 'ಜಾದೂ' ನಿಜವಾಗಿಯೂ ವಂಚನೆಯೇ. ದಿಲ್ಲಿಯ 'ರೋಟೀ ರೋಝೀ ಅಭಿಯಾನ್' ನಡೆಸಿದ ಒಂದು ಸರ್ವೆಯ ಪ್ರಕಾರ 90ಶೇ. ನಗರಗಳ ಬಡವರು ನಗದು ವರ್ಗಾವಣೆಗಿಂತ ಸುಧಾರಿತ ಪಡಿತರ ವ್ಯವಸ್ಥೆ ಬರಲಿ ಎನ್ನುತ್ತಾರೆ. ಬಿಪಿಎಲ್ ಕುಟುಂಬಗಳಲ್ಲಿ ಕೇವಲ 3.6ಶೇ., ಅಂತ್ಯೋದಯ ಕುಟುಂಬಗಳಲ್ಲಿ 5.8 ಶೇ. ಮಂದಿ ಮಾತ್ರ ನಗದು ವರ್ಗಾವಣೆ ಒಳ್ಳೆಯದು ಎಂದು ಭಾವಿಸಿದ್ದಾರೆ.

ಅರ್ಥಶಾಸ್ತ್ರಜ್ಞರಾದ ಜೀನ್ ಡ್ರೆಝ್ ಮತ್ತು ರೀತಿಕಾ ಖೇರ ಅವರು ನಡೆಸಿದ ಒಂಬತ್ತು ರಾಜ್ಯಗಳ ಅಧ್ಯಯನದ ಪ್ರಕಾರವೂ 67.2 ಶೇ. ಜನಗಳು ಈಗಿರುವ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸುಧಾರಿಸುವುದೇ 'ನೇರ ನಗದು ವರ್ಗಾವಣೆ'ಗಿಂತ ಉತ್ತಮ ಎಂದು ಭಾವಿಸುತ್ತಾರೆ. ಬಿಹಾರದಲ್ಲಿ ಮಾತ್ರವೇ 'ನೇರ ನಗದು ವರ್ಗಾವಣೆ' ಪಡಿತರ ವ್ಯವಸ್ಥೆಗಿಂತ ವಾಸಿ ಎಂಬ ಅಭಿಪ್ರಾಯ ಕಂಡು ಬಂದಿದೆ. ಪಡಿತರ ವ್ಯವಸ್ಥೆ ಸಾಕಷ್ಟು ಚೆನ್ನಾಗಿ ನಡೆಯುತ್ತಿರುವಲ್ಲಿ ನಗದು ವರ್ಗಾವಣೆ ಬಹು ಪಾಲು ಜನಕ್ಕೆ ಬೇಕಿಲ್ಲ.

ವಿಜ್ಞಾನ-ತಂತ್ರಜ್ಞಾನ ಧೋರಣೆಯಲ್ಲೂ ಪಿ.ಪಿ.ಪಿ.

ಪ್ರಧಾನ ಮಂತ್ರಿಗಳು ಕಳೆದ ವಾರ ಭಾರತೀಯ ವಿಜ್ಞಾನ ಶತಮಾನೋತ್ಸವ ವರ್ಷದ ಸಮ್ಮೇಳನದಲ್ಲಿ ಯುಪಿಎ-2 ಸರಕಾರದ ವತಿಯಿಂದ ಹೊಸ 'ವಿಜ್ಞಾನ ತಂತ್ರಜ್ಞಾನ ನವೀನತೆಯ ಧೋರಣೆ'ಯನ್ನು ಪ್ರಕಟಿಸಿದರು. ಈ ಹಿಂದೆ 1958, 1983 ಮತ್ತು 2003 ರಲ್ಲಿ, ಹೀಗೆ ಮೂರು ವಿಜ್ಞಾನ-ತಂತ್ರಜ್ಞಾನ ಧೋರಣೆಗಳು ಬಂದಿವೆ. ಇದು 21 ನೇ ಶತಮಾನದ ಆರಂಭಿಕ ದಶಕಗಳ ಅಗತ್ಯಗಳಿಗೆ ಅನುಗುಣವಾದ ಹೊಸ ಧೋರಣೆ ಎನ್ನಲಾಗಿದೆ.

ಇದರಲ್ಲಿ ನಿರೂಪಿಸಿರುವ ಧ್ಯೇಯೋದ್ದೇಶಗಳು ಹೊಸದೇನಲ್ಲ, ಆ ಬಗ್ಗೆ ಯಾರದ್ದೂ ತಕರಾರೂ ಇಲ್ಲ. ಆದರೆ ಇಲ್ಲಿಯೂ ಪ್ರಶ್ನೆ ಜಾರಿಯದ್ದೇ. ಈ ಹಿಂದಿನ ಧೋರಣೆಗಳಲ್ಲಿ ಗುರಿ ಮತ್ತು ಸಾಧನೆಗಳಲ್ಲಿನ ಅಂತರವನ್ನು ವಿಶ್ಲೇಷಿಸುವ ಪ್ರಯತ್ನ ಕೂಡ ಇದರಲ್ಲಿ ಇಲ್ಲವಾದ್ದರಿಂದ ಈ ಹೊಸ ಧೋರಣೆಯಲ್ಲಿನ ಗುರಿಗಳು ಎಷ್ಟರ ಮಟ್ಟಿಗೆ ಈಡೇರಬಹುದು, ಇತರ ಕ್ಷೇತ್ರಗಳ ಚಿತ್ರವೇ

ಪುಟ 15 ಕ್ಕೆ

'ಧರ್ಮಪುರಿ' ಎಂಬಲ್ಲಿ......

ಪುಟ 13 ರಿಂದ


ಘಟನೆ ಕುರಿತು ಮಾತನಾಡಿತು. "ಹುಡುಗಿಯನ್ನು ವಾಪಸ್ ಕೊಟ್ಟುಬಿಟ್ಟಿದ್ದಿದ್ದರೆ ಈ ಘಟನೆಗಳು ನಡೆಯುತ್ತಿರಲಿಲ್ಲ. ಆದರೆ ಅವರು ಹಾಗೆ ಮಾಡಲಿಲ್ಲ. ಪೊಲೀಸರ ರಕ್ಷಣೆ ಪಡೆದರು. ಇದು ನಮ್ಮನ್ನು ಅಗೌರವಿಸಿದಂತೆ, ನಮಗೆ ಗೌರವ ಕೊಡದ ಕಾರಣ ದಾಳಿ ನಡೆಯಿತು" ಮಹಿಳೆ ಯಾವ ಅಪರಾಧಿ ಪ್ರಜ್ಞೆಯೂ ಇಲ್ಲದೇ ಸಹಜವೆಂಬಂತೆ 'ಮುಗ್ಧ'ವಾಗಿ ಹೇಳಿದಳು.

'ಮನು ಧರ್ಮ' ಹೇಳುವಂತೆ ಮಹಿಳೆ ಪುರುಷನ ಆಸ್ತಿ. ದಲಿತರು ಆ ಆಸ್ತಿಯನ್ನು ಕದ್ದರು. ಕದ್ದ ಆಸ್ತಿಯನ್ನು ಹಿಂದಿರುಗಿಸುವಂತೆ ಸವರ್ಣೀಯರು ಕೇಳಿದರು. ದಲಿತರು ಹಿಂದಿರುಗಿಸಲಿಲ್ಲ. ಇದು ಕಳುವಾದ ಆಸ್ತಿಯನ್ನು ವಾಪಸ್ ಪಡೆಯುವ ಎಂಬ ವಿಧಾನ ಎಂಬಂತಹ ಚಿಂತನೆ ಅವರದ್ದು.

ವಣ್ಣಿಯಾರರು ಕೂಡ ಶ್ರಮಜೀವಿಗಳೇ. ಅವರಲ್ಲಿ ಸಾಕಷ್ಟು ಜನರು ಲಾರಿ ಚಾಲಕರು, ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಾರೆ. ತಮಿಳುನಾಡಿನ ಬಹಳಷ್ಟು ಜಾತಿಗಳು ತಮ್ಮ ಗತಕಾಲದಲ್ಲಿನ ತಮ್ಮ 'ವೈಭವ', 'ಜಾತಿ ಪ್ರಾಬಲ್ಯತೆ'ಯನ್ನು ಮೆಲುಕು ಹಾಕುತ್ತವೆ. ಮತ್ತೆ ಅದೇ ಶಕ್ತಿಯನ್ನು ಪಡೆಯಬೇಕು ಎಂದು ತಹತಹಿಸುತ್ತವೆ. ಜನತೆಯನ್ನು ಜಾತಿಯ ಹೆಸರಿನಲ್ಲಿ ಜಾತಿ ಮುಖಂಡರು ಬಳಸಿಕೊಳ್ಳುತ್ತಿರುವುದು ಹೆಚ್ಚುತ್ತಿದೆ. ಎಲ್ಲ ಜಾತಿಗಳು ತಮ್ಮದೇ ಜಾತಿಯ ವ್ಯಕ್ತಿ ಮುಖ್ಯಮಂತ್ರಿಯಾಗಬೇಕು ಎಂದು ಬಯಸುವಂತಹ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ. ಹೀಗಾಗಿಯೇ ಜನರು ಪ್ರಚೋದನೆಗೊಳಗಾದಾಗ ಕಾನೂನು ಸಂವಿಧಾನಕ್ಕೂ ಗೌರವ ಕೊಡದೇ ಮಾನವೀಯತೆ ಮರೆತು ಜಾತಿಯ ಹೆಸರಿನಲ್ಲಿ ಹಿಂಸೆ, ದಾಳಿಗೆ ಮುನ್ನುಗ್ಗುತ್ತಾರೆ. ಜಾತಿಯ ಹೆಸರಿನಲ್ಲಿ ಜನರನ್ನು ಪ್ರಚೋದನೆ ಮಾಡುವುದು ಇಲ್ಲಿನ ಮುಖಂಡರಿಗೂ ಸುಲಭವಾಗಿದೆ.

ಪಿಎಂಕೆ ಎಂಬ ರಾಜಕೀಯ ಪಕ್ಷ ಜಾತಿ ಪ್ರಚೋದನೆಯಲ್ಲಿ ತೊಡಗಿದೆ. ಹಿಂದುಳಿದ ವಣ್ಣಿಯಾರ್ ಸಮುದಾಯದ ಹೆಸರಿನಲ್ಲಿ ರಾಜಕೀಯ ಮಾಡುತ್ತಿರುವ ಪಿಎಂಕೆಯ ಮುಖಂಡರಾದ ರಾಮದಾಸ್ ಮತ್ತು ಪಿಎಂಕೆಯ ಮಾಜಿ ಶಾಸಕ ಕಾಡುವೆಟ್ಟಿ ಗುರು ದಲಿತರನ್ನು ಊರ ಹೊರಗಿಡುವ ಪದ್ಧತಿಯನ್ನು ಸಮರ್ಥಿಸಿ ಬಹಿರಂಗವಾಗಿ ಮಾತನಾಡಿದ್ದಾರೆಂದರೆ, ಜನಾಂಗದ 'ರಕ್ತ ಪರಿಶುದ್ಧತೆ'ಯನ್ನು ಕಾಪಾಡಿಕೊಳ್ಳಲು ಅಂತರ್ ಜಾತೀಯ ವಿವಾಹಗಳನ್ನು ವಿರೋಧಿಸಲು ಕೂಡ ಅವರು ಕರೆ ನೀಡಿದ್ದಾರೆ ಎಂದರೆ ಪರಿಸ್ಥಿತಿ ಎಲ್ಲಿಗೆ ತಲುಪಿದೆ ಎಂದು ಊಹಿಸಬಹುದು.

ಗ್ರಾಮಕ್ಕೆ ಭೇಟಿ ನೀಡಿದ ತಂಡ ಕೆಲವು ಸಂಗತಿಗಳನ್ನು ಗಮನಿಸಿದೆ. ಸರ್ಕಾರ ದಾಳಿಗೊಳಗಾದವರಿಗೆ ನಿಕೃಷ್ಟ ಪರಿಹಾರವನ್ನು ಮಾತ್ರ ನೀಡಿದೆ. ದಾಳಿ ನಡೆದು ತಿಂಗಳುಗಳು ಕಳೆದರೂ ರಾಜ್ಯದ ಮುಖ್ಯಮಂತ್ರಿ ದಲಿತರ ಕೇರಿಗೆ ಭೇಟಿ ನೀಡಿಲ್ಲ. ದಾಳಿಯಲ್ಲಿ ಸುಮಾರು 3,000 ಜನರು ಪಾಲ್ಗೊಂಡಿದ್ದರೂ ಸು. 100 ಜನರ ಮೇಲೆ ಮಾತ್ರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಆದರೆ ಅಪರಾಧಿಗಳಿಗೆ ಯಾವುದೇ 'ದಂಡ' ವಿಧಿಸಲಾಗಿಲ್ಲ.



ಸಂತ್ರಸ್ಥ ದಲಿತರ ಪ್ರತಿಭಟನೆಯಲ್ಲಿ ಸಿಪಿಐ(ಎಂ) ತಮಿಳುನಾಡು ಕಾರ್ಯದರ್ಶಿ ಜಿ. ರಾಮಕೃಷ್ಣನ್

ಈ ಅವಮಾನವೀಯ ದಾಳಿಯನ್ನು ಸಿಪಿಐ(ಎಂ) ಶಾಸಕರು, ಸಂಸದರು ಮತ್ತು ರಾಜ್ಯ ಮತ್ತು ಜಿಲ್ಲಾ ಮುಖಂಡರು ಉಗ್ರವಾಗಿ ಖಂಡಿಸಿದ್ದಾರೆ. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ. ರಾಮಕೃಷ್ಣನ್, ಧರ್ಮಪುರಿ ಜಿಲ್ಲಾ ಕಾರ್ಯದರ್ಶಿ, ಕೊಯಮತ್ತೂರು ಸಂಸದ ಪಿ.ಆರ್.ನಟರಾಜನ್, ಸಿಪಿಐ(ಎಂ) ಶಾಸಕ ಮಾರಿಮುತ್ತು ಅಸ್ಪೃಶ್ಯತಾ ನಿವಾರಣಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ದಿಲ್ಲಿಬಾಬು ಮುಂತಾದವರು ಘಟನಾ ಸ್ಥಳಕ್ಕೆ ಭೇಟಿ ನೀಡಿ ನೊಂದವರಿಗೆ ಸಾಂತ್ವಾನ ಹೇಳಿದ್ದಾರೆ. ವಿಮಾ ನೌಕರರ ಸಂಘಟನೆ ಸೇರಿದಂತೆ ಮಧ್ಯಮ ವರ್ಗದ ಸಂಘಟನೆಗಳು ಹತ್ತು ಲಕ್ಷದವರೆಗೂ ಪರಿಹಾರ ನೀಡಿದ್ದಾರೆ. ಮನೆ ಕಳೆದುಕೊಂಡವರಿಗೆ ಹೊದೆಯಲು ಬಟ್ಟೆ, ಊಟ ಮಾಡಲು ತಟ್ಟೆಗಳನ್ನು ವಿತರಿಸಲಾಗಿದೆ.

ಸ್ಥಳೀಯ 'ಜಾತಿ ಪಂಚಾಯ್ತಿ' ಪಿಎಂಕೆಗೆ ಬೆಂಬಲವಾಗಿದೆ. ದಾಳಿ ಪೂರ್ವ ನಿಯೋಜಿತವಾಗಿದ್ದರೂ ಅದನ್ನು 'ತಿಳಿಯುವಲ್ಲಿ' ಮತ್ತು ಅಗತ್ಯ ಕ್ರಮ ವಹಿಸುವಲ್ಲಿ ಗುಪ್ತಚರ ಇಲಾಖೆ ಸಂಪೂರ್ಣ ವಿಫಲವಾಗಿದೆ. ದಾಳಿಯನ್ನು ನಡೆಸಿದವರ ಮೇಲೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮೇಲಿನ ದೌರ್ಜನ್ಯ ನಿಯಂತ್ರಣ ಕಾಯ್ದೆಯಡಿ ಮೊಕದ್ದಮೆ ದಾಖಲಿಸಬೇಕು. ಸಿಬಿಐ ಮೂಲಕ ತನಿಖೆ ನಡೆಯಬೇಕು ಹಾಗೂ ಸಂತ್ರಸ್ತರಿಗೆ ಸಂಪೂರ್ಣ ಪುನರ್ ವಸತಿಗೆ ಏರ್ಪಾಡು ಮಾಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದ್ದಾರೆ. ಪ್ರತಿಭಟನೆ ಸಂದರ್ಭದಲ್ಲಿ ದಲಿತರು ತಮ್ಮ ಮೇಲೆ ನಡೆದ ದಾಳಿಯನ್ನು ವಿವರಿಸಿದರೂ ಕೂಡ, ದೌರ್ಜನ್ಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರೂ ಕೂಡ ಅವರು ಯಾವುದೇ ಸಮುದಾಯದ ವಿರುದ್ಧ ಸೇಡಿನ ಮಾತನ್ನಾಡಿಲ್ಲ ಎಂಬುದುನ್ನು ಗಮನಿಸಬೇಕು. ಇವರಿಂದ ಪಿಎಂಕೆ ಮುಖಂಡ ರಾಮದಾಸ್ ಮುಂತಾದವರು ಪಾಠ ಕಲಿಯಬೇಕು ಎಂದು ಹೇಳಿರುವ ಅಸ್ಪೃಶ್ಯತಾ ನಿವಾರಣಾ ಸಮಿತಿಯ ಮುಖಂಡರ ವಿವೇಕದ ಮಾತುಗಳನ್ನು ಹಾಗೂ ದಾಳಿಗೆ ಗುರಿಯಾದರೂ ಪ್ರಜಾತಂತ್ರದ ಹೋರಾಟದ ಮಾರ್ಗದಲ್ಲಿ ನ್ಯಾಯಕ್ಕಾಗಿ ಆಗ್ರಹಿಸುತ್ತಿರುವ ದಲಿತರ ಪ್ರಬುದ್ಧ ನಡವಳಿಕೆಯನ್ನು ಎಲ್ಲರೂ ಗಮನಿಸಬೇಕಿದೆ. ಜಾತಿವಾದದ ಅಮಲು ತಲೆಗೆ ಏರಿದವರಿಗೆ ಇವೆಲ್ಲಾ ಅರ್ಥವಾಗುತ್ತದೆಯೇ ? ಅರ್ಥ ಮಾಡಿಸುವುದು ಹೇಗೆ ಎಂಬುದು ಈಗ ನ್ಯಾಯಕ್ಕಾಗಿ ನಡೆಯುತ್ತಿರುವ ಈ ಚಳುವಳಿಯ ಮುಂದಿರುವ ಸವಾಲು.

ಈ ಒಟ್ಟು ಘಟನೆಯಲ್ಲಿ ಕೆಲವು ಅಂಶಗಳನ್ನು ಗಮನಿಸಬೇಕು. ವಣ್ಣಿಯಾರ್ ಸಮುದಾಯದ ಜನರು ಇಲ್ಲಿಯವರೆಗೆ ದಲಿತರ ಮನೆಗೆ ಬರುವುದು, ನೀರು ಕುಡಿಯುವುದು, ಊಟ ಮಾಡುವುದು ಎಲ್ಲವೂ ಸಾಕಷ್ಟು ಇತ್ತಂತೆ. ಅಂದರೆ ಅಷ್ಟರ ಮಟ್ಟಿಗಿನ ಬದಲಾವಣೆಗೆ ಈ ಜನ ಮನಸ್ಸು ತೆರೆದುಕೊಂಡಿದ್ದರು. ಆದರೆ ತಮ್ಮ ಜಾತಿಯ ಹುಡುಗಿ ದಲಿತ ಹುಡುಗನನ್ನು ಮದುವೆಯಾಗುವುದನ್ನು ಅವರು ಸಹಿಸಲಿಲ್ಲ.

'ಸ್ವತಂತ್ರ ಭಾರತ'ದ ಶಿಕ್ಷಿತ, ವಯಸ್ಕ, ಬುದ್ಧಿಮಾಂದ್ಯರಲ್ಲದ ಒಂದು ಗಂಡು ಒಂದು ಹೆಣ್ಣು ಪರಸ್ಪರ ಪ್ರೀತಿಸಿ ಮದುವೆಯಾದರೆ ಅದನ್ನು ಯಾರೇ ಆಗಲಿ ವಿರೋಧಿಸಬಹುದೇ? ಈ ಘಟನೆಗೆ ಒಂದು ಇಡೀ ಸಮುದಾಯವನ್ನು ಹೊಣೆಗಾರರನ್ನಾಗಿಸಿ ಅವರ ಮೇಲೆ ಸಾಮೂಹಿಕ ಬರ್ಬರ ದಾಳಿ ನಡೆಸಬಹುದೇ? ಅಂತಹ ದಾಳಿಯನ್ನು ಪಂಚಾಯತ್‌ಗಳು, ವಿಧಾನ ಸಭೆ, ಪಾರ್ಲಿಮೆಂಟಿಗೆ ಕೂಡ ತನ್ನ ಸಾರ್ವತ್ರಿಕ ಚುನಾವಣೆಯ ಮೂಲಕ ತನ್ನ ಅಭ್ಯರ್ಥಿಯನ್ನು ಕಳುಹಿಸಿಕೊಟ್ಟಿರುವ ರಾಜಕೀಯ ಪಕ್ಷವೊಂದು ಬೆಂಬಲಿಸಬಹುದೇ ಎಂಬ ಪ್ರಶ್ನೆ ಇಲ್ಲಿ ದಾಳಿಕೋರರ ಬೆನ್ನಿಗಿರುವ ಪಕ್ಷದ ಮುಖಂಡರ ತಲೆಯಲ್ಲಿ ಏಳಲಿಲ್ಲ. ಪರಿಸ್ಥಿತಿ ಅದಕ್ಕೆ ವಿರುದ್ಧವಾಗಿದೆ. ಮುಂಬರುವ ಚುನಾವಣೆಯಲ್ಲಿ ಜಾತಿವಾದದ ಆಧಾರದಲ್ಲಿ ಓಟುಗಳ ಕ್ರೋಢೀಕರಣಕ್ಕಾಗಿಯೇ ಇಂತಹ ದಾಳಿಯ ಸಮರ್ಥನೆ ನಡೆದಿದೆ ಎಂಬ ವಿಶ್ಲೇಷಣೆಗಳಿವೆ. ಅಸ್ಪೃಶ್ಯರ ಹುಡುಗನೊಂದಿಗೆ ತಮ್ಮ ಸಮುದಾಯದ ಹುಡುಗಿಗೆ ಸಂಬಂಧ ಬೇಡ. ಆದರೆ ಅದೇ ಅಸ್ಪೃಶ್ಯ ಜನರು ಮೈಮುರಿದು ಬೆವರು ಹರಿಸಿ ದುಡಿದು ತಮ್ಮ ಮನೆಯಲ್ಲಿಟ್ಟುಕೊಂಡಿದ್ದ ಒಡವೆ, ವಸ್ತು ಎಲ್ಲವೂ ತಮಗೆ ಬೇಕು. ಎಲ್ಲಿದೆ ಅಸ್ಪೃಶ್ಯತೆ-ಅಸ್ಪೃಶ್ಯತೆಯ ಮೂಲ ನೋಡಿ.

ಯುಪಿಎ ದರ್ಬಾರ್...

ಪುಟ 13 ರಿಂದ

ಇಲ್ಲಿಯೂ ಮರುಕಳಿಸಬಹುದು ಎಂಬುದು ಪರಿಣಿತರ ಆತಂಕ.

ಬಹುಶಃ ಒಂದು ಆತ್ಮಾವಲೋಕನ ಮತ್ತು ವಿಶ್ಲೇಷಣಾತ್ಮಕ ಪರಾಮರ್ಶೆ ಇಲ್ಲದಿರುವುದರಿಂದ ಈ ದಸ್ತಾವೇಜು ಕೊಡುವ ಪರಿಹಾರಗಳು ಮತ್ತೆ ಹೊಸದಾಗಿಯೇ ಆರಂಭಿಸಬೇಕಾದವುಗಳು. ಅಲ್ಲದೆ ಗುರಿಗಳು ಮತ್ತು ಅವಕ್ಕೆ ಬೇಕಾಗುವ ಧೋರಣೆಗಳ ಬಗ್ಗೆಯೂ ಗೊಂದಲಗಳಿವೆ ಎನ್ನುತ್ತಾರೆ ವಿಜ್ಞಾನ ವಿಷಯಗಳ ಪರಿಣಿತರು. ಕಣ್ಣಿಗೆ ರಾಚುವಂತಿರುವ ಇಂತಹ ಒಂದು ಸಂಗತಿಯೆಂದರೆ ವಿಜ್ಞಾನ-ತಂತ್ರಜ್ಞಾನಕ್ಕೆ ಹೇಗೆ, ಎಷ್ಟು ನಿಧಿ ಒದಗಿಸಬೇಕು ಎಂಬ ಪ್ರಶ್ನೆ. ಭಾರತ ಈಗ ಸಂಶೋಧನೆ ಮತ್ತು ಅಭಿವೃದ್ಧಿಗೆ ಮಾಡುವ ಖರ್ಚು ಜಿಡಿಪಿಯ 1ಶೇ.ಮಾತ್ರ. ಇದು ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲೇ ಅತಿ ಕಡಿಮೆ. ಜಾಗತಿಕ ಸರಾಸರಿ 2.5ಶೇ. ಕ್ಕಿಂತಲಂತೂ ಬಹಳ ಕೆಳಗಿದೆ. ಈ ಹೊಸ ಧೋರಣೆ ಅದನ್ನು 2ಶೇ.ಕ್ಕೆ ಏರಿಸಬೇಕೆಂಬ ಗುರಿ ಹೊಂದಿದೆ. ಇದು ಕೂಡ ಬಹಳ ಹಳೆಯ ಕನಸು ಎಂದೂ ಅದು ಒಪ್ಪಿಕೊಳ್ಳುತ್ತದೆ.

ಆದರೆ ಇದು ಇನ್ನೂ ಕನಸಾಗಿಯೇ ಉಳಿಯುವ ಸಂಭವವೇ ಹೆಚ್ಚು. ಏಕೆಂದರೆ ಈ ಹೆಚ್ಚಿನ ನಿಧಿ ಖಾಸಗಿ ವಲಯದಿಂದ ಬರಬೇಕು ಎಂಬುದು ಅದರಲ್ಲಿರುವ ಶಿಫಾರಸು. ಕಳೆದ ಆರು ದಶಕಗಳಲ್ಲಿ ಈ ದಿಕ್ಕಿನಲ್ಲಿ ಭಾರತದಲ್ಲಿ ಖಾಸಗಿ ವಲಯದ ಶೋಚನೀಯ ಪಾತ್ರದ ಬಗ್ಗೆ ಹಲವು ಅಧ್ಯಯನಗಳು ಬಂದಿವೆ. ಈ ಅನುಭವದ ನಂತರವೂ ಇಂತಹ ಶಿಫಾರಸು ಬಂದಿರುವುದು ಈ ಸರಕಾರದ ಪಿ.ಪಿ.ಪಿ.(ಸಾರ್ವಜನಿಕ-ಖಾಸಗಿ-ಪಾಲುದಾರಿಕೆ) ಗೀಳಿನಿಂದಾಗಿ. ಆದರೆ ಜಗತ್ತಿನಾದ್ಯಂತ, ಅತ್ಯಂತ ಮುಂದುವರೆದ ಬಂಡವಾಳಶಾಹಿ ದೇಶಗಳಲ್ಲೂ ವಿಜ್ಞಾನ-ತಂತ್ರಜ್ಞಾನದ ಬೆಳವಣಿಗೆ ಸರಕಾರ ದೊಡ್ಡ ಪ್ರಮಾಣದಲ್ಲಿ ಹಣ ವಿನಿಯೋಗ ನಡೆಸದೆ ಸಾಧ್ಯವಾಗಿಲ್ಲ. ಯುಪಿಎ-2 ಸರಕಾರದ ಪಿಪಿಪಿ ಗೀಳು ಅದನ್ನು ಈ ವಾಸ್ತವದಿಂದ ಕುರುಡಾಗಿಸಿರುವಂತೆ ಕಾಣಿಸುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಕೇರಳದಲ್ಲಿ ಭೂ ಆಕ್ರಮಣ ಚಳುವಳಿ

ಶವೆಲ್ಲ ಹೊಸ ವರ್ಷಾಚರಣೆಯ ಮದಲ್ಲಿರುವಾಗ ಕೇರಳದಲ್ಲಿ ಭೂರಹಿತರೆಲ್ಲ ರಾಜ್ಯದ 14 ಜಿಲ್ಲೆಗಳಲ್ಲಿರುವ ಹೆಚ್ಚುವರಿ ಮಿಯನ್ನು ಭೂಹೀನ ದಲಿತ, ಆದಿವಾಸಿ ತರೆ ಬಡ ಕುಟುಂಬಗಳಿಗೆ ಹಂಚಿಕೆ ೕಕೆಂದು ಕೈಯಲ್ಲಿ ಕೆಂಬಾವುಟವನ್ನು ಮ ಸಾಗರದಂತೆ ಹೋರಾಟಕ್ಕೆ ದುಮುಕಿ ಹೀನರಿಗೆ ಭೂಮಿಯ ಹಕ್ಕನ್ನು ತ್ರಿಗೊಳಿಸುವ ಭೂಸುಧಾರಣಾ ಸ್ದೆಯನ್ನು ಜಾರಿಗೆ ತರಬೇಕೆಂದು ಸಿದರು.

3 ವರ್ಷಗಳ ಹಿಂದೆ ಕೇರಳದಲ್ಲಿ .ಎ.ಕೆ.ಗೋಪಾಲನ್‌ರವರ ತ್ವದಲ್ಲಿ ನಡೆದ ಐತಿಹಾಸಿಕ ಭೂ ೕರಾಟ ಮತ್ತು ಅಂದು ೕನರಿಗೆ ಕೊಟ್ಟ ಭೂಮಿಯ ನ್ನು ನೆನಪಿಸುವ ರೀತಿಯಲ್ಲಿ ಈ ರಾಟವನ್ನು ನಡೆಸಲಾಗುತ್ತಿದೆ. ಹೋರಾಟಕ್ಕೆಂದು ಭೂಸಂರಕ್ಷಣಾ ತಿ, ದಿವಾಸಿ ಕ್ಷೇಮ ಸಭಾ, ಷ್ಟ ಜಾತಿ ಕ್ಷೇಮ ಸಭಾ, ರೈತ ತ್ತ ಕೃಷಿ ಕೂಲಿಕಾರರ ಸಂಘದ ತ್ವದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಂಸೇವಕರನ್ನು ಗುರುತಿಸಿ ಅವರುಗಳಿಂದ ವರಿ ಭೂಮಿಯನ್ನು ವಶಪಡಿಸಿಕೊಳ್ಳುವ ರಾಟವನ್ನು ಪ್ರಾರಂಭಿಸಲಾಯಿತು ಇದಕ್ಕೆ ಲಿಸರು ಅಡಿಪಡ್ಡಿಸಲು ಪ್ರಯತ್ನಿಸಿದರೂ ಾರಿಯಾಗಲಿಲ್ಲ. ಮೊದಲಿಗೆ ಜನವರಿ ರಂದು ಸ್ವಯಂ ಸೇವಕರಿಂದ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯಕ್ಕೆ ಚಾಲನೆ ಸಿಕ್ಕ ಮೇಲೆ ಒಂದು ವಾರದೊಳಗೆ ಈ ಭೂಮಿಯನ್ನು ಭೂ ಹೀನರಿಗೆ ಹಂಚಿಕೆ ಮಾಡದಿದ್ದರೆ ನಾವುಗಳೇ ಆ ಜಾಗದಲ್ಲಿ ಸ್ವತಃ ಗುಡಿಸಲುಗಳನ್ನು ನಿರ್ಮಾಣ



ಮಾಡಬೇಕಾಗುತ್ತದೆಂದು ಹೋರಾಟ ಸಮಿತಿಯು ರಾಜ್ಯ ಸರ್ಕಾರಕ್ಕೆ ಎಚ್ಚರಿಸಿತು.

ಈ ಮಹತ್ವದ ಚಳುವಳಿ ಕೇರಳದ ತ್ರಿಶೂರು ಜಿಲ್ಲೆಯಲ್ಲಿ ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಪಿಣರಾಯ್ ವಿಜಯನ್ ಮತ್ತು ಕೇರಳ ವಿಧಾನ ಸಭೆಯ ಮಾಜಿ ಸಭಾಪತಿ ಹಾಗೂ ಪರಿಶಿಷ್ಟ ಜಾತಿ ಕ್ಷೇಮ ಸಭಾದ ರಾಜ್ಯಾಧ್ಯಕ್ಷರಾದ ಕೆ.ರಾಧಕೃಷ್ಣನ್‌ರವರ ನೇತೃತ್ವದಲ್ಲಿ ಭೂಮಿ ಪ್ರವೇಶಿಸುವ ಮೂಲಕ ಆರಂಭಿಸಲಾಯಿತು. ಎರ್ನಾಕುಲಂ ಜಿಲ್ಲೆಯಲ್ಲಿ ಕೇರಳ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾದ ವಿ.ಎಸ್.ಅಚ್ಯುತಾನಂದನ್ ಉಧ್ಘಾಟಿಸಿದರು, ತಿರುವನಂತಪುರದಲ್ಲಿ ಕೃಷಿಕೂಲಿಕಾರರ ಸಂಘದ ಅಖಿಲ ಭಾರತ ಮುಖಂಡರಾದ ವಿಜಯರಾಘವನ್ ಉದ್ಘಾಟಿಸಿದರು. ತಿರುವನಂತಪುರಂ ಮತ್ತು ಎರ್ನಾಕುಲಂಗಳಲ್ಲಿ ಸಿಪಿಐ(ಎಂ)ನ ಪೊಲಿಟ್ ಬ್ಯೂರೋ ಸದಸ್ಯರಾದ ಕೋಡಿಯೇರಿ ಬಾಲಕೃಷ್ಣನ್ ಮತ್ತು ರಾಜ್ಯ ಸಮಿತಿ ಸದಸ್ಯರಾದ ಎಂ.ವಿಜಯಕುಮಾರ್‌ರವರ ನಾಯಕತ್ವದಲ್ಲಿ ಚಳುವಳಿ ನಡೆಯಿತು.

ಕೇರಳದಲ್ಲಿ ಭೂಸಂರಕ್ಷಣಾ ಸಮಿತಿಯ ಅಡಿಯಲ್ಲಿ ಭೂಹೋರಾಟದಲ್ಲಿ ಒಂದು ಹೊಸ ಶಕೆ ಆರಂಭವಾಗಿದೆ. ಇಡೀ ರಾಜ್ಯಾದ್ಯಂತ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಂಡು ಭೂಹೀನ ದಲಿತ, ಆದಿವಾಸಿ ಮತ್ತಿತರೆ ಕುಟುಂಬಗಳಿಗೆ ಹಂಚಿಕೆ ಮಾಡಲು ಒಟ್ಟು ಒಂದು ಲಕ್ಷ ಸ್ವಯಂ ಸೇವಕರನ್ನು ತರಬೇತಿಗೊಳಿಸಲಾಗಿದೆ. ಹೋರಾಟ ಸಮಿತಿಯಿಂದ ಈಗಾಗಲೆ ಗುರುತಿಸಿರುವ ಹೆಚ್ಚುವರಿ ಭೂಮಿಯನ್ನು ವಶಪಡಿಸಿಕೊಳ್ಳಲು ನಿಗದಿತ ಸ್ವಯಂ ಸೇವಕರನ್ನು ಕಳುಹಿಸಲಾಗುತ್ತಿದ್ದು ಪೋಲೀಸರು-ಅವರನ್ನು ತಡೆದು ಜೈಲಿಗೆ ಕಳುಹಿಸಿದರೆ ಯಾವುದೇ ರೀತಿಯ ಜಾಮೀನನ್ನು ಪಡೆಯದೆ ಜೈಲುಗಳನ್ನು ಪ್ರವೇಶಿಸಲು ತೀರ್ಮಾನಿಸಲಾಗಿದೆ.

ಹೋರಾಟಕ್ಕೆ ರಾಜ್ಯ ಸರ್ಕಾರ ಕಿವಿಗೊಡದಿದ್ದಾಗ ಸ್ವತಃ ಭೂ ಸಂರಕ್ಷಣಾ ಸಮಿತಿಯಿಂದ 27,200 ಸ್ವಯಂ ಸೇವಕರು ಮತ್ತು 57,435 ಜನ ಪ್ರತಿಭಟನಾಕಾರರು ಸೇರಿ 14 ಜಿಲ್ಲೆಗಳಲ್ಲಿ ಈಗಾಗಲೇ ವಶಪಡಿಸಿಕೊಂಡ ಭೂಮಿಯಲ್ಲಿ ಭೂಹೀನ ದಲಿತ, ಆದಿವಾಸಿ ಮತ್ತಿತರೆ ಕುಟುಂಬಗಳು ಗುಡಿಸಲುಗಳನ್ನು ನಿರ್ಮಾಣ ಮಾಡುತ್ತಿದ್ದು ಇದನ್ನು ತಡೆಯಲು ಯಾವುದೇ ಶಕ್ತಿಗಳು ಬಂದರೂ ಅದನ್ನು ಎದುರಿಸಲು ಸ್ವಯಂ ಸೇವಕರು ಸದಾ ಸನ್ನದ್ಧರಾಗಿದ್ದು ಈ ಕುಟುಂಬಗಳಿಗೆ ರಕ್ಷಣೆಯನ್ನು ಒದಗಿಸುತ್ತಿದ್ದಾರೆ. ಕೂಡಲೇ ರಾಜ್ಯ ಸರ್ಕಾರ ಹೆಚ್ಚುವರಿ ಭೂಮಿಯನ್ನು ಭೂಹೀನರಿಗೆ ಹಂಚಿಕೆ ಮಾಡಬೇಕೆಂದು ಹೋರಾಟ ಸಮಿತಿಯು ಸಂಚಾಲಕರಾದ ಎ.ವಿಜಯರಾಘವನ್ ಮತ್ತು ಅಧ್ಯಕ್ಷರಾದ ಇ.ಪಿ.ಜಯರಾಜನ್ ಹೇಳಿದ್ದಾರೆ.

ಎಚ್.ಆರ್. ನವೀನ್‌ಕುಮಾರ್

ಜೆಟ್ 2013 ನಿರೀಕ್ಷೆ

7 ಂದ

ವಾಗಿ ಹೆಚ್ಚುತ್ತಿದೆ. ಐದು ಎಕರೆ ಗದ್ದೆಯಲ್ಲಿ ಗ ಬೆಳೆಗಳನ್ನು ಬೆಳೆಸುವ ರೈತನಿಗೆ ಳಿಗೆ 3000 ರೂ. ಕೂಡ ಸಿಗುತ್ತಿಲ್ಲ.

ರಾಜ್ಯಸಭೆಯಲ್ಲಿ ನವಂಬರ್ 30, ರಂದು ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತ ಕೃಷಿ ಮಂತ್ರಿಗಳು, ಕೃಷಿ ಖರ್ಚುಗಳು ಬೆಲೆಗಳ ಆಯೋಗ ಒದಗಿಸಿರುವ ತಿಗಳ ಆಧಾರದಲ್ಲಿ, 2010–11 ಮತ್ತು -12ರ ನಡುವೆ ಭತ್ತದ ಉತ್ಪಾದನೆಯ ಕ್ವಿಂಟಲ್‌ಗೆ 146 ರೂ.ಗಳಷ್ಟು ಹೆಚ್ಚಿತು, ಕನಿಷ್ಟ ಬೆಂಬಲ ಬೆಲೆಯಲ್ಲಿ ಹೆಚ್ಚಳ . ಮಾತ್ರ ಎಂದು ಸಂಸತ್ತಿಗೆ ತಿಳಿಸಿದರು. ರೀತಿ 2011–12 ಮತ್ತು 2012–13 ರ ದ ಗೋದಿಯ ಉತ್ಪಾದನಾ ಖರ್ಚು ಲ್‌ಗೆ 171 ರೂ. ಹೆಚ್ಚಿತು, ಆದರೆ ಕನಿಷ್ಟ ಲ ಬೆಲೆ ಕೇವಲ 65ರೂ. ಹೆಚ್ಚಿತು. ಹೀಗೆ ರೈತನಿಗೆ ಧಾರಾಳ ಬೆಂಬಲ ಬೆಲೆ ಎಂಬ ಸರಕಾರದ ದಾವೆ ಒಂದು ಕಪಟ.

ಕ್ರಿಮಿನಲ್ ನಿಲುವು

ಸರಕಾರ ಹಿಡಿದಿರುವ ಈ ಹಾದಿಯಲ್ಲಿ ಇನ್ನೂ ಒಂದು ಕ್ರಿಮಿನಲ್ ಸಂಗತಿಯಿದೆ. ಇಂದು ಸರಕಾರ 6.65 ಕೋಟಿ ಟನ್ ಆಹಾರ ಧಾನ್ಯಗಳ ದಾಸ್ತಾನಿನ ಮೇಲೆ ಕೂತಿದೆ. ಇದು ವರ್ಷದ ಈ ಅವಧಿಯಲ್ಲಿ ಬೇಕಾಗುವ ದಾಸ್ತಾನಿನ ಮೂರು ಪಟ್ಟು, ಅಕ್ಕಿ, ಗೋದಿಯ ಮಾರುಕಟ್ಟೆ ಬೆಲೆಗಳು ಏರುತ್ತಿದ್ದು ಜನಗಳ ಮೇಲೆ ವಿಪರೀತ ಹೊರೆ ಹಾಕುತ್ತಿರುವಾಗ ಸರಕಾರ ಈ ಹೆಚ್ಚುವರಿ ದಾಸ್ತಾನನ್ನು ಬಿಪಿಎಲ್ ದರಗಳಲ್ಲಿ ರಾಜ್ಯಗಳಿಗೆ ಬಿಡುಗಡೆ ಮಾಡಿದರೆ ಅದರಿಂದ ಬಹಿರಂಗ ಮಾರುಕಟ್ಟೆ ಬೆಲೆಗಳನ್ನು ಇಳಿಸ ಬಹುದಾಗಿದೆ. ಆದರೆ ಕೇಂದ್ರ ಸರಕಾರ ನಿರಾಕರಿಸುತ್ತಿದೆ. ಪ್ರತಿ ತಿಂಗಳು ಗೋದಾಮುಗಳಲ್ಲಿ ದಾಸ್ತಾನು ಮಾಡಲು ತಗಲುವ ಖರ್ಚು ಟನ್ನಿಗೆ 200ರೂ. ಆದ್ದರಿಂದ ಆಹಾರ ಸಬ್ಸಿಡಿಯ ಬಹು ಭಾಗ ಗೋದಾಮುಗಳಲ್ಲಿ ದಾಸ್ತಾನು ಮಾಡಲೇ ಹೋಗುತ್ತದೆ, ಜನರಿಗೆ ಪರಿಹಾರ ಒದಗಿಸಲಿಕ್ಕಲ್ಲ. ಈ ವರ್ಷ ಗೋದಿಯ ಇನ್ನೊಂದು ಬಂಪರ್ ಬೆಳೆಯ ನಿರೀಕ್ಷೆ ಇದೆ. ಆದರೆ ಇದರಿಂದ ಜನರಿಗೆ ಪ್ರಯೋಜನವಾಗುವ ಬದಲು ದಾಸ್ತಾನು ಖರ್ಚು ಹೆಚ್ಚಿ, ಅದರಿಂದ ಆಹಾರ ಸಬ್ಸಿಡಿಯ ಇನ್ನಷ್ಟು ಭಾಗ ಅದಕ್ಕೆ ಹೋಗಲಿದೆ.

ಈ ಬಂಪರ್ ಸುಗ್ಗಿಗಳ ನಂತರವೂ ತಲಾ ಧಾನ್ಯ ಲಭ್ಯತೆ 1990–91ರಲ್ಲಿ ಸುಧಾರಣೆಗಳು ಆರಂಭವಾಗುವ ಮೊದಲು ದಿನಕ್ಕೆ 490 ಗ್ರಾಂಗಳಿದ್ದದ್ದು 2007–09ರಲ್ಲಿ 440 ಗ್ರಾಂಗಳಿಗೆ ಇಳಿದಿದೆ. ಅಂದರೆ ಆಹಾರಧಾನ್ಯಗಳ ಉತ್ಪಾದನೆ ಹೆಚ್ಚಳ ದರ ಜನಸಂಖ್ಯೆಯ ಬೆಳವಣಿಗೆ ದರಕ್ಕೆ ಅನುಗುಣವಾಗಿಲ್ಲ. ಇದರ ಫಲಿತಾಂಶವೆಂದರೆ, 2,200 ಕ್ಯಾಲರಿ(ಭಾರತದ ಬಡತನ ಮಟ್ಟ)ಗಿಂತ ಕಡಿಮೆ ಆಹಾರ ಸೇವಿಸುವ ಜನರ ಶೇಕಡಾವಾರು ಗ್ರಾಮೀಣ ಭಾರತದಲ್ಲಿ 1993–94ರಲ್ಲಿ 58.5 ಇದ್ದದ್ದು 2009–10ರಲ್ಲಿ 75ಕ್ಕೇರಿತು. ಅದೇ ರೀತಿ ನಗರಗಳ ಕನಿಷ್ಟ ಮಟ್ಟವಾದ 2,100 ಕ್ಯಾಲರಿಗಿಂತ ಕಡಿಮೆ ಆಹಾರ ಸೇವಿಸುವವರ ಪ್ರಮಾಣ 57 ಶೇ.ದಿಂದ 73 ಶೇ.ಕ್ಕೆ ಏರಿದೆ.

ಖಂಡಿತವಾಗಿಯೂ ಇಂತಹ ಅಗಾಧ ಆಹಾರ ದಾಸ್ತಾನಿರುವಾಗ ಸರಕಾರ ದೇಶದಲ್ಲಿ ಪ್ರತಿ ಕುಟುಂಬಕ್ಕೆ (ಎಪಿಎಲ್, ಬಿಪಿಎಲ್ ಎರಡಕ್ಕೂ) 35 ಕೆಜಿ ಆಹಾರಧಾನ್ಯಗಳನ್ನು ಕೆಜಿಗೆ 2ರೂ. ದರದಲ್ಲಿ ಒದಗಿಸಿ ಸಾರ್ವತ್ರಿಕ ಆಹಾರ ಭದ್ರತೆಯನ್ನು ಸಾಧಿಸಲು ಸಾಧ್ಯವಿದೆ. ಇದಲ್ಲದೆ, ಬಜೆಟ್ ಶ್ರೀಮಂತರಿಗೆ ಹೆಚ್ಚೆಚ್ಚು ತೆರಿಗೆ ರಿಯಾಯಿತಿಗಳನ್ನು ಕೊಡುವ ಪ್ರಸಕ್ತ ಧೋರಣೆಯ ಹಾದಿಯನ್ನು ಬಿಟ್ಟು, ಅದರ ಬದಲಿಗೆ ನ್ಯಾಯವಾಗಿ ದೇಶದ ಖಜಾನೆಗೆ ಬರಬೇಕಾದ ತೆರಿಗೆಗಳನ್ನು ವಸೂಲಿ ಮಾಡಿ, ಈ ಆದಾಯವನ್ನು ಸಾರ್ವಜನಿಕ ಹೂಡಿಕೆಯ ಮಟ್ಟವನ್ನು ಗಮನಾರ್ಹವಾಗಿ ಹೆಚ್ಚಿಸಲು, ಆಮೂಲಕ ನಮಗೆ ಬಹಳ ಅಗತ್ಯವಿರುವ ಮೂಲರಚನೆಗಳನ್ನು ಕಟ್ಟಲು ಮತ್ತು ದೊಡ್ಡ ಪ್ರಮಾಣದಲ್ಲಿ ಹೊಸ ಉದ್ಯೋಗಗಳನ್ನು ಒದಗಿಸಲು ಬಳಸಬೇಕು. ಇದರಿಂದ ಆಂತರಿಕ ಬೇಡಿಕೆಯನ್ನು ವಿಸ್ತರಿಸಲು ಸಾಧ್ಯವಾಗುತ್ತದೆ, ಆ ಮೂಲಕ ಒಂದು ತಾಳಿಕೆಯ ಬೆಳವಣಿಗೆಯ ದಿಕ್ಕಿನಲ್ಲಿ ಸಾಗಲು ಸಾಧ್ಯವಾಗುತ್ತದೆ.

ಆದರೆ ಇಂತಹ ಪಲ್ಲಟ ನಡೆಯುವ ಸಂಭವ ಬಹಳ ಕಡಿಮೆ. ಜನಗಳನ್ನು ಅಣಿನೆರೆಸಿ ಸರಕಾರದ ಮೇಲೆ ಅಗಾಧ ಒತ್ತಡವನ್ನು ತರದೆ ಇದು ಸಾಧ್ಯವಾಗದು. ಮುಂಬರುವ ದಿನಗಳಲ್ಲಿ ಇದನ್ನೇ ಬಲಾಢ್ಯಗೊಳಿಸಬೇಕಾಗಿದೆ.


JANASHAKTHI KANNADA VARA PATRIKE JAN 27, 2013 Price : **Rs. 10/-** RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2013-15 Posted at MBC Bangalore GPO



ಜಿ.ಎನ್.ನಾಗರಾಜ್ 21

ಚೀನಾ ಕಮ್ಯುನಿಸ್ಟ್ ಪಕ್ಷದ ಬೆಳವಣಿಗೆ

ಮೊದಲ ಈ ಮಹಾಧಿವೇಶನದಲ್ಲಿ ಮಾವೋರವರು, ಅವರೊಂದಿಗೆ ಹುನಾನ್ ರಾಜ್ಯದ ಮತ್ತೊಬ್ಬ ಪ್ರತಿನಿಧಿ ಪಾಲ್ಗೊಂಡಿದ್ದರು. ಚೀನಾದ ವಿವಿಧ ರಾಜ್ಯಗಳನ್ನು ಇತರರು ಪ್ರತಿನಿಧಿಸಿದ್ದರು. ವಿದೇಶಗಳಲ್ಲಿ ಆರಂಭವಾಗಿದ್ದ ಗುಂಪುಗಳ ಪ್ರತಿನಿಧಿಗಳು ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಅಷ್ಟೇ ಅಲ್ಲ ಚೀನಾದಲ್ಲಿ ಮೊದಲು ಕಮ್ಯೂನಿಸ್ಟ್ ವಿಚಾರಗಳನ್ನು ಹರಡಿದ ಲಿ ದಝಾವೋ, ಚೆನ್ ದುಷಿಯು ರವರೂ ಕೂಡ ಈ ಮಹಾಧಿವೇಶನಕ್ಕೆ ಭಾಗವಹಿಸಲಾಗಿರಲಿಲ್ಲ. ಈ ಮಹಾದಿವೇಶನದ ಯಾವ ದಾಖಲೆಗಳೂ ಈಗ ಲಭ್ಯವಿಲ್ಲ.



ಆದ್ದರಿಂದ ಕಾರಣವೇನು ಎಂಬುದು ತಿಳಿದಿಲ್ಲ ಅವರ ಮೇಲೆ ಪೋಲೀಸ್ ಬೇಹುಗಾರರ ಕಣ್ಣಿದ್ದರಿಂದಲೋ ಏನೋ ಅವರು ಈ ಐತಿಹಾಸಿಕ ಅಧಿವೇಶನದಿಂದ ದೂರ ಉಳಿಯ ಬೇಕಾಯಿತು. ಆದರೂ ಅಂದು ಕಮ್ಯುನಿಸ್ಟ್ ವಿಚಾರಗಳನ್ನು ಪ್ರಚಾರ ಮಾಡಿದ ಅಪರಾಧಕ್ಕಾಗಿ ಜೈಲುವಾಸ ಅನುಭವಿಸಿದ್ದ, ಹಾಗೂ 'ನವ ಯುವ ಜನತೆ' ಎಂಬ ಪತ್ರಿಕೆಯ ಸಂಪಾದಕರಾಗಿ ಇಡೀ ಚೀನಾದ ಯುವಜನತೆಯನ್ನು ಮುನ್ನಡೆಸಿ 'ಹೀರೋ' ಆಗಿ ಗೌರವಿಸಲ್ಪಡುತ್ತಿದ್ದ ಚೆನ್ ದುಷಿಯುರವರನ್ನೇ ಅವರ ಗೈರು ಹಾಜರಿಯಲ್ಲಿಯೇ ಪ್ರಧಾನ ಕಾರ್ಯದರ್ಶಿಯಾಗಿ ಆರಿಸಲಾಯಿತು. ಈ ಮೊದಲ ಅಧಿವೇಶನದಲ್ಲಿ ಭಾಗವಹಿಸಿ ದವರೆಲ್ಲರೂ ಯುವಕರೇ. ಅವರ ಸರಾಸರಿ ವಯಸ್ಸು 26 ವರ್ಷ ಮಾತ್ರ. ಈ ಅಂಶ ಅಂದಿನ ಚರ್ಚೆಯ ಮೇಲೆ ಹಾಗೂ ಅವರ ನಿರ್ಧಾರಗಳ ಮೇಲೆ ಪರಿಣಾಮ ಬೀರುವುದು ಸಹಜವೇ.

ಎಂತಹ ಪಕ್ಷ ಬೇಕು ?

ಚೀನಾದ ಕಮ್ಯುನಿಸ್ಟ್ ಗುಂಪುಗಳು ಒಂದು ಪಕ್ಷವನ್ನು ರೂಪಿಸಿಕೊಳ್ಳಲು ಸೇರಿದ್ದ ಈ ಮೊತ್ತ ಮೊದಲ ಸಭೆಯಲ್ಲಿ ಅವರಿಗೆ ಎದುರಾದ ಮೊದಲ ಪ್ರಶ್ನೆ 'ನಮಗೆಂತಹ ಪಕ್ಷ ಬೇಕು. ಅದರ ರಚನೆ ಹೇಗಿರಬೇಕು?' ಎಂದು. ಚೀನಾದಲ್ಲಿ ಅಂದು ಇದ್ದದ್ದು ಕೇವಲ ಒಂದೇ ಉದಾಹರಣೆ. ಅದು 1911ರಲ್ಲಿ ಚೀನಾದ ಸಾಮ್ರಾಟರನ್ನು ಕಿತ್ತೊಗೆಯಲು ಶ್ರಮಿಸಿದ್ದ ಸನ್ ಯಾತ್ ಸೇನ್ ರವರು ನಾಯಕರಾಗಿದ್ದ ಕೋಮಿಂಟಾಂಗ್ ಪಕ್ಷದ್ದು. ಆದರೆ 1911ರ ಕ್ರಾಂತಿಯಾದ ಕೆಲವೇ ದಿನಗಳಲ್ಲಿ ಯುದ್ಧಕೋರ ಪಾಳೆಯಗಾರರ ಆಡುಂಬೊಲವಾಗಿದ್ದ, ಅವರ ಕಿತ್ತಾಟಗಳಿಗೆ ವೇದಿಕೆಯಾಗಿದ್ದ ಸ್ವತಃ ಸನ್ ರವರಿಗೇ ಗೌರವ ನೀಡದ ಈ ಪಕ್ಷ ಮಾದರಿಯಾಗುವುದು ಸಾಧ್ಯವೇ ಇರಲಿಲ್ಲ. ಅದೇ ಸಮಯದಲ್ಲಿ ರಷಿಯಾ ಸಾಮ್ರಾಟರೂ, ತಮ್ಮ ದೇಶದ ಹೊರಗೆ ಏಷಿಯಾದ, ಯುರೋಪಿನ ಹಲವು ಪ್ರದೇಶಗಳನ್ನು ಆಕ್ರಮಿಸಿ ಬಲಶಾಲಿಗಳಾಗಿದ್ದ ಝಾರ್ ಪ್ರಭುಗಳನ್ನು



ಕಿತ್ತೊಗೆಯುವುದರಲ್ಲಿ ಯಶಸ್ವಿಯಾಗಿತ್ತು ಕಮ್ಯುನಿಸ್ಟ್ ಪಕ್ಷ. ಅಷ್ಟೇ ಅಲ್ಲದೆ ಕಾರ್ಮಿಕರ ನೇತೃತ್ವದಲ್ಲಿ ದುಡಿಯುವವರ ಪ್ರಭುತ್ವವನ್ನು ಸ್ಥಾಪಿಸಿ ಇಡೀ ಜಗತ್ತಿನ ದುಡಿಯುವವರಿಗೆ ಸ್ಫೂರ್ತಿಯನ್ನು ತುಂಬಿತ್ತು. ಕ್ರಾಂತಿ ಮಾಡುವುದಕ್ಕೆ ನೇತೃತ್ವ ನೀಡಿದ, ಪಕ್ಷದೊಳಗೂ ದುಡಿಯುವವರಿಗೆ ಯಾವುದೇ ಅಡ್ಡಿ ಆತಂಕಗಳಿಲ್ಲದೇ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು, ವಾದ-ವಿವಾದಗಳಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡುವ ಈ ಹೊಚ್ಚ ಹೊಸ ರೀತಿಯ ಪಕ್ಷ ಒಂದು ಅದ್ಭುತವೆಂದು ತೋರಿದ್ದರಲ್ಲಿ ಆಶ್ಚರ್ಯವೇನಿಲ್ಲ. ಅಷ್ಟರಲ್ಲಿ ಕಮ್ಯುನಿಸ್ಟ್ ಅಂತರ ರಾಷ್ಟ್ರೀಯವೂ ಕೂಡ ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳಿಗೆ ಮಾದರಿಯಾದ ಪಕ್ಷದ ಮಾದರಿ ತತ್ವಗಳನ್ನು ರೂಪಿಸಿತ್ತು.

ಇದನ್ನೆಲ್ಲ ಚರ್ಚಿಸಿದ ಚೀನಾದ ಮೊದಲ ಅಧಿವೇಶನ ಲೆನಿನ್‌ರವರು ರೂಪಿಸಿದ ಕಮ್ಯುನಿಸ್ಟ್ ಪಕ್ಷದ ಮಾದರಿಯನ್ನೇ ತನ್ನ ಸಂಘಟನಾ ತತ್ವವಾಗಿ ಅಂಗೀಕರಿಸಲು ತೀರ್ಮಾನಿಸಿತು. ಚೀನಾದ ಎಲ್ಲ ಜನತೆಯನ್ನು ಒಂದೇ ಗುರಿಗಾಗಿ ಏಕೀಭವಿಸಿ ದುಡಿಯುವ ಬೃಹತ್ ಶಕ್ತಿಯಾಗಿ ರೂಪಿಸಲು ಹಾಗೂ ಕ್ರಾಂತಿಗೆ ಧೃಡವಾದ ನಾಯಕತ್ವ ನೀಡಲು ನಾಂದಿ ಹಾಡಿತು.

ಪಕ್ಷದ ಕಾರ್ಯ ವಿಧಾನ, ಕಾರ್ಯ ತಂತ್ರದ ಚರ್ಚೆಗಳು

ಪಕ್ಷದ ಸ್ವರೂಪದ ಬಗ್ಗೆ ಒಂದು ಸರಿಯಾದ ನಿರ್ಧಾರಕ್ಕೆ ಬಂದ ನಂತರ ತಕ್ಷಣ ಕೈಗೊಳ್ಳಬೇಕಾದ ಕೆಲಸಗಳೇನು? ಅನುಸರಿಸ ಬೇಕಾದ ಕಾರ್ಯ ವಿಧಾನ, ತಕ್ಷಣದ ಉದ್ದೇಶ, ಅದಕ್ಕಾಗಿ ಯಾರೊಂದಿಗೆ ಕೈಜೋಡಿಸಬೇಕು ಅಥವಾ ಬಾರದು? ಇವುಗಳ ಬಗ್ಗೆ ತೀರ್ಮಾನಗಳನ್ನು ತೆಗೆದುಕೊಳ್ಳಲು ವಿವರವಾದ ಚರ್ಚೆ ಮಾಡಲಾಯಿತು. ಒಂದು ಸರಿಯಾದ ನಿರ್ಣಯಕ್ಕೆ ಬರವುದಕ್ಕೆ ಮೊದಲು ಹಲವು ರೀತಿಯ ಅಭಿಪ್ರಾಯಗಳು ವ್ಯಕ್ತವಾಗುವಂತೆ ಅಲ್ಲಿಯೂ ಆಯಿತು.ಅದರಲ್ಲಿ ಮೂರು ತೆರನ ಅಭಿಪ್ರಾಯಗಳು ರೂಪುಗೊಂಡಿದ್ದನ್ನು ಗುರುತಿಸಬಹುದು.

ಒಂದು-ಈಗ ಚೀನಾದಲ್ಲಿ ಕಾರ್ಮಿಕ ವರ್ಗ ಇನ್ನೂ ಈಗ ತಾನೇ ರೂಪುಗೊಳ್ಳುತ್ತಿರುವ ಹೊಸ ವರ್ಗ. ಬಹಳ ಸಣ್ಣ ಸಂಖ್ಯೆ. ಜೊತೆಗೆ ಹಿಂದುಳಿದ ತಿಳುವಳಿಕೆ. ಆದ್ದರಿಂದ ಕಾರ್ಮಿಕರ ಮುಂದಳವಾಗಿ ಕಮ್ಯುನಿಸ್ಟ್ ಪಕ್ಷವನ್ನು ಈಗ ರೂಪಿಸಲಾಗುವುದಿಲ್ಲ. ಕಾರ್ಮಿಕ ವರ್ಗದ ಚಳುವಳಿಯನ್ನು ಬೆಳೆಸುವ, ಅದಕ್ಕೆ ನಾಯಕತ್ವ ಕೊಡುವ ಕಟ್ಟು ನಿಟ್ಟಾದ ಕಮ್ಯುನಿಸ್ಟ್ ಪಕ್ಷದ ಬದಲಾಗಿ ಮಾರ್ಕ್ಸ್‌ವಾದವನ್ನು ಪ್ರಚಾರ ಮಾಡುವ ಸಂಘಟನೆಯಾಗಿ ಅದನ್ನು ರೂಪಿಸಬೇಕು. ಅಧ್ಯಯನ ಶಿಬಿರ, ಶಾಲೆಗಳನ್ನು ಸಂಘಟಿಸುವುದು, ಪತ್ರಿಕೆ, ಪುಸ್ತಕಗಳ ಪ್ರಕಟಣೆ ಮುಖ್ಯ ಕೆಲಸವಾಗಬೇಕು. ಕಾನೂನು ಬದ್ಧ ಹೋರಾಟಗಳಿಗಷ್ಟೇ ಈಗ ಸೀಮಿತಗೊಳ್ಳಬೇಕು. ಇದು ಒಂದು ಗುಂಪಿನ ವಾದವಾಗಿತ್ತು. ಅದನ್ನು ಕಾನೂನು ಬದ್ಧ ಮಾರ್ಕ್ಸ್‌ವಾದಿಗಳ ಗುಂಪು ಎಂದು ಹೆಸರಿಸಲಾಗಿದೆ. ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಇಡೀ ಚೀನಾವೇ ಹೋರಾಟಕ್ಕೆ ಸಜ್ಜಾಗಿ ನಿಂತಿರುವಾಗ, ಬುದ್ಧಿ ಜೀವಿಗಳು, ವಿದ್ಯಾರ್ಥಿಗಳು ಕಾರ್ಮಿಕರ ಜೊತೆ ಇತರ ದುಡಿಯುವ ಜನತೆಯ ಜೊತೆ ಬೆರೆತು ಅವರನ್ನು ಸಂಘಟಿಸಲು ಆಗಲೇ ತೊಡಗಿರುವಾಗ ಕಮ್ಯುನಿಸ್ಟ್ ಪಕ್ಷವನ್ನು ಒಂದು ತರಬೇತಿ ಶಾಲೆಯಾಗಿ, ಪ್ರಚಾರ ತಂಡವಾಗಿ ಪರಿವರ್ತಿಸುವ ತಪ್ಪು ಯೋಚನೆಯಾಗಿತ್ತು.

ಎರಡು-ಕಾರ್ಮಿಕ ವರ್ಗದ ಸರ್ವಾಧಿಕಾರವೇ ತಕ್ಷಣದ ಗುರಿಯಾಗ ಬೇಕು. ಚೀನಾದಲ್ಲಿ ಅಂದಿನ ಯುದ್ಧಕೋರ ಪಾಳೆಯಗಾರರ ಬಿಗಿ ಹಿಡಿತದ ಸ್ಥಿತಿಯಲ್ಲಿಯೂ ಪ್ರಜಾಪ್ರಭುತ್ವವಾದೀ ಹೋರಾಟಗಳಲ್ಲಿ ಭಾಗವಹಿಸುವುದು ಮುಖ್ಯವಲ್ಲ. ಕಾನೂನು ಬದ್ಧ ಹೋರಾಟಗಳನ್ನು ಕೈ ಬಿಡಬೇಕು. ಸನ್ ಯಾತ್ ಸೇನ್ ರವರ ಪಕ್ಷದ ಜೊತೆ ಯಾವುದೇ ಸಂಬಂಧ ಬೇಡ. ಬುದ್ಧಿ ಜೀವಿಗಳನ್ನು ಪಕ್ಷಕ್ಕೆ ತೆಗೆದುಕೊಳ್ಳಬಾರದು ಎಂಬ ತಪ್ಪು ಪ್ರವೃತ್ತಿಯಾಗಿತ್ತು.

ಪ್ರಜಾಸತ್ತಾತ್ಮಕ ಹೋರಾಟಗಳನ್ನು ತೀವ್ರಗೊಳಿಸಬೇಕು. ಬುದ್ಧಿ ಜೀವಿಗಳ ಪಾತ್ರವನ್ನು ಕಡೆಗಣಿಸಬಾರದು. ಎಲ್ಲ ಜನ ಸಮುದಾಯದ ಮಹಾ ಐಕ್ಯ ಹೋರಾಟಗಳನ್ನು ಕಟ್ಟಬೇಕು ಎಂಬುದು ಇಂದಿನ ತುರ್ತು ಅಗತ್ಯವೆಂಬುದು ಮೂರನೇ ಗುಂಪಿನ ವಾದವಾಗಿತ್ತು. ಇದು ಬಹಳಷ್ಟು ಸರಿಯಾದ ವಾದವಾದರೂ ಅಲ್ಪ ಸಂಖ್ಯಾತ ವಾದವಾಗಿತ್ತು. ಮಾವೋರವರು ಈ ವಾದದ ಪ್ರತಿಪಾದಕರಾಗಿದ್ದರು.

ಬಹುಸಂಖ್ಯಾತರಾಗಿದ್ದ ಎರಡನೇ ಗುಂಪಿನ ಅಭಿಮತದಂತೆ ಕಾರ್ಮಿಕ ವರ್ಗದ ಸಂಘಟನೆಗಷ್ಟೇ ಸೀಮಿತಗೊಳ್ಳುವ,ಸನ್ ಯಾತ್ ಸೇನ್ ರವರ ಕೋಮಿಂಟಾಂಗ್ ಪಕ್ಷದ ಜೊತೆ ಸಂಬಂಧ ಬೆಳೆಸದಿರುವ, ಬುದ್ಧಿ ಜೀವಿಗಳಿಗೆ ಪಕ್ಷದ ಸದಸ್ಯತ್ವ ನೀಡದಿರುವ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಸೂಚನೆ

ಚಂದಾದಾರರು, ಏಜೆನ್ಸಿದಾರರಿಗೆ, ಜನಶಕ್ತಿಯ ಪ್ರಸಾರ, ಚಂದಾ, ಏಜೆನ್ಸಿಗಳಿಗೆ ಸಂಬಂಧಿಸಿದ ವ್ಯವಹಾರ, ವಿಚಾರಣೆ, ದೂರುಗಳು ಇತ್ಯಾದಿ ಇನ್ನೂ ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡತಕ್ಕದ್ದು.

ವಿಳಾಸ :
40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027
email : janashakthi13.admn@gmail.com
Phone : 9483966467

JANASHAKTHI KANNADA VARA PATRIKE: Printed by **G.N.NAGARAJ**, No.12, 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor **S.Y.GURUSHANTH**